ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 15 | ಸಂಚಿಕೆ 41 | 17 ಅಕ್ಟೋಬರ್ 1993 | ರೂ. 2.00

"ನಮ್ಮ ಅಧ್ಯಕ್ಷ (ಯೆಲ್ಟ್‌ಸಿನ್)ನನ್ನು ಒಂದು ಪಾಶ್ಚಿಮಾತ್ಯ ಜಾಹೀರಾತು ಸಂಸ್ಥೆ ಮಾರಾಟಕ್ಕಿಟ್ಟಿದಿಯೇನೋ ಎಂದು ಕೆಲವೊಮ್ಮೆ ನನಗನಿಸುತ್ತದೆ. ಪೆಪ್ಸಿಕೋಲಾದ ಒಂದು ಬಾಟಲಿನಂತೆ ಆತನನ್ನು ಮಾರುಕಟ್ಟೆಯಲ್ಲಿಟ್ಟಿದ್ದಾರೋ ಎಂದನಿಸುತ್ತದೆ. ಪೆಪ್ಸಿಕೋಲಾ ಎಂದು ಮಾತ್ರ ರಶ್ಯನ್ ಭಾಷೆಯಲ್ಲಿ ಬರೆದಿದ್ದಾರೆ."

-ರಶ್ಯಾದ ಒಬ್ಬ ಮನೋಶಾಸ್ತ್ರಜ್ಞ ಅಲೆಕ್ಸಾಂಡರ್ ಗೋರೋಚೋವ್

ಝೂರನನ್ನು ಮೀರಿಸಿದ ಯೆಲ್ಟ್‌ಸಿನ್ ವಿರುದ್ಧ 14-10-93ರಂದು ಪ್ರತಿಭಟನೆ

ರಶ್ಯದ ಅಧ್ಯಕ್ಷ ಬೋರಿಸ್ ಯೆಲ್ಸಿನ್ ಪ್ರಜಾಪ್ರಭುತ್ವದ ವಿರುದ್ಧ ದಬ್ಬಾಳಿಕೆಯಲ್ಲಿ ಝೂರನನ್ನೂ ಹಿಟ್ಲರನನ್ನೂ ಮೀರಿಸಿದ್ದಾನೆ. ಪ್ರಜಾಸತ್ತೆಯ ಹೆಸರಿನಲ್ಲಿ ರಚಿಯದ ಸಂಸತ್ತನ್ನೇ ವಿಸರ್ಜಿಸಿದ್ದಾನೆ. ಯೆಲ್ಸಿನ್ನರ ಈ ಕ್ರಮದ ವಿರುದ್ಧ ಸಂಸತ್ತು ತಿರುಗಿಬಿದ್ದಿದೆ. ಅದು ಬೋರಿಸ್ ಯೆಲ್ಸಿನ್‌ರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತೊಗೆಯುವ ನಿರ್ಣಯ ಕೈಗೊಂಡಿದೆ. ಸಂಸತ್ತಿನ ಉಪಾಧ್ಯಕ್ಷ ಜನರಲ್ ರುತ್‌ಸ್ಕೋಯ್ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಿದೆ. ಕಳೆದ ಎಪ್ರಿಲ್‌ನಲ್ಲಿ ನಡೆದ ಜನಮತಗಣನೆಯಲ್ಲಿ ಬೋರಿಸ್ ಯೆಲ್ಸಿನ್ ನಾಯಕತ್ವದಲ್ಲಿ ರಶ್ಯನ್ನರು ವಿಶ್ವಾಸ ವ್ಯಕ್ತಮಾಡಿದ್ದರೂ ಆರ್ಥಿಕ ಸುಧಾರಣೆ ಮತ್ತು ಅಧ್ಯಕ್ಷೀಯ ಹಾಗೂ ಸಂಸತ್ ಚುನಾವಣೆ ಕುರಿತು ಅವರ ಕೋರಿಕೆಗೆ ಬೆಂಬಲ ಸಿಗಲಿಲ್ಲ. ಸಂಸತ್ತು ಪ್ರಾಧಾನ್ಯವಾಗಿದೆ. ಸಂಸತ್ತಿನ ಆದೇಶದಂತೆ ರಶ್ಯದಲ್ಲಿ ಸರಕಾರ ನಡೆಯಬೇಕಾಗಿದೆ. ಆದರೆ ಅಧಿಕಾರ ಸ್ಥಾನ ಕಳೆದುಕೊಂಡ ಬೋರಿಸ್ ಯೆಲ್ಸಿನ್, ಅಮೇರಿಕ ಸಾಮ್ರಾಜ್ಯಶಾಹಿಯ ಹಾಗೆಯೇ ಪಾಶ್ಚಿಮಾತ್ಯ ದೇಶಗಳ ಆದೇಶದಂತೆ ರಶ್ಯದ ಸಂಸತ್ತು ಸದನದ ಮೇಲೆ ಟ್ಯಾಂಕ್‌ಗಳ ದಾಳಿ, ಗುಂಡಿನ ಕಾಳಗ ನಡೆಸಿ ನೂರಾರು ಜನ ಬಲಿತೆಗೆದುಕೊಂಡಿದ್ದಾನೆ. ಅಮಾನುಷ ದಬ್ಬಾಳಿಕೆ ನಡೆದಿದೆ. ಈ ದಬ್ಬಾಳಿಕೆಯನ್ನು ಸಾಮ್ರಾಜ್ಯಶಾಹಿ ದೇಶಗಳು, ಹಾಗೂ ಯೆಲ್ಸಿನ್ "ಪ್ರಜಾಪ್ರಭುತ್ವ" "ರಕ್ಷಣೆಯಕಾಳಗ"ವೆಂದು ಬಣ್ಣಿಸುತ್ತಿದ್ದಾರೆ.

ಸಾಮ್ರಾಜ್ಯಶಾಹಿಗಳ ಈ ಕುತಂತ್ರವನ್ನು ಬಯಲಿಗೆಳೆಯಲು ಯೆಲ್ಸಿನ್ನರ ದಬ್ಬಾಳಿಕೆಯನ್ನು ಖಂಡಿಸಿ, ರಶ್ಯದ ಜನತೆಯನ್ನು ರಕ್ಷಿಸಲು ಅಕ್ಟೋಬರ್ 14 ರಂದು ರಾಜ್ಯಾದ್ಯಂತ ಪ್ರತಿಭಟನಾ ಮೆರವಣಿಗೆ, ಸಾರ್ವಜನಿಕ ಸಭೆಗಳನ್ನು ನಡೆಸಿ ಯೆಲ್ಸಿನ್ನರ ಪ್ರತಿಕೃತಿಯನ್ನು ಸುಡಬೇಕೆಂದು ಸೆಕ್ರೆಟಾರಿಯೇಟ್ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ಕೊಟ್ಟಿದೆ. ಖಂಡನಾ ಠರಾವನ್ನು ದಿಲ್ಲಿಯಲ್ಲಿರುವ ರಶ್ಯನ್ ರಾಯಭಾರಿಗೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತದೆ.

ರಶ್ಯನ್ ಪಾರ್ಲಿಮೆಂಟು ತೆರವುಮಾಡಲು ಟ್ಯಾಂಕ್ ದಾಳಿ- ರಕ್ತಪಾತ ತುರ್ತುಸ್ಥಿತಿ ಘೋಷಣೆ- ಸಾಮ್ರಾಜ್ಯಶಾಹಿ ಬೆಂಬಲ

ಅಕ್ಟೋಬರ್ ದಂಗೆ : ಯೆಲ್ಟ್‌ಸಿನ್ ಸರ್ವಾಧಿಕಾರಿ ರಾಕ್ಷಸೀಕೃತ್ಯಕ್ಕೆ ಜನತೆಯ ಸವಾಲು

'ಸಂವಿಧಾನ' 'ಕಾನೂನುಬದ್ಧ-ಆಡಳಿತ' 'ಪ್ರಜಾಪ್ರಭುತ್ವ' ಇವೆಲ್ಲ ಬಂಡವಾಳ ಶಾಹಿಯ ನಗ್ನ ಸರ್ವಾಧಿಕಾರಕ್ಕೆತೊಡಿಸಿದ ಹೊದಿಕೆಗಳು- ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಬಗ್ಗೆ ಯಾರಿಗಾದರೂ ಅನುಮಾನವಿದ್ದರೆ ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್ ಹಾಗೂ ಆತನ ಸಾಮ್ರಾಜ್ಯಶಾಹಿ ಪೋಷಕರು ಪುನಃ ತೋರಿಸಿಕೊಟ್ಟಿದ್ದಾರೆ. ಅದೂ ಅತ್ಯಂತ ಅಭೂತಪೂರ್ವ-ಚಾರಿತ್ರಿಕ ಕುಕೃತ್ಯದಿಂದ. ಬೇರೆ ಯಾವುದೇ ದೇಶದಲ್ಲಿ ಸಂವಿಧಾನಾತ್ಮಕವಾಗಿ ಆಯ್ಕೆಯಾದ ಪಾರ್ಲಿಮೆಂಟು ಹಾಗೂ ಅದರ ಸದಸ್ಯರ ಮೇಲೆ ಈ ರೀತಿ ಹಿಂಸಾಚಾರ ಹರಿಯ ಬಿಟ್ಟ ಉದಾಹರಣೆಗಳು ಇಲ್ಲ. ಅದೇ ರೀತಿ ಇದು 'ಪ್ರಜಾಪ್ರಭುತ್ವ'ದ ರಕ್ಷಣೆಗಾಗಿ ಅಗತ್ಯ ಕ್ರಮವಾಗಿತ್ತು ಎಂದು ಹಸಿ-ಸುಳ್ಳು ಹೇಳಿದ್ದಿಲ್ಲ. ಪಾರ್ಲಿಮೆಂಟಿನ ಹಲವಾರು ಸದಸ್ಯರು, ಪಾರ್ಲಿಮೆಂಟಿನ ರಕ್ಷಣಾ ಪಡೆ ಹಾಗೂ ಮಾಸ್ಕೋದ ಸಾವಿರಾರು ಸಂಖ್ಯೆಯ ನಾಗರಿಕರು 'ಸೂಪರ್ ಪವರ್' ಸೈನ್ಯದ ಬಲ ಎದುರಿಸಿ ತೀವ್ರ ಪ್ರತಿರೋಧ ಒಡ್ಡಿದ್ದು ಅಷ್ಟೇ ಚಾರಿತ್ರಿಕ.

1989ರಲ್ಲಿ ಚೀನಾದ ತೀಯಾನ್‌ನ್ಮೆನ್ ಚೌಕದಲ್ಲಿ ಹಿಂಸಾಚಾರಕ್ಕೆ ಇಳಿದವರ ವಿರುದ್ಧ ಎಸಗಿದ ಮಿಲಿಟರಿ ಕಾರ್ಯಾಚರಣೆ ಬಗ್ಗೆ 'ನರಮೇಧ', 'ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮಾರಣ ಹೋಮ' 'ಮಾನವ ಹಕ್ಕುಗಳ ಮಾರಣ ಹೋಮ', ಎಂದೆಲ್ಲಾ ಇನ್ನೂ ಕಿರಿಚಿಕೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಹಾಗೂ ಅವರ ತುತ್ತೂರಿಗಳಾದ ಸುದ್ದಿ ಮಾಧ್ಯಮಗಳು ಯೆಲ್ಟ್‌ಸಿನ್‌ರು ನಡೆಸಿದ ಅನಗತ್ಯ ರಕ್ತಪಾತವನ್ನು ಸಮರ್ಥಿಸುವುದಕ್ಕಿಂತ ಹೆಚ್ಚಿನ ಆತ್ಮವಂಚನೆ ಇರಲಿಕ್ಕಿಲ್ಲ. ಹಾಗೆನೇ 1991 ರಲ್ಲಿ ಸೋವಿಯೆತ್ ಒಕ್ಕೂಟವನ್ನು ವಿಘಟನೆ ಮಾಡುವ ಗೋರ್ಬಚೇವ್-ಯೆಲ್ಟ್‌ಸಿನ್‌ರ ಪಿತೂರಿಯನ್ನು ತಡೆಯಲು ದೇಶಪ್ರೇಮಿಗಳು ಅಧಿಕಾರ ವಹಿಸಿಕೊಂಡದ್ದನ್ನು 'ಕ್ಷಿಪ್ರಕ್ರಾಂತಿ' 'ಸಂವಿಧಾನ ಉಲ್ಲಂಘನೆ' 'ಪ್ರಜಾಪ್ರಭುತ್ವ ವಿರೋಧಿ' ಎಂದೆಲ್ಲಾ ಅರಚಿಕೊಂಡವರ, ಈಗಿನ ಪ್ರತಿಕ್ರಿಯೆ ಗೋಸುಂಬೆತನದ ಪರಮಾವಧಿ.

ಅಧ್ಯಕ್ಷ ಯೆಲ್ಟ್‌ಸಿನ್ನರ ಸರ್ವಾಧಿಕಾರವನ್ನು ಧಿಕ್ಕರಿಸಿದ, ರಶ್ಯದ ಪಾರ್ಲಿಮೆಂಟು ಮತ್ತು ಅದಕ್ಕೆ ಸಿಕ್ಕಿದ ಜನಬೆಂಬಲವನ್ನು ರಾಜಕೀಯವಾಗಿ ಎದುರಿಸಲು ಸಾಧ್ಯವಾಗದೆ, ಮಿಲಿಟರಿ ದಮನಕ್ಕೆ ಮೊರೆಹೋಗಬೇಕಾಯಿತು. ಇದಕ್ಕಿಂತ ಮೊದಲು ಪಾರ್ಲಿಮೆಂಟನ್ನು ಮಣಿಸಲು ಎಲ್ಲಾ ರೀತಿಯ ಕೀಳುಮಟ್ಟದ ಉಪಾಯವನ್ನು ಬಳಸಲಾಯಿತು. ಹಲವಾರು ದಿನಗಳವರೆಗೆ ಪಾರ್ಲಿಮೆಂಟು ಕಟ್ಟಡಕ್ಕೆ ವಿದ್ಯುತ್, ಗ್ಯಾಸ್, ನೀರು ಸರಬರಾಜು ನಿಲ್ಲಿಸಲಾಯಿತು. ಟೆಲಿಫೋನ್, ಟೆಲೆಕ್ಸ್ ಸಂಪರ್ಕಗಳನ್ನು ಕಡಿದು ಹಾಕಲಾಯಿತು. ಪಾರ್ಲಿಮೆಂಟು ಕಟ್ಟಡದ ಸುತ್ತ ಭಾರಿ ಟ್ಯಾಂಕ್ ಪಡೆಗಳನ್ನು ಸಜ್ಜುಗೊಳಿಸಲಾಯಿತು. ಮುಳ್ಳು ಬೇಲಿ ಹಾಕಲಾಯಿತು. ಕಟ್ಟಡದ ಸುತ್ತ ಮೆಗಾಫೋನ್‌ಗಳ ಮೂಲಕ ಕರ್ಕಶವಾಗಿ ಪಾಪ್ ಸಂಗೀತ, ಯೆಲ್ಟ್‌ಸಿನ್ನರ ಭಾಷಣಗಳನ್ನು ಬಿತ್ತರಿಸಲಾಯಿತು.-ಪಾರ್ಲಿಮೆಂಟು ಒಳಗೆ ಹೋಗಲು ನಿರ್ಬಂಧ ಹೇರಲಾಯಿತು. ಈ ನಿರ್ಬಂಧ ಪತ್ರಕರ್ತರಿಗೆ, ಡಾಕ್ಟರುಗಳಿಗೆ ಇತರ ಎಲ್ಲರಿಗೂ ಅನ್ವಯವಾಗುತ್ತಿತ್ತು. ಪಾರ್ಲಿಮೆಂಟು ಸದಸ್ಯರನ್ನು ಮನೋವೈಜ್ಞಾನಿಕ ಒತ್ತಡದ ಮೂಲಕ ಶರಣಾಗತರಾಗಲು ಮಾಡಲು ಪ್ರಯತ್ನ ಮಾಡಲಾಯಿತು. ಪಾರ್ಲಿಮೆಂಟು ಸದಸ್ಯರಿಗೆ ಶರಣಾಗತರಾದರೆ ಹಲವಾರು ಆಮಿಷಗಳನ್ನು ತೋರಿಸಲಾಯಿತು. ಬೆದರಿಕೆಗಳ ಸುರಿಮಳೆ ಆಯಿತು. ಇವ್ಯಾವುದೂ ಸಂವಿಧಾನಾತ್ಮಕವಾಗಿ ಚುನಾಯಿತ ಗೊಂಡ ಪಾರ್ಲಿಮೆಂಟು ಸದಸ್ಯರ ಜತೆ ನಡಕೊಳ್ಳುವ ರೀತಿಯಲ್ಲ. ರಾಜಕೀಯವಾಗಿ ವಿರೋಧಿಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಎದುರಿಸುವ ರೀತಿಯಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಪಾರ್ಲಿಮೆಂಟಿನ ರಕ್ಷಣೆಗೆ ಟೊಂಕ ಕಟ್ಟಿದರು

ಸೆಪ್ಟೆಂಬರ್ 21ರ ಯೆಲ್ಟ್‌ಸಿನ್ನರ ಸಂವಿಧಾನ-

ಪುಟ 7ನೋಡಿ

ವೀರಪ್ಪ ಮೊಯಿಲಿ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯ ಪಿತೂರಿ

ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಶೇಕಡ 50 ರಷ್ಟು ಪ್ರವೇಶವನ್ನು ನಿರ್ಧರಿಸಲು, ಈ ಕುರಿತಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿ ಮಾಡಲು ಕರ್ನಾಟಕ ಕಾಂಗ್ರೆಸ್ ಸರ್ಕಾರವು ಹಿಂದೆ ಮುಂದೆ ನೋಡಿದುದು ಇತಿಹಾಸವಾಗಿದೆ. ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಕುಲಾಧೀಶರನ್ನು, ಇತರ ಪಟ್ಟಭದ್ರ ಹಿತಗಳನ್ನು ನೋಯಿಸುವ ಇಚ್ಛೆ ತಮಗಿಲ್ಲ ಎಂದು ವೀರಪ್ಪ ಮೊಯಿಲಿಯವರು ಹೇಳಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜ್ಯಾರಿ ಮಾಡಲು ಮುಂದಾಗಲಿಲ್ಲ. ಬದಲಿಗೆ ಅವರ ಸರ್ಕಾರವು ಮತ್ತೆ ಸುಪ್ರೀಂ ಕೋರ್ಟಿಗೆ ಹೋಯಿತು.

ಈ ಕುರಿತು ತೀರ್ಪು ಕೊಟ್ಟಿರುವ ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಕರ್ನಾಟಕ ಸರ್ಕಾರದ 'ನಿಷ್ಕ್ರಿಯತೆ'ಯನ್ನು ಕಟುವಾಗಿ ಟೀಕಿಸಿದ್ದಾರೆ. ಉನ್ನಿಕೃಷ್ಣನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ಮತ್ತು ಆದೇಶ ಇದ್ದರೂ ಸರ್ಕಾರ ಅದನ್ನು ಜಾರಿ ಮಾಡದೆ ಸ್ಪಷ್ಟೀಕರಣ ಕೇಳಿ ಅಫಿಡವಿಟ್ ಸಲ್ಲಿಸಿದ್ದು ಅದರ ನಿಷ್ಕ್ರಿಯತೆಯನ್ನು ತೋರುತ್ತದೆ ಎಂದು ಹೇಳಿರುವ ನ್ಯಾಯಮೂರ್ತಿಗಳು, ಕ್ಯಾಪಿಟೇಷನ್ ಶುಲ್ಕ ಕುರಿತ ಒಂದು ರಾಜ್ಯ ಸರ್ಕಾರದ ಸುಗ್ರೀವಾಜ್ಞೆಯ ಕಾರಣದಿಂದ ಬಂದ ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿಮಾಡುವ ತನ್ನ ಸಾಂವಿಧಾನಿಕ ಕರ್ತವ್ಯವನ್ನು ನಿರ್ವಹಿಸದೆ ಕರ್ನಾಟಕ ಸರ್ಕಾರ ಹೊಸ ನಿರ್ದೇಶನ ಬಯಸಿ ಮತ್ತೆ ನ್ಯಾಯಾಲಯಕ್ಕೆ ಬಂದಿರುವುದನ್ನು ನ್ಯಾಯಮೂರ್ತಿಗಳು ಆಕ್ಷೇಪಿಸಿದ್ದಾರೆ ಎಂದು ವರದಿಯಾಗಿದೆ.

ಖಾಸಗಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ಐವರು ನ್ಯಾಯಮೂರ್ತಿಗಳ ಪೀಠವು ಈ ಕಾಲೇಜುಗಳ ಶುಲ್ಕ ಸ್ವರೂಪವನ್ನು ನಿಗದಿಪಡಿಸಿ, ಈ ತಿಂಗಳ ಕೊನೆಯೊಳಗೆ ಎಲ್ಲ ಪ್ರವೇಶಗಳನ್ನು ಮುಗಿಸುವಂತೆ ಆದೇಶಿಸಿ ಅನಿವಾಸಿ ಭಾರತೀಯರು ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಶೇ. 5 ಕೋಟಾವನ್ನು ಭಾರತ ಸರ್ಕಾರದ ಮನವಿಯ ಮೇರೆಗೆ ಶೇ. 15 ಕ್ಕೆ ಏರಿಸಿದೆ ಎಂದೂ ವರದಿಯಾಗಿದೆ. ಸುಪ್ರೀಂ ಕೋರ್ಟು ತನ್ನ ಹಿಂದಿನ ತೀರ್ಪನ್ನು ಬದಲಿಸಿರುವುದನ್ನು ನೋಡಿದರೆ ಖಾಸಗಿ ವೃತ್ತಿ ಶಿಕ್ಷಣದಲ್ಲಿರುವ ಪಟ್ಟಭದ್ರ ಹಿತಗಳ ವರ್ಚಸ್ಸು ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳ ಮೇಲೆ ಎಷ್ಟರ ಮಟ್ಟಿಗೆ ಇರಬಹುದು ಎಂಬ ಶಂಕೆಗೆ ಎಡೆಮಾಡಿಕೊಡುತ್ತದೆ.

ಸುಪ್ರೀಂ ಕೋರ್ಟು ನಿರ್ಧರಿಸಿರುವ ಶುಲ್ಕದ ಮೊಬಲಗನ್ನು ನೋಡಿದರೆ ವೃತ್ತಿಪರ ಶಿಕ್ಷಣ ನೀತಿಯ ಶುಲ್ಕವು ಪಿ.ವಿ. ನರಸಿಂಹರಾವ್ ಸರ್ಕಾರದ ಹೊಸ ನೀತಿಗಳಿಗೆ ಅನುಗುಣವಾಗಿ ಈ ಮೊಬಲಗು ಇದೆ. ಈ ಹೊಸ ನೀತಿಯ ಪ್ರಕಾರ ವೃತ್ತಿಪರ ಶಿಕ್ಷಣವು ಜನಸಾಮಾನ್ಯರ ಮಕ್ಕಳಿಗಲ್ಲ

ಭೂಕಂಪ ಸಂತ್ರಸ್ಥರಿಗೆ ಸಹಾಯ ನೀಡಿರಿ

ಅಕ್ಟೋಬರ್ ಒಂದರಂದು ಬೆಳಗಿನ ಜಾವ ಪ್ರಳಯಸದೃಶ್ಯ ರೀತಿಯಲ್ಲಿ ತಾಂಡವವಾಡಿದ ಭೂಕಂಪದಿಂದಾಗಿ ಮಹಾರಾಷ್ಟ್ರದ ಲಾತೂರು ಮತ್ತು ಉಸ್ಮಾನ್‌ಬಾದ್ ಜಿಲ್ಲೆಗಳಲ್ಲಿ ಹಾಗೆಯೇ ಕರ್ನಾಟಕದ ಬಿಜಾಪುರ, ಗುಲ್ಬರ್ಗಾ ಬೀದರ್ ಜಿಲ್ಲೆಗಳಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ಜನ ಸಾವೀಗೀಡಾಗಿದ್ದಾರೆ. ಲಕ್ಷಾವಧಿ ಜನರು ಗಾಯಗೊಂಡಿದ್ದಾರೆ. ದನಕರುಗಳೂ ನಾಶವಾಗಿವೆ. ಮಕ್ಕಳು, ಮಹಿಳೆಯರು, ತರುಣರು, ವೃದ್ಧರು ಎಂಬ ತಾರತಮ್ಯವಿಲ್ಲದೆ ಕ್ಷಣಾರ್ಧದಲ್ಲಿ ಮಲಗಿದ್ದಲ್ಲೇ ಹೆಣವಾದ ಘಟನೆಗಳು ಇಡೀ ಮಾನವ ಕೋಟಿಯನ್ನೇ ಅಪಾರ ದುಃಖ ದುಮ್ಮಾನದಲ್ಲಿ ಮುಳುಗಿಸಿವೆ. ಇಂಥ ಭೀಕರ ಸಾವು ನೋವು ಇತ್ತೀಚೆಗಿನ ವರ್ಷಗಳಲ್ಲಿ ಸಂಭವಿಸಿರಲಿಲ್ಲ.

ಇಂಥ ಭಯಾನಕ ಭೂಕಂಪವಾಗುವುದನ್ನು ತಪ್ಪಿಸಲು ಸಾಧ್ಯತೆಯಿದ್ದರೂ, ಅದರ ಮುನ್ಸೂಚನೆಗಳು ಲಭ್ಯವಾಗಿದ್ದರೂ, ಅದರ ಕಡೆ ಶಮನ ಹರಿಸದೆ, ಪರಿಹಾರ ಹುಡುಕದಿರುವ ಕೇಂದ್ರ ಸರಕಾರವೇ ಸಾವಿರಾರು ಜನರ ಮೃತ್ಯುವಿಗೆ, ಆಸ್ತಿಪಾಸ್ತಿ ಹಾನಿಗೆ ಜವಾಬ್ದಾರಿಯಾಗಿದೆಂದು ಆರೋಪಿಸಿದರೆ ತಪ್ಪೇನಿಲ್ಲ. ವೈಜ್ಞಾನಿಕ ಸಂಸ್ಥೆಗಳು ಬೂಕಂಪದ ಪ್ರಮುಖ ಮಾಹಿತಿಗಳನ್ನು ಸಂಗ್ರಹಿಸುವುದರಲ್ಲಿ ವಿಫಲಗೊಂಡಿವೆ. ಇಬ್ಬರು ಭೂ ವಿಜ್ಞಾನಿಗಳು ಲಾತೂರು ಪ್ರದೇಶದಲ್ಲಿ ಭೂ ರಚನೆ ದೋಷವಿದೆಂಬದನ್ನು 1973 ರಲ್ಲಿಯೇ ಬಹಿರಂಗ ಪಡಿಸಿದ್ದರಂತೆ. ಇಷ್ಟು ದೊಡ್ಡ ಭೂಕಂಪ ಸಂಭವಿಸುವ ಮೂರು ತಿಂಗಳ ಅವಧಿಯಲ್ಲಿ ಲಾತೂರು ಪ್ರದೇಶದಲ್ಲಿ 125 ಬಾರಿ ಲಘು ಭೂಕಂಪವಾಗಿದೆಯಂತೆ. ಭೂಕಂಪ ಸಂಬವಿಸಬಹುದಾದ ಸಾಧ್ಯತೆ ಕುರಿತು ವೈಜ್ಞಾನಿಕ ಸಂಸ್ಥೆಗಳು ಮಹಾರಾಷ್ಟ್ರ ಸರಕಾರಕ್ಕೆ ಎಚ್ಚರಿಕೆ ನೀಡಿಲ್ಲ.

ಈಗ ದುರಂತ ಸಂಭವಿಸಿದೆ. ದುರಂತಕ್ಕೆ ತುತ್ತಾದ ಅಮಾಯಕರಿಗೆ ಎಲ್ಲ ರೀತಿಯ ಸಹಾಯ ಮಾಡುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಎಲ್ಲಾ ಜಿಲ್ಲಾ ಘಟಕಗಳೂ, ಪ್ರತಿಯೊಬ್ಬ ಪಕ್ಷದ ಸದಸ್ಯನೂ ಸಹಾನುಭೂತಿದಾರನೂ ಭೂಕಂಪ ಸಂತ್ರಸ್ಥರ ಸಹಾಯ ನಿಧಿಗೆ ಹಣ, ಬಟ್ಟೆ ಬರೆ, ದವಸ ಧಾನ್ಯಗಳನ್ನೆಲ್ಲಾ ಸಂಗ್ರಹಿಸಬೇಕೆಂದು ಸೆಕ್ರೆಟಾರಿಯೆಟ್ ಕರೆಕೊಡುತದೆ. ಬೆಂಗಳೂರು, ಗುಲ್ಬರ್ಗಾ, ಬಿಜಾಪುರಗಳಲ್ಲಿ ಈಗಾಗಲೇ ಸಹಾಯ ಸಂಗ್ರಹ ಕಾರ್ಯಪ್ರಾರಂಭವಾಗಿದೆ. ಮನೆ ಮನೆಗೆ ಹೋಗಿ ಧನಧಾನ್ಯ ಬಟ್ಟೆಬರೆಗಳನ್ನು ಸಂಗ್ರಹಿಸಲಿಕ್ಕೆ ತುರ್ತು ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತದೆ. ಸಂಗ್ರಹಿಸಿದ ಹಣ ಮತ್ತು ವಸ್ತುಗಳನ್ನು ರಾಜ್ಯ ಕೇಂದ್ರಕ್ಕೆ ಅಕ್ಟೋಬರ್ 20ರ ದೊಳಗಾಗಿ ಕಳುಹಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಕೊನೆಗೂ ಬಹು ಸದಸ್ಯ ಚುನಾವಣಾ ಆಯೋಗ:ನಿಲ್ಲದ ಶೇಷನ್ ಚೇಷ್ಠೆ

ಇನ್ನಿಬ್ಬರು ಚುನಾವಣಾ ಆಯುಕ್ತರನ್ನು ನೇಮಿಸಿ ಚುನಾವಣಾ ಆಯೋಗವನ್ನು ಕೊನೆಗೂ ಸರಕಾರ ಒಂದು ಬಹುಸದಸ್ಯ ಆಯೋಗವನ್ನಾಗಿ ಮಾಡಿದೆ. ಬಹಳ ದೀರ್ಘ ಸಮಯದಿಂದ ಸಿಪಿಐ(ಎಂ) ಇದನ್ನು ಒತ್ತಾಯಿಸಿದ್ದು, ಸತತವಾಗಿ ಈ ದಿಕ್ಕಿನಲ್ಲಿ ಯಾವುದೇ ಕ್ರಮ ಕೈಗೊಳ್ಳಲು ನಿರಾಕರಿಸುತ್ತಾ ಬಂದಿರುವ ಸರಕಾರ ಕೊನೆಗೂ ಈ ನಿರ್ಣಯ ಕೈಗೊಂಡಿದೆ. ಇದು ಸ್ವಾಗತಾರ್ಹ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಟಿ.ಎನ್. ಶೇಷನ್‌ರ ಕೃತ್ಯಗಳು ಎಲ್ಲಾ ಮಿತಿಗಳನ್ನು ಮೀರಿ ಪಕ್ಷದ ಹಿತಾಸಕ್ತಿಗಳನ್ನು ತಟ್ಟಲಾರಂಭಿಸಿದಾಗ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾಂ. ಸುರ್ಜಿತ್ ಹೇಳಿದ್ದಾರೆ. ಅವರು ದೆಹಲಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಟಿ.ಎನ್. ಶೇಷನ್‌ರ ಚೇಷ್ಟೆಗಳು ಹೊಸದಾಗಿ ನೇಮಕಗೊಂಡ ಇಬ್ಬರು ಚುನಾವಣಾ ಆಯುಕ್ತರನ್ನೂ ತಟ್ಟಿದೆ. ಅವರು ರಾಷ್ಟ್ರಪತಿಗಳಿಗೆ ದೂರು ಸಲ್ಲಿಸಬೇಕಾಗಿ ಬಂದಿದೆ. ರಾಷ್ಟ್ರಪತಿಗಳು ನೇಮಿಸಿದ ಸಂವಿಧಾನಿಕ ಅಧಿಕಾರಗಳೊಂದಿಗೆ ಅತ್ಯಂತ ಹೊಲಸು ರೀತಿಯಲ್ಲಿ ವರ್ತಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಅಕ್ಟೋಬರ್ 1 ರಂದು ಒಂದು ಸುಗ್ರೀವಾಜ್ಞೆ ಮೂಲಕ ನೇಮಕಗೊಂಡ ಹೊಸ ಚುನಾವಣಾ ಆಯುಕ್ತರುಗಳಾದ ಜಿ.ವಿ.ಜಿ. ಕೃಷ್ಣಮೂರ್ತಿ ಹಾಗೂ ಡಾ. ಎಂ.ಎಸ್. ಗಿಲ್‌ರು ಅಧಿಕಾರ ವಹಿಸಿಕೊಂಡು ಚುನಾವಣಾ ಆಯೋಗದ ಕಛೇರಿ 'ನಿರ್ವಾಚನಾ ಸದನ್'ಗೆ ಹೋದಾಗ ಅವರ ಕಚೇರಿ ಕೋಣೆಗೆ ಬೀಗ ಹಾಕಿ ಅವರನ್ನು 40 ನಿಮಿಷ ಕಾಯುವಂತೆ ಮಾಡಲಾಯಿತು. ಕೊನೆಗೂ ಕೋಣೆಯ ಬೀಗ ತೆಗೆದಾಗ ಟೆಲಿಫೋನ್ ಸಂಪರ್ಕಗಳನ್ನು ಕತ್ತರಿಸಿ ಹಾಕಿದ್ದು ಕಂಡು ಬಂತು ಎಂದು ಹೇಳಿರುವ ಜಿ.ವಿ. ಕೃಷ್ಣಮೂರ್ತಿ "ಹೀಗೆ ಮಾಡುವುದು ಅಪರಾಧ. ಶೇಷನ್ ಏನು ಮಾಡುತ್ತಿದ್ದಾರೆ. ಎಂದು ಇಡೀ ದೇಶ ತಿಳಿಯಬೇಕಾಗಿದೆ" ಎಂದು ಬೇಸರದಿಂದ ನುಡಿದಿದ್ದಾರೆ.

ವಿಜಯ ಜಾಥಾವಾಗಿಬಿಟ್ಟ ಕಾರ್ಗಿಲ್-ವಿರೋಧಿ ಜಾಥಾ

ಮುಂಬೈಯ ಗೇಟ್‌ವೇ ಆಫ್ ಇಂಡಿಯಾದಿಂದ ಭಗತ್‌ಸಿಂಗ್ ಜನ್ಮದಿನ ಸೆಪ್ಟೆಂಬರ್ 27 ರಂದು ಆರಂಭವಾದ ಡಿ.ವೈ.ಎಫ್.ಐ-ಎಸ್.ಎಫ್.ಐನ ದೇಶಪ್ರೇಮಿ ಜಾಥಾ ಗಾಂಧೀ ಜಯಂತಿ ದಿನ ಅಕ್ಟೋಬರ್ 2 ರಂದು ಮಹಾತ್ಮಾಗಾಂಧಿಯವರ ಸಾಬರಮತಿ ಆಶ್ರಮವನ್ನು ತಲುಪಿತು.

ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮಬಂಗಾಳ, ಅಸ್ಸಾಂ, ರಾಜಸ್ಥಾನ್ ಮತ್ತು ಉತ್ತರ ಪ್ರದೇಶದಿಂದ ಸುಮಾರು 2,000 ವಿದ್ಯಾರ್ಥಿ-ಯುವಜನರು ಭಾಗವಹಿಸಿದ್ದ ಈ ಜಾಥಾವನ್ನು ಆಶ್ರಮದ ಟ್ರಸ್ಟೀ ಶ್ರೀಯುತ ಅಮಿತ್‌ಭಾಯಿ ಮೋದಿ ಬರಮಾಡಿಕೊಂಡರು. ಆಶ್ರಮದ ಆವರಣದಲ್ಲಿ ನಡೆದ ಸಭೆಯಲ್ಲಿ ಅವರು ಕೋಮು ಸೌಹಾರ್ದ ಹಾಗೂ ಐಕ್ಯತೆಗೆ ಬಂದಿರುವ ಅಪಾಯದ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿದರು.

ಪಶ್ಚಿಮಬಂಗಾಳ ಸರ್ಕಾರದ ಯುವ ವ್ಯವಹಾರಗಳ ಮಂತ್ರಿ ಸುಭಾಷ್ ಚಕ್ರವರ್ತಿ, ಡಿ.ವೈ.ಎಫ್.ಐ. ಪ್ರಧಾನ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಮಹಮ್ಮದ್ ಸಲೀಮ್ ಎಸ್.ಎಫ್.ಐ ಜಂಟಿ ಕಾರ್ಯದರ್ಶಿ ಬ್ರಿತಿನ್ ಸೆನ್ ಗುಪ್ತಾ, ಭಾವನಗರದ ಮಾಜಿ ಮೇಯರ್ ಡಿ.ವೈ.ಎಫ್.ಐ ಮುಖಂಡ ಅರುಣ್ ಮೆಹ್ತಾ ಮತ್ತಿತರರು ಮಾತನಾಡಿದರು. ಜಾಥಾದ ಮುಖಂಡರು ಹಾಗೂ ಜಾಥಾದಲ್ಲಿ ಭಾಗವಹಿಸಿದವರು ಗಾಂಧೀಜಿಯ ಸ್ಮಾರಕಕ್ಕೆ ಪುಷ್ಪಹಾರ ಅರ್ಪಿಸಿದರು. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಭೂಕಂಪದಲ್ಲಿ ಮಡಿದ ಹಾಗೂ ದೇಶಾದ್ಯಂತ ಇತ್ತೀಚಿನ ತಿಂಗಳುಗಳಲ್ಲಿ ಕೋಮು ಜ್ವಾಲೆಯಲ್ಲಿ ಉರಿದು ಹೋದ ಸಾವಿರಾರು ಮುಗ್ಧ ಜನರಿಗೆ ಎರಡು ನಿಮಿಷಗಳ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಜಾಥಾ ನಗರವನ್ನು ಪ್ರವೇಶಿಸಿದಾಗ ನಗರದ ಎಲ್ಲೆಡೆ ದೊಡ್ಡ ರ್‍ಯಾಲಿಗಳು ಅದನ್ನು ಸ್ವಾಗತಿಸಿದವು. ಮೇಲೆ ಹೇಳಿದ ಮುಖಂಡರಲ್ಲದೆ ಡಾ. ಅಶೋಕ್ ಧವಳೆ, ಯುವಜನತಾ ಮುಖಂಡ ಸುನಿಲ್ ಚೆಟ್ನಿಸ್ ಈ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರು.

ಭಗತ್ ಸಿಂಗ್ ಹಾಗೂ ಮಹಾತ್ಮಾ ಗಾಂಧಿ ಯಾವುದಕ್ಕಾಗಿ ತಮ್ಮ ಜೀವವನ್ನೇ ಅರ್ಪಿಸಿದರೋ ದೇಶದ ಆ ಸಾರ್ವಭೌಮತ್ವ ಹಾಗೂ ಐಕ್ಯತೆಯ ರಕ್ಷಣೆಯ ಪಣತೊಟ್ಟು ಈ ಜಾಥಾ ಹೊರಟಿತ್ತು.

ಮುಂಬೈಯಲ್ಲಿ ಈ ಜಾಥಾ ಆರಂಭವಾಗುವ ದಿನವೇ ಕಾರ್ಗಿಲ್ ಸಂಸ್ಥೆಗೆ ಕೇಂದ್ರ ಸರಕಾರ ತನ್ನನ್ನೇ ಮಾರಿಕೊಳ್ಳಲು ಸಿದ್ಧವಾಗಿದ್ದರೂ ಅದುವರೆಗಿನ ವ್ಯಾಪಕ ಪ್ರತಿಭಟನೆಯ ಫಲವಾಗಿ ಕಾರ್ಗಿಲ್ ಸೌತ್-ಈಸ್ಟ್ ಏಶ್ಯಾ ಲಿಮಿಟೆಡ್‌ನ ವಕೀಲ ಗಾಂಧೀಧಾಮದ ಸಿವಿಲ್ ಕೋರ್ಟ್‌ನಲ್ಲಿ ಕಾರ್ಗಿಲ್ ಕಂಪೆನಿ ಕಾಂಡ್ಲಾ ಬಂದರಿನಲ್ಲಿನ ತನ್ನ ಉಪ್ಪು ತಯಾರಿಕಾ ಯೋಜನೆಯನ್ನು ಕೈಬಿಡಲು ನಿರ್ಧರಿಸಿದೆ ಎಂದು ತಿಳಿಸಿದರು. ಇದು ನಿಸ್ಸಂಶಯವಾಗಿಯೂ ಭಾರತದ ಜನತೆಯ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಕ್ಕೊಂದು ಮಹತ್ವದ ವಿಜಯವಾಗಿತ್ತು. ಆದ್ದರಿಂದ ಜಾಥಾದ ದಾರಿಯುದ್ದಕ್ಕೂ ಈ ವಿಜಯದ ಸಂದೇಶವನ್ನು ಬಿತ್ತರಿಸಲು ನಿರ್ಧರಿಸಲಾಯಿತು. ಕಾರ್ಗಿಲ್ ಪ್ರಶ್ನೆ ನರಸಿಂಹರಾವ್ ಸರಕಾರದ ದುಷ್ಟ ಆರ್ಥಿಕ ನೀತಿಗಳ ಒಂದು ಉದಾಹರಣೆಯಷ್ಟೇ ಆಗಿರುವುದರಿಂದ, ಈ ನೀತಿಯನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಬೇಕಾದುದರಿಂದ ಈ ಜಾಥಾವನ್ನು ಮುಂದುವರೆಸಲು ನಿರ್ಧರಿಸಲಾಯಿತು. ಜತೆಗೆ ದೇಶದ ಜಾತ್ಯಾತೀತತೆಯ ಹಾಗೂ ರಾಷ್ಟ್ರೀಯ ಐಕ್ಯತೆಯ ವಿರುದ್ಧ ದುಷ್ಟ ಸಂಚುಗಳಲ್ಲಿ ತೊಡಗಿರುವ ಕೋಮುವಾದಿ ಫ್ಯಾಸಿಸ್ಟ್ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಚಾರ ನಡೆಸಲು ನಿರ್ಧರಿಸಲಾಯಿತು.

ಗೇಟ್ ವೇ ಆಫ್ ಇಂಡಿಯಾದ ಬಳಿಯಿರುವ ಹುತಾತ್ಮ ಚೌಕದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಸೆ ಅಹಲ್ಯ ರಂಗ್ನೇಕರ್‌ರವರಿಂದ ಉದ್ಘಾಟನೆಯ ನಂತರ ಮುಂಬೈಯಲ್ಲಿ ಈ ಜಾಥಾ ಡಿಸೆಂಬರ್-ಜನವರಿ ತಿಂಗಳಲ್ಲಿ ಅತ್ಯಂತ ಕ್ರೂರ ಕೋಮುಗಲಭೆಗಳನ್ನು ಕಂಡ ಪ್ರದೇಶಗಳ ಮೂಲಕ ಹಾದು ಹೋದಾಗ ವಿದ್ಯಾರ್ಥಿ-ಯುವಜನರಿಂದ ಭಾರೀ ಸ್ವಾಗತ ಪಡೆಯಿತು. ಉದ್ಘಾಟನೆಯ ಸಮಯದಲ್ಲೂ ಹಾಗೂ ಜಾಥಾದ ದಾರಿಯುದ್ದಕ್ಕೂ ಭಾರಿ ಮಳೆ ಸುರಿಯುತ್ತಿದ್ದರೂ, ಗಣೇಶೋತ್ಸವಗಳ ಸಂದರ್ಭದಲ್ಲಿ ಬಾಂಬ್ ಸ್ಫೋಟಗಳಿಂದ ಭಯದ ವಾತಾವರಣವಿದ್ದರೂ ನೂರಾರು ಮಂದಿ ಈ ಜಾಥಾಗಳಿಗೆ ಸ್ವಾಗತ ನೀಡಲು ಕಾದಿದ್ದರು. ಪಕ್ಕದ ಠಾಣೆ ಜಿಲ್ಲೆಯಲ್ಲೂ ಸ್ಫೂರ್ತಿದಾಯಕ ಸ್ವಾಗತ ದೊರೆಯಿತು. ಜಾಥಾ ಗುಜರಾತ್ ರಾಜ್ಯವನ್ನು ಪ್ರವೇಶಿಸಿದ ನಂತರ ಸೂರತ್, ಬರೋಡಾದ ಮೂಲಕ ಭಾವನಗರ ಜಿಲ್ಲೆಯನ್ನು ಪ್ರವೇಶಿಸಿತು. ಅಲ್ಲಿಯೂ ಜಾಥಾಗಳಿಗೆ ಉತ್ತಮ ಸ್ಪಂದನ, ದೊರೆಯಿತು.

ಸುಮಾರು 800 ಕಿ.ಮಿ ದೂರವನ್ನು ಕ್ರಮಿಸಿದ ಈ ಜಾಥಾ ದಾರಿಯಲ್ಲಿ 150 ಕ್ಕೂ ಹೆಚ್ಚು ಸ್ವಾಗತ ಸಭೆಗಳನ್ನು ಹಾಗೂ 20 ಸಾಮೂಹಿಕ ಸಭೆಗಳ ಮೂಲಕ 10 ಲಕ್ಷಕ್ಕೂ ಹೆಚ್ಚು ಜನರಿಗೆ ಭಾರತದ ಸಾರ್ವಭೌಮತೆಗೆ ಹಾಗೂ ಐಕ್ಯತೆಗೆ ನರಸಿಂಹ ರಾವ್ ಸರಕಾರದ ನೀತಿಗಳಿಂದ ಹಾಗೂ ಕೋಮುವಾದಿ ಶಕ್ತಿಗಳಿಂದ ಬಂದಿರುವ ಅಪಾಯದ ವಿರುದ್ಧ ಹೋರಾಟವನ್ನು ಮುಂದುವರೆಸ ಬೇಕೆಂಬ ಸಂದೇಶವನ್ನು ತಲುಪಿಸಿತು.

ಕಾರ್ಗಿಲ್-ವಿರೋಧಿ ಹೋರಾಟಕ್ಕೆ ಜಯ ರಾವ್ ನೀತಿಗೊಂದು ಸೋಲು

ಪೊಲಿಟ್‌ಬ್ಯೂರೋ

ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿ ಕಾರ್ಗಿಲ್ ಗುಜರಾತಿನ ಕಾಂಡ್ಲಾ ಬಂದರಿನಲ್ಲಿ ಉಪ್ಪು ತಯಾರಿಸುವ ಕಾರ್ಖಾನೆ ಹಾಕುವ ತನ್ನ ಯೋಜನೆಯನ್ನು ಕೈಬಿಡಲು ನಿರ್ಧರಿಸಿರುವುದು ದೇಶೀ ಸಣ್ಣ ಉದ್ಯಮವಲಯದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶವನ್ನು ವಿರೋಧಿಸುವವರಿಗೆ ದೊರೆತಿರುವ ಒಂದು ವಿಜಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ಮೂಲಕ ಬಹುರಾಷ್ಟ್ರೀಯ ಮುಕ್ತ ಪ್ರವೇಶ ನೀಡುವುದನ್ನು ವಿರುದ್ಧ ಎಲ್ಲಾ ಶಕ್ತಿಗಳು ಆರಂಭಿಸಿರುವ ಹೋರಾಟ ಒಂದು ಹೆಜ್ಜೆ ಮುಂದಿಟ್ಟಿದೆ ಎಂದಿರುವ ಪಿ.ಬಿ. ಕಾರ್ಗಿಲ್ ಯೋಜನೆಯ ವಿರುದ್ಧ ಮುಂಬೈಯಿಂದ ಕಾಂಡ್ಲಾದವರೆಗೆ ಜಾಥಾವನ್ನು ನಡೆಸಿದ ಯುವಜನ- ವಿದ್ಯಾರ್ಥಿಗಳು ಹಾಗೂ ಇತರೆಲ್ಲಾ ಸಂಘಟನೆಗಳನ್ನು ಅಭಿನಂದಿಸಿದೆ. ದೇಶದ ಆರ್ಥಿಕ ಹಿತಾಸಕ್ತಿಗಳಿಗೆ ಮಾರಕವಾಗುವ ವಲಯಗಳಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಪ್ರವೇಶ ನೀಡುವ ನೀತಿಯನ್ನು ನರಸಿಂಹ ರಾವ್ ಸರ್ಕಾರ ಮರುಪರಿಶೀಲಿಸಬೇಕೆಂದು ಪಿ.ಬಿ. ಹೇಳಿದೆ.

ಶೇಷನ್ ಯಾರ ಆಟ ಆಡುತ್ತಿದ್ದಾರೆ?

ಪಿ.ಡಿ. ಸಂಪಾದಕೀಯ


ನಮ್ಮ ದೇಶದ ಮುಖ್ಯ ಚುನಾವಣಾ ಆಯುಕ್ತರಿಗೆ ವಿವಾದಗಳೆಂದರೆ ಏನೋ ಮಜಾ. ಇಂತಹ ಇತ್ತೀಚಿನ ವಿವಾದವೆಂದರೆ ದಿಲ್ಲಿಯಲ್ಲಿ ಸೇರಿದಂತೆ ಐದು ವಿಧಾನಸಭಾ ಚುನಾವಣೆಗಳಿಗೆ ದಿನಾಂಕವನ್ನು ತಿಳಿಸುವ ಅವರ ಕ್ರಮ. ನವೆಂಬರ್ 6 ರಂದು ದಿಲ್ಲಿಯಲ್ಲಿ ಆರಂಭವಾಗುವ ಇದು ನವಂಬರ್ 27 ರಂದು ಮಧ್ಯಪ್ರದೇಶದ ಚುನಾವಣೆವರೆಗೂ ಇರುತ್ತದೆ. ಮತದಾನ ನಡೆಯುವ ಈ ಇಡೀ ಮೂರು ವಾರಗಳಲ್ಲಿ ಮತಪೆಟ್ಟಿಗೆಗಳನ್ನು ಸೀಲ್ ಮಾಡಿ ಇಡಲಾಗುತ್ತದೆ. ಅವು ಮತಗಣನೆಗೆ ಕಾಯುತ್ತಾ ಇರಬೇಕು. ನವಂಬರ್ 27 ರಂದು ಮಾತ್ರವೇ ಅವನ್ನು ತೆರೆದು ಮತಗಣನೆ ಆರಂಭಿಸಲಾಗುವುದು.

ಭದ್ರತಾ ಪಡೆಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಿ ನ್ಯಾಯಯುತ ಚುನಾವಣೆ ನಡೆಸಲು ಆಡಳಿತಕ್ಕೆ ಅವಕಾಶ ಮಾಡಿಕೊಡಲು ಒಂದೋ ಎರಡೋ ದಿನಗಳಲ್ಲಿ ಚುನಾವಣೆಯನ್ನು ನಡೆಸಬೇಕಾಗುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಆದರೆ ಅದನ್ನು ಮೂರು ವಾರಗಳಿಗೆ ಹಂಚಿಬಿಟ್ಟಿದ್ದು ಸಂಬಂಧಪಟ್ಟ ರಾಜ್ಯಗಳ ರಾಜಕೀಯ ವಾತಾವರಣವನ್ನು ಕೆಡಿಸುತ್ತದಷ್ಟೆ. ಚುನಾವಣಾ ಸಮರ ಹರಿಯ ಬಿಡುವ ರಾಜಕೀಯ ಅಲ್ಲೋಲ ಕಲ್ಲೋಲ, ಅದರ ಪರಿಣಾಮಗಳ ಬಗ್ಗೆ ಎಲ್ಲರಿಗೂ ಶಂಕೆಯಿರುತ್ತದೆ. ಈ ಸಮರದಲ್ಲಿ ಪಾಲ್ಗೊಳ್ಳುವ ಪಕ್ಷಗಳು ಗುಂಪುಗಳು ತಮಗೆ ಸಾಧ್ಯವಿದ್ದ ಎಲ್ಲ ಶಕ್ತಿಗಳನ್ನು ಬಳಸುವುದರಿಂದ ಸಂಬಂಧಪಟ್ಟ ರಾಜ್ಯಗಳಲ್ಲಿ ರಾಜಕೀಯ ವಾತಾವರಣ ಬಿಸಿಯೇರಿರುತ್ತದೆ. ಇಂತಹ ವಾತಾವರಣದಲ್ಲಿ ಮೂರು ವಾರಗಳ ಕಾಲ ಕಾತುರದಿಂದ ಇರಲೇಬೇಕೆಂದರೆ ಈ ಹೋರಾಟದಲ್ಲಿ ಭಾಗವಹಿಸಿದವರ ಹಾಗೂ ಅವರನ್ನು ಬೆಂಬಲಿಸುವ ಜನಸಮೂಹಗಳ ತಾಳ್ಮೆಯ ಮಿತಿಯನ್ನು ಪರೀಕ್ಷಿಸಿದಂತೆಯೇ ಸರಿ.

ಚುನಾವಣಾ ಆಯುಕ್ತರ ಈ ನಿರ್ಣಯಕ್ಕೆ ಇನ್ನೊಂದು ಗಂಭೀರ ಆಯಾಮವೂ ಇದೆ. ಈ ರೀತಿ ಚುನಾವಣೆಗಳನ್ನು ಹಲವು ದಿನಗಳಲ್ಲಿ ಹಂಚಿ ಬಿಡುವುದರಿಂದ ಬಿಜೆಪಿಗೆ ಹೆಚ್ಚು ಲಾಭ. ಈ ಚುನಾವಣೆಯ ಗಂಭೀರ ಸ್ಪರ್ಧಾಳುಗಳಲ್ಲಿ ಬಿಜೆಪಿಯೇ ಅತ್ಯಂತ ಸಂಘಟಿತವಾದ "ಒಳ್ಳೇ" ತರಬೇತಿ ಪಡೆದ ಕಾರ್ಯಕರ್ತರಿಂದ ಕೂಡಿದ ಪಕ್ಷ, ಚುನಾವಣಾ ದಿನಗಳನ್ನು ಹಂಚಿಬಿಟ್ಟಿದ್ದರಿಂದ ತನ್ನ ಕಾರ್ಯಕರ್ತರ ಪಡೆಯನ್ನು ಒಂದು ರಾಜ್ಯದಲ್ಲಿ ಚುನಾವಣೆ ಮುಗಿದಂತೆ ಇನ್ನೊಂದೆಡೆ ಸಾಗಿಸಲು ಅದಕ್ಕೆ ಅನುಕೂಲವಾಗುತ್ತದೆ. ಚುನಾವಣೆಗಳಲ್ಲಿ ಅದು ಹಾಗೆ ಮಾಡುತ್ತದೆ. ಪ್ರಜ್ಞಾಪೂರ್ವಕವಾಗಿಯೇ ಅಥವಾ ಗೊತ್ತಿಲ್ಲದೆಯೋ ಟಿ.ಎನ್. ಶೇಷನ್ ಬಿಜೆಪಿಗೆ ಈ ಅನುಕೂಲ ಮಾಡಿಕೊಟ್ಟಿದ್ದಾರೆ.

ಇತಿಹಾಸ ಪುಟಗಳಿಂದ

ಹ್ಯಾರಿ ಪೊಲಿಟ್



ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ

2

ಕಾಂ. ಇ.ಎಂ.ಎಸ್.

ಕಮ್ಯುನಿಸ್ಟ್ ಪಕ್ಷದ 3ನೇ ಅಧಿವೇಶನವು ಮಧುರೆಯಲ್ಲಿ 1953 ರ ಡಿಸೆಂಬರ್‌ನಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಸೌಹಾರ್ದ ಪ್ರತಿನಿಧಿಯಾಗಿ ಭಾಗವಹಿಸಲು ಬಂದಿದ್ದ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದ ಹ್ಯಾರಿ ಪೊಲಿಟ್‌ರವರ ಜೊತೆಯಲ್ಲಿ ನಾವುಗಳು ಮದ್ರಾಸ್‌ನಿಂದ ಮಧುರೈಯವರೆಗೆ ಒಂದೇ ಟ್ರೈನ್‌ನಲ್ಲಿ ಬಂದೆವು. ದಾರಿ ಮಧ್ಯದಲ್ಲಿ ಅಲ್ಲಲ್ಲಿ ಅವರನ್ನು ಸ್ವಾಗತಿಸಲು ಆಯಾ ಪ್ರದೇಶದ ಸಂಗಾತಿಗಳು ಕಾರ್ಯಕ್ರಮ ಹಾಕಿದ್ದರು.

ಈ ಹಿಂದೆ ನಡೆದಂತಹ ಎರಡು ಸಮ್ಮೇಳನಗಳ ಪೈಕಿ 1943ರ ಮೊದಲ ಸಮ್ಮೇಳನಕ್ಕೆ ಸೌಹಾರ್ದ ಪ್ರತಿನಿಧಿಗಳಾರೂ ಬಂದಿರಲಿಲ್ಲ. 1948ರಲ್ಲಿ ನಡೆದ ಎರಡನೇ ಸಮ್ಮೇಳನಕ್ಕೆ ಯೂಗೋಸ್ಲಾವಿಯಾ, ಆಸ್ಟ್ರೇಲಿಯಾ, ಬರ್ಮಾ ಮುಂತಾದ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಮೂರನೇ ಅಧಿವೇಶನದಲ್ಲಿ ಮೊದಲನೆಯದಾಗಿ ಬ್ರಿಟಿಷ್ ಪ್ರತಿನಿಧಿ ಭಾಗವಹಿಸಿದ್ದರು.



ಪಕ್ಷದ ನಾಯಕತ್ವಕ್ಕೂ ಮತ್ತು ನನಗೂ ಒಟ್ಟಾರೆಯಾಗಿ ನಿಕಟಸಂಬಂಧ ಹೊಂದಿದ್ದಂತ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಮುಂದಾಳಾದ ರಜನಿ ಪಾಮೇದತ್ ಬಗ್ಗೆ ಈಗಾಗಲೇ ಬರೆಯಲಾಗಿದೆ.('ಐಕ್ಯರಂಗ' ಇದನ್ನು ಮುಂದಿನ ವಾರ ಪ್ರಕಟಿಸಲಿದೆ)

ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಪ್ರಶ್ನಾತೀತ ನಾಯಕರಾದ ಈ ಇಬ್ಬರಿಗೂ ಎರಡು ಪ್ರಧಾನ ವ್ಯತ್ಯಾಸಗಳಿದ್ದವು. ಮಧ್ಯಮ ವರ್ಗದ ಕೌಟುಂಬಿಕ ಹಿನ್ನಲೆಯಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಕಮ್ಯುನಿಸ್ಟ್ ಪಕ್ಷಕ್ಕೆ ಆಕರ್ಷಿತರಾದವರು ರಜನಿ ಪಾಮೇದತ್ ಸೈದ್ಧಾಂತಿಕ ಪ್ರಶ್ನೆಯಲ್ಲಿ ಪಕ್ಷಕ್ಕೆ ಇವರ ಕೊಡುಗೆ ಅಪಾರವಾದುದು.

ಹ್ಯಾರಿ ಪೊಲಿಟ್‌ರವರಾದರೆ, ಕಾರ್ಮಿಕ ಕುಟುಂಬದಲ್ಲಿ ಹುಟ್ಟಿ, ಕಾರ್ಮಿಕರಾಗಿಯೇ ದುಡಿದು, ಸಂಘಟಿತ ಕಾರ್ಮಿಕ ವರ್ಗದಿಂದ ಪಕ್ಷಕ್ಕೆ ಸೇರಿ ನಾಯಕರಾದವರು, ಪಕ್ಷದ ಸಂಘಟನೆಯಲ್ಲಿ ಕಾರ್ಯದರ್ಶಿಯಾಗಿ ಇವರು ಮೊದಲನೆಯವರಾಗಿದ್ದರು. ಆರ್.ಪಿ.ದತ್ ರವರಿಗೆ ಎರಡನೇ ಸ್ಥಾನವೇ ಇದ್ದದ್ದು.

ಎರಡನೇ ಮಹಾಯುದ್ಧಕ್ಕೆ ಮುಂಚೆ ನಾಜಿ ಜರ್ಮನಿ ಮತ್ತು ಸೋವಿಯತ್ ಯೂನಿಯನ್ ನಡುವೆ ಒಂದು ಒಪ್ಪಂದವಾಗಿತ್ತು. ಈ ಒಪ್ಪಂದವನ್ನು ವಿರೋಧಿಸಿ ಹ್ಯಾರಿ ಪೊಲಿಟ್‌ರವರು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷಕ್ಕೆ ರಾಜಿನಾಮೆ ಕೊಟ್ಟರು. ನಂತರ ಆ ಸ್ಥಾನದ ಜವಾಬ್ದಾರಿ ಹೊತ್ತವರು ಆರ್.ಪಿ. ದತ್‌ರವರು. ಆದರೆ ಯುದ್ಧದ ಮುಂದಿನ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿ ಬ್ರಿಟನ್ ಮತ್ತು ಸೋವಿಯತ್ ಒಕ್ಕೂಟದ ಸಖ್ಯತೆಗೆ ಒಳಪಟ್ಟಾಗ ಹ್ಯಾರಿ ಪೊಲಿಟ್‌ರವರು ಮತ್ತೆ ಬ್ರಿಟಿಶ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾದರು. ಇದರಿಂದ ಈ ಇಬ್ಬರು ಸಂಗಾತಿಗಳ ನಡುವಿರುವ ಸಂಬಂಧ ಮತ್ತು ಸ್ವಭಾವ ಗೊತ್ತಾಗುತ್ತದೆಯಲ್ಲವೆ?

ಸೋವಿಯತ್ ಒಕ್ಕೂಟಕ್ಕೆ ಎದುರಾಗಿ ನಾಜಿ ಜರ್ಮನಿಯು ಮಿಲಿಟರಿ ಆಕ್ರಮಣ ನಡೆಸಿದಾಗ ಭಾರತದ ಕಮ್ಯುನಿಸ್ಟ್ ಪಕ್ಷವು ತೆಗೆದುಕೊಂಡ ಗೊಂದಲಮಯ ನಿಲುವಿನ ಬಗ್ಗೆ ಹ್ಯಾರಿ ಪೊಲಿಟ್ ಮತ್ತು ಆರ್.ಪಿ. ದತ್‌ರವರು ಭಾರತದ ನಾಯಕತ್ವಕ್ಕೆ ಪತ್ರ ಬರೆದರು.

ಈ ಪತ್ರ ಬರುವುದಕ್ಕೆ ಮುಂಚೆ ಜೈಲಿನಲ್ಲಿ ಬಿ.ಟಿ. ರಣದಿವೆ ಮತ್ತಿತರ ಸಂಗಾತಿಗಳು ಪೊಲಿಟ್‌ಬ್ಯೂರೋಕ್ಕೆ ಪತ್ರ ಬರೆದು ಯುದ್ಧ ಪರಿಸ್ಥಿತಿಯಲ್ಲಿ ಬಂದ ಬದಲಾವಣೆಗಳ ಪರಿಣಾಮದಿಂದ ಭಾರತದ ಪಕ್ಷದ ಧೋರಣೆಯಲ್ಲಿ ಬದಲಾವಣೆ ಮಾಡಬೇಕೆಂದು ನಿರ್ದೇಶಿಸಿದ್ದರು.

ಬ್ರಿಟನ್‌ನಿಂದ ಬಂದ ಮತ್ತು ಜೈಲಿನಲ್ಲಿ ಬಂದ ಈ ಎರಡೂ ಪತ್ರಗಳ ಆಧಾರದಲ್ಲಿ ಜರ್ಮನಿಯು ಸೋವಿಯತ್ ಒಕ್ಕೂಟದ ಮೇಲೆ ನಡೆಸಿದ ಸಾಮ್ರಾಜ್ಯಶಾಹಿ ಯುದ್ಧದ ವಿರುದ್ಧ ಯುದ್ಧ (ಪೀಪಲ್ಸ್ ವಾರ್)ವಾಗಬೇಕೆಂದು ನಮ್ಮ ಪಕ್ಷವು ಅಭಿಪ್ರಾಯಪಟ್ಟಿತು.

ಈಗ ಮೂರನೇ ಅಧಿವೇಶನಕ್ಕೆ ಹ್ಯಾರಿ ಪೊಲಿಟ್‌ರವರಿಗೆ ಭಾರತದ ಪಕ್ಷದ ಧೋರಣೆಯಲ್ಲಿ ಬದಲಾವಣೆಯಾಗಬೇಕೆಂಬ ಅಭಿಪ್ರಾಯ ಹೊಂದಿದ್ದರು. ಇದನ್ನು ಅವರು ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಸ್ಪಷ್ಟವಾಗಿ ಬಹಿರಂಗ ಪಡಿಸಿದರು. ನಂತರ ಭಾಷಣ ಮಾಡಿದ ಕಾಂ. ಅಜಯ್‌ಘೋಷ್‌ರವರು ಭಾರತದ ಕಮ್ಯುನಿಸ್ಟ್ ಪಕ್ಷದ ಪರವಾಗಿ ಹ್ಯಾರಿ ಪೊಲಿಟ್‌ರವರ ಅಭಿಪ್ರಾಯವನ್ನು ಸ್ಪಷ್ಟವಾಗಿ ವಿರೋಧಿಸಿದರು.

ಭಾರತದ ವಿದೇಶಾಂಗ ನೀತಿಯಲ್ಲಿ ನೆಹರೂ ಸರ್ಕಾರ ಅಂಗೀಕರಿಸಿದ ಹೊಸ ನಿಲುವು-ಸೋವಿಯತ್ ಒಕ್ಕೂಟದ ಜೊತೆ ಸಹಕಾರ ಭಾರತದ ರಾಜಕೀಯದಲ್ಲಿ ಒಂದು ಹೊಸ ತಿರುವು ಆಗಿದೆಯೆಂದು ಹ್ಯಾರಿ ಪೊಲಿಟ್‌ರವರ ವಾದ. ಅಂತರ್‍ರಾಷ್ಟ್ರೀಯವಾಗಿ ಸಾಮ್ರಾಜ್ಯಶಾಹಿ ವಿರೋಧದ ಗುಂಪಿನಲ್ಲಿ ಭಾರತದ ಬಂಡವಾಳಿಗರ ಸರ್ಕಾರವೂ ಸೇರಿದೆಯೆಂದು, ಸರ್ಕಾರ ತೆಗೆದುಕೊಳ್ಳುವ ತೀರ್ಮಾನಗಳ ಬಗ್ಗೆ ಪಕ್ಷವು ಸಹಕಾರ ನೀಡಬೇಕೆಂಬುದು ಪೊಲಿಟ್‌ರವರ ವಾದ. ಈ ವಾದಕ್ಕೆ ಭಾರತದ ಪಕ್ಷದ ವಿರೋಧವನ್ನು ಅಜಯ್‌ಘೋಷ್‌ರವರ ಉತ್ತರದಲ್ಲಿ ಸ್ಪಷ್ಟಪಡಿಸಲಾಯ್ತು.

ಮೂರನೇ ಅಧಿವೇಶನದಲ್ಲಿ ಭಾಗವಹಿಸದೇ ಇದ್ದ ಇತರೆ ಕೆಲವು ಪಕ್ಷಗಳು ಹ್ಯಾರಿ ಪೊಲಿಟ್‌ರವರು ಮಂಡಿಸಿದ ಅಭಿಪ್ರಾಯವನ್ನೇ ಹೊಂದಿದ್ದವು. ಸೋವಿಯತ್ ಪಕ್ಷವೂ ಈ ಗುಂಪಿಗೆ ಸೇರುತ್ತದೆ. ಅಲ್ಲಿನ ಪಕ್ಷದ ರಾಜಕೀಯ ವಾರಪತ್ರಿಕೆಯೊಂದರಲ್ಲಿ ನೆಹರೂ ಸರ್ಕಾರಕ್ಕೆ ಭಾರತದ ಪಕ್ಷವು ಸಹಕಾರವನ್ನು ನೀಡಬೇಕೆಂದು ಹೇಳುವ ಲೇಖನವೊಂದನ್ನು ಪ್ರಕಟಿಸಿದರು. ಅದೇ ಪತ್ರಿಕೆಯು ಮತ್ತೊಂದು ಸಂಚಿಕೆಯಲ್ಲಿ ಅಜಯ್‌ಘೋಷ್ ನೀಡಿದ ಉತ್ತರವನ್ನು ಸಹ ಪ್ರಕಟಿಸಿತು.

ಭಾರತದ ಆಂತರಿಕ ಪರಿಸ್ಥಿತಿಯ ಬಗ್ಗೆ ಬ್ರಿಟಿಷ್ ಪಕ್ಷವಾಗಲೀ ಸೋವಿಯತ್ ಪಕ್ಷವಾಗಲೀ, (ಇತರೆ ರಾಷ್ಟ್ರಗಳ ಸಹೋದರ ಪಕ್ಷಗಳಾಗಲೀ) ನಿರ್ಧರಿಸುವುದಕ್ಕಿಂತ ಭಾರತದ ಪಕ್ಷದ ನಿಲುವು ಭಿನ್ನವಾಗಿದೆ. ಭಾರತದ ಪಕ್ಷವು ತನ್ನ ಧೋರಣೆಗಳನ್ನು ತಾನೇ ನಿರ್ಧರಿಸುತ್ತದೆ ಎಂದಲ್ಲವೇ ಇದರ್ಥ. ಅದೇ ರೀತಿ ಸೋವಿಯತ್ ಪಕ್ಷದ 20 ನೇ ಅಧಿವೇಶನದಲ್ಲಿ ಕ್ರುಶ್ಚೇವ್ ಮಾಡಿದ ಭಾಷಣಕ್ಕೆ ಒಟ್ಟಾರೆ ಒಪ್ಪಿಗೆಯನ್ನು ಸೂಚಿಸಿದರೂ, ಪ್ರಜಾಪ್ರಭುತ್ವ ದಮನಕಾರಿ ನೀತಿಯ ಸಂಪೂರ್ಣ ಹೊಣೆಯನ್ನು ಸ್ಟಾಲಿನ್ ಮೇಲೆ ಹಾಕುವ

ಪುಟ 8ನೋಡಿ

ವೃತ್ತಿ ಶಿಕ್ಷಣ ವ್ಯಾಪಾರ ತಡೆಗಟ್ಟಲು ಕಠಿಣ ಕ್ರಮಕ್ಕೆ ಆಗ್ರಹ

ರಾಜಭವನದೆದುರು ವಿದ್ಯಾರ್ಥಿಗಳ ಧರಣಿ

ತಜ್ಞರ ಸಮಿತಿಯ ವರದಿ ಆಧಾರದಲ್ಲಿ ನಿಗದಿಗೊಳಿಸಿದ ವೃತ್ತಿ ಶುಲ್ಕಗಳನ್ನು ಪುನರ್‌ವಿಮರ್ಶಿಸಿ ದುಬಾರಿಗೊಳಿಸಿರುವುದನ್ನು ವಿರೋಧಿಸಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡದಿದ್ದರೆ ಸರಕಾರವೇ ವಶಪಡಿಸಿಕೊಂಡು ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳಿಗೂ ತಕ್ಷಣ ಪ್ರವೇಶವನ್ನು ನೀಡಬೇಕೆಂದು ವಿದ್ಯಾರ್ಥಿಗಳು ಅಕ್ಟೋಬರ್ 5ರಂದು ರಾಜಭವನದ ಎದುರು ಧರಣಿ ನಡೆಸಿ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು.

ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಡಿಎಸ್‌ಎಫ್, ಡಿವೈಎಫ್‌ಐ, ಸಿಐಟಿಯು, ಜೆಎಂಎಸ್, ಡಿಎಸ್‌ಎಸ್ ಮುಂತಾದ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಪ್ರಭಾವಿ ರಾಜಕಾರಣಿಗಳು, ಮಠಾಧಿಪತಿಗಳು ಹಾಗೂ ಇವರ ಬೆಂಬಲಿತ ಶಕ್ತಿಗಳು ಸರಕಾರವೇ ಮೇಲೆ ಒತ್ತಡ ಹೇರಿ ಶುಲ್ಕಗಳನ್ನು ಇನ್ನು 4-5 ಪಟ್ಟು ಹೆಚ್ಚಿಸಬೇಕೆಂದೂ, ಹಾಗೂ ಸೀಟುಗಳ ಆಯ್ಕೆಯಲ್ಲಿ ಶೇಕಡಾ 50ರಷ್ಟು ಮಾಲಕರಿಗೆ ಬಿಟ್ಟುಕೊಡಬೇಕೆಂದೂ, ಇಲ್ಲದಿದ್ದರೆ ಕಾಲೇಜನ್ನೇ ಮುಚ್ಚಿಬಿಡುವುದಾಗಿ ಬೆದರಿಸಿ ಪ್ರವೇಶ ನಿರಾಕರಿಸುತ್ತಿದ್ದಾರೆ. ಮಾಲಿಕರ ಬೆದರಿಕೆಗೆ ಹಾಗೂ ಒತ್ತಡಕ್ಕೆ ಮಣಿದು ಸರಕಾರ ಶುಲ್ಕವನ್ನು ಇನ್ನಷ್ಟು ದುಬಾರಿಗೊಳಿಸುವುದು ಹಾಗೂ ಅವರ ಪರವಾಗಿ "ವಕಾಲತ್ತು" ವಹಿಸುವ ಮಟ್ಟಕ್ಕೆ ಇಳಿದಿದೆ. ಇದರಿಂದ ನೂರಾರು ವಿದ್ಯಾರ್ಥಿಗಳ ಸ್ಥಿತಿ "ತ್ರಿಶಂಕು" ಸ್ಥಿತಿಯಾಗಿದೆ. ಸರಕಾರ ಕೂಡಲೇ ಮಧ್ಯಪ್ರವೇಶ ಮಾಡಿ ನ್ಯಾಯಾಲಯದ ಹಾಗೂ ಶಿಕ್ಷಣದ ಗೌರವನ್ನು ಕಾಪಾಡಬೇಕೆಂದು ರಾಜ್ಯಪಾಲರಿಗೆ ನೀಡಿದ ಮನವಿಯನ್ನು ವಿವರಿಸಲಾಗಿದೆ.



ಧರಣಿಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ವಕೀಲರ ಸಂಘದ ಕೆ.ಎಸ್. ಸತ್ಯನಾರಾಯಣ, ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಪಿ. ರಾಮಚಂದ್ರರಾವ್, ಡಿವೈಎಫ್‌ಐನ ರಾಜ್ಯ ಸಹಕಾರ್ಯದರ್ಶಿ ಗೋಪಾಲಕೃಷ್ಣ ಮುಂತಾದವರು ಮಾತನಾಡಿದರು.

ರಾಜ್ಯಪಾಲರನ್ನು ಭೆಟ್ಟಿಯಾದ ನಿಯೋಗದ ನೇತೃತ್ವವನ್ನು ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಶಾಂತಾರಾಮ ನಾಯಕ್, ಡಿವೈಎಫ್‌ಐ ಸಹ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ವಹಿಸಿದ್ದರು.

ಎಸ್‌ಎಫ್‌ಐ ಎಚ್ಚರಿಕೆ : ಖಾಸಗಿ ಶಿಕ್ಷಣ ಸಂಸ್ಥೆ ಮಾಲಕರು, ಮಠಾಧಿಪತಿಗಳು ವಿದ್ಯಾರ್ಥಿಗಳಿಗೆ ನಿಗದಿಗೊಳಿಸಿದ ದಿನಾಂಕಗಳೊಳಗೆ ಪ್ರವೇಶ ನೀಡದಿದ್ದರೆ ಮಾಲಕರ ಮನೆ ಹಾಗೂ ಮಠಾಧೀಶರ ಮಠಗಳನ್ನು ಘೇರಾವ್ ಮಾಡುವುದಾಗಿ ಎಸ್‌ಎಫ್‌ಐ ರಾಜ್ಯ ಸಮಿತಿ ಎಚ್ಚರಿಸಿದೆ.

ವೃತ್ತಿ ಶಿಕ್ಷಣ ಕಾಲೇಜುಗಳಿಗೆ ಪ್ರವೇಶಗಳಿಗೆ ಒತ್ತಾಯಿಸಿ 13-11-1993ರಂದು ಧರಣಿ

ಪಕ್ಷದ ಘಟಕಗಳಿಗೆ ಕರೆ

ಕರ್ನಾಟಕದಲ್ಲಿ ವೃತ್ತಿ ಶಿಕ್ಷಣ ಕಾಲೇಜುಗಳಿಗೆ ಪ್ರವೇಶವಿಲ್ಲದೆ ಸಾವಿರಾರು ವಿದ್ಯಾರ್ಥಿಗಳು ತೀವ್ರ ಗೊಂದಲಕ್ಕೊಳಗಾಗಿದ್ದಾರೆ. ಸುಪ್ರೀಮ್ ಕೋರ್ಟಿನ ನಿರ್ಣಯದಂತೆ ವಿದ್ಯಾರ್ಥಿಗಳಿಗೆ ಕೂಡಲೇ ಪ್ರವೇಶ ಕೊಡಬೇಕು. ಯಾವ ಸಂಸ್ಥೆಗಳು ಸರಕಾರದ ಆದೇಶದಂತೆ ಪ್ರವೇಶ ನಿರಾಕರಿಸುತ್ತವೆಯೋ ಅಂಥ ಸಂಸ್ಥೆಗಳನ್ನು ಸರಣ ವಶಪಡಿಸಿಕೊಳ್ಳಬೇಕು. ಸರಕಾರ ಈ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ರಕ್ಷಣೆ ನೀಡದಿದ್ದರೆ ಅಕ್ಟೋಬರ್ 13 ರಂದು ರಾಜ್ಯಾದ್ಯಂತ ಪಕ್ಷದ ಎಲ್ಲಾ ಘಟಕಗಳು ಡೆಪ್ಯೂಟಿ ಕಮಿಶನರ್ ಆಫೀಸಿನ ಎದುರು ಧರಣಿ ನಡೆಸಿ ಪ್ರತಿಭಟನೆ ವ್ಯಕ್ತ ಮಾಡಬೇಕು. ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಬೇಕೆಂದು ಕಾರ್ಯದರ್ಶಿ ಮಂಡಳಿ ಕೇಳಿಕೊಳ್ಳುತ್ತದೆ.

ಭೂಕಂಪ ಪೀಡಿತ ಪ್ರದೇಶಗಳಿಗೆ ಸಿಪಿಐ(ಎಂ) ಮುಖಂಡರ ಭೇಟಿ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಇ.ಬಾಲಾನಂದನ್ ಹಾಗೂ ಕೇಂದ್ರ ಸಮಿತಿ ಸದಸ್ಯ ಸೈಫುದ್ದೀನ್ ಚೌಧುರಿ ಎಂ.ಪಿ. ಮಹಾರಾಷ್ಟ್ರದ ಭೂಕಂಪ ಪೀಡಿತ ಪ್ರದೇಶಗಳಿಗೆ ಅಕ್ಟೋಬರ್ 3 ರಂದು ಭೇಟಿ ನೀಡಿದರು. ಇದಕ್ಕೆ ಮೊದಲೇ ಇನ್ನಿಬ್ಬರು ಕೇಂದ್ರ ಸಮಿತಿ ಸದಸ್ಯರುಗಳಾದ ಅಹಲ್ಯಾ ರಂಗ್ನೇಕರ್ ಹಾಗೂ ಎಂ.ಎ. ಬೇಬಿ ಭೂಕಂಪ ಪೀಡಿತ ಪ್ರದೇಶವನ್ನು ತಲುಪಿದ್ದರು. ಸಿಪಿಐ(ಎಂ) ಹಾಗೂ ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳಿಗೆ ತಕ್ಷಣ ಪರಿಹಾರ ಕಾರ್ಯಾಚರಣೆಗಿಳಿಯಬೇಕೆಂದು ಕರೆ ನೀಡಲಾಗಿದೆ.

"ಭೂಕಂಪ ಪೀಡಿತರಿಗೆ" ಎಸ್.ಎಫ್.ಐ- ಡಿ.ವೈ.ಎಫ್.ಐ ರಕ್ತದಾನ

ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐನ ಕೇಂದ್ರ ಸಮಿತಿಗಳು ಇತ್ತೀಚಿನ ಭೀಕರ ಭೂಕಂಪದಲ್ಲಿ ಪೀಡಿತರಾದವರ ನೆರವಿಗೆ ಪರಿಹಾರ ಧನ ಸಂಗ್ರಹ ಹಾಗೂ ರಕ್ತದಾನ ನಡೆಸಲು ತಮ್ಮೆಲ್ಲಾ ಘಟಕಗಳಿಗೆ ಕರೆ ನೀಡಿವೆ. ಈ ಎರಡು ಸಂಘಟನೆಗಳ ಮಹಾರಾಷ್ಟ್ರ ರಾಜ್ಯ ಸಮಿತಿಗಳು ತಕ್ಷಣವೇ ವ್ಯಾಪಕ ಪ್ರಮಾಣದಲ್ಲಿ ಪರಿಹಾರ ಧನಸಂಗ್ರಹ ಹಾಗೂ ರಕ್ತದಾನ ಶಿಬಿರಗಳನ್ನು ಆರಂಭಿಸಿವೆ. ಎಸ್.ಎಫ್.ಐ. ಡಿ.ವೈ.ಎಫ್.ಐನ ಸ್ವಯಂಸೇವಕ ಪಡೆಗಳು ಪರಿಹಾರ ಕಾರ್ಯದಲ್ಲಿ ನೆರವಾಗಲು ಲಾಟೂರಿಗೆ ಧಾವಿಸಿವೆ.

ನವದೆಹಲಿಯಲ್ಲಿ ಅಕ್ಟೋಬರ್ 2 ರಂದು ಎಸ್.ಎಫ್.ಐ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ 110 ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು. ರಕ್ತದಾನ ನೀಡಿದ ಪ್ರಮುಖರೆಂದರೆ ಸಿಪಿಐ(ಎಂ) ಸಂಸತ್ ಸದಸ್ಯರಾದ ಸೈಫುದ್ದೀನ್ ಚೌಧುರಿ ಮತ್ತು ಉದ್ದಬ್ ಬರ್ಮನ್, ತ್ರಿಪುರಾದ ಮಂತ್ರಿ ಜಿತೇನ್ ಚೌಧುರಿ, ಒರಿಸ್ಸಾ ರಾಜ್ಯ ಎಸ್.ಎಫ್.ಐ ಕಾರ್ಯದರ್ಶಿ ಜನಾರ್ದನ್ ಪಡೆ, ಎಸ್.ಎಫ್.ಐ ಅಖಿಲ ಭಾರತ ಅಧ್ಯಕ್ಷ ವೈ. ವೆಂಕಟೇಶ್ವರರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಸುರೇನ್ ಚಕ್ರವರ್ತಿ

ಬೀಡಿ ಕಾರ್ಮಿಕರ ಪ್ರತಿಭಟನಾ ಚಳುವಳಿ

ಬೀಡಿ ಕೈಗಾರಿಕೆಯಲ್ಲಿ ಹೇರಳ ಲಾಭವಿದೆ, ಆದರೆ ಬೀಡಿ ಕಾರ್ಮಿಕರಿಗೆ ಮಾತ್ರ ಕಡಿಮೆ ಕೂಲಿ ಹಾಗೂ ಕಡಿಮೆ ಬೋನಸ್ ಒಂದೇ ಕೈಗಾರಿಕೆಯಲ್ಲಿ ಎರಡು ರೀತಿಯಲ್ಲಿ ಬೋನಸ್ ಕೊಡುವ ಪದ್ಧತಿ. ಇದು ಕಾಯಿದೆಗೆ ವಿರೋಧವಾಗಿದೆ. ಬೀಡಿ ಕೈಗಾರಿಕೆಯಲ್ಲಿ ಸ್ಟಾಫ್‌ನವರಿಗೆ ಹಾಗೂ ಲೇಬಲ್ ಹಾಕುವವರಿಗೆ ವಾರ್ಷಿಕ ಶೇ. 20 ಬೋನಸ್ ಕೊಡುತ್ತಿದ್ದು, ಸಾಮಾನ್ಯ ಕಾರ್ಮಿಕರಿಗೆ ಪಕ್ಷಪಾತ ಮಾಡಿ ಶೇಕಡಾ 8.33 ಮಾತ್ರ. ಇದನ್ನು ವಿರೋಧಿಸಿ ಶೇಕಡಾ 20 ರಷ್ಟು ಬೋನಸ್ ಕೈಗಾರಿಕೆಯಲ್ಲಿ ಎಲ್ಲಾ ವಿಭಾಗದ ಕಾರ್ಮಿಕರಿಗೆ ಕೊಡಬೇಕೆಂಬ ಬೇಡಿಕೆಯನ್ನು ಬೀಡಿ ಮಾಲಕರಿಗೆ ಕೊಡಲಾಗಿದೆ. ಅದಕ್ಕೆ ಏನೂ ಪ್ರತಿಕ್ರಿಯೆ ಬೀಡಿ ಮಾಲಕರಿಂದ ಬರದಿದ್ದಾಗ, ರಾಜ್ಯದ ಕಾರ್ಮಿಕ ಆಯುಕ್ತರಿಗೆ ಬೇಡಿಕೆಯ ಪಟ್ಟಿ ಕಳುಹಿಸಿ ಸಂಧಾನ ಸಭೆ ಕರೆಯುವಂತೆ ಒತ್ತಾಯಿಸಿ, ಮೂರು ನಾಲ್ಕು ಜಂಟಿ ಸಭೆ ಕರೆದಾಗಲು ಮಾಲಕರು ಬೇಡಿಕೆ ಇತ್ಯರ್ಥಗೊಳಿಸುವ ಈರಾದೆ ಇಲ್ಲವಾಗಿದೆ. ಎರಡು ಜಂಟಿ ಸಭೆಗಳಿಗೆ ಗೈರು ಹಾಜರಾಗಿ ಉದ್ಧಟತನ ತೋರಿಸಿದುದನ್ನು ರಾಜ್ಯದ ಬೀಡಿ ಕಾರ್ಮಿಕರ ಒಕ್ಕೂಟದ ಸಭೆಯಲ್ಲಿ ಖಂಡಿಸಿ ತೀವ್ರ ಪ್ರತಿಭಟನೆ ಮಾಡಲು ತೀರ್ಮಾನಿಸಿದೆ.

ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಬೀಡಿ ಕಾರ್ಮಿಕರು ಅಕ್ಟೋಬರ್ 14 ರಂದು ಬೀಡಿ ಡಿಪ್ಪೋ ಎದುರು ಸಾಮೂಹಿಕ ಪ್ರತಿಭಟನೆ ಮಾಡುವ ಸಿದ್ಧತೆ ನಡೆಸಲು ರಾಜ್ಯದ ಕಾರ್ಯಕಾರಿ ಸಮಿತಿ ಕರೆ ನೀಡಿದೆ.

ಕರ್ನಾಟಕ ರಾಜ್ಯದ ಬೀಡಿ ವರ್ಕರ್ಸ್ ಫೆಡರೇಷನ್ ಅಧ್ಯಕ್ಷರಾದ ವಿ.ಜೆ.ಕೆ. ನಾಯರ್ ಮತ್ತು ಪ್ರಧಾನ ಕಾರ್ಯದರ್ಶಿಯವರಾದ ಕೆ. ಶಂಕರ್‌ರವರು ಬೀಡಿ ಕಾರ್ಮಿಕರ ನ್ಯಾಯವಾದ ಬೋನಸ್ ಬೇಡಿಕೆಯನ್ನು ಇತ್ಯರ್ಥಗೊಳಿಸುವಂತೆ ಮಾಲಕರನ್ನು ಒತ್ತಾಯಿಸುವ ಚಳುವಳಿಯನ್ನು ತೀವ್ರಗೊಳಿಸಲು ರಾಜ್ಯದ ಬೀಡಿ ಕಾರ್ಮಿಕರಿಗೆ ಕರೆ ನೀಡಿರುತ್ತಾರೆ.

ವಾರ್ಷಿಕ ಮಹಾಸಭೆ

ಹಗರಿಕಟ್ಟೆ (ಮಂಗಳೂರು) : ಸೆಪ್ಟೆಂಬರ್ 18, 1993 ರಂದು ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲಾವುಡ್ ವರ್ಕರ್ಸ್ ಯೂನಿಯನ್ (ಸಿಐಟಿಯು)ನ 16 ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಕೆ. ಶಂಕರ್ ಅಧ್ಯಕ್ಷತೆಯಲ್ಲಿ ಹಂಗಾರಕಟ್ಟೆಯ ಮೊಬಕಳ ಚೇತನ ಪ್ರೌಢಶಾಲೆಯಲ್ಲಿ ಜರುಗಿತು. ಆರಂಭದಲ್ಲಿ ಸಂಘದ ಅಗಲಿದ ಸಂಗಾತಿಗಳಿಗೆ ಸಂತಾಪ ವ್ಯಕ್ತಪಡಿಸಿತು. ಅನಂತರ ಸಂಘದ ಕಾರ್ಯದರ್ಶಿಯವರಾದ ಎಚ್. ವಿಠಲ್‌ನವರು ಸ್ವಾಗತಿಸಿ, ಗತ ವರ್ಷದ ಚಟುವಟಿಕೆಯ ವರದಿ ಮತ್ತು ಲೆಕ್ಕಾಚಾರದ ಲಿಖಿತ ವರದಿಯನ್ನು ಸಭೆಯ ಮುಂದೆ ಮಂಡಿಸಿದರು. ವರದಿಗಳ ಬಗ್ಗೆ ಚರ್ಚೆ ನಡೆದು, ಸಂಘಟನೆಯನ್ನು ಬಲಪಡಿಸಲು ಹಾಗೂ ಮಾಲಕ ವರ್ಗದ ಕುತಂತ್ರವನ್ನು ಸೋಲಿಸಲು ನಿರ್ಣಯಿಸಲಾಯಿತು.

ಸಭೆಯನ್ನುದ್ದೇಶಿಸಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ವಿ.ಜೆ.ಕೆ. ನಾಯರ್‌ರವರು ಹೊಸ ಆರ್ಥಿಕ-ಕೈಗಾರಿಕಾ ನೀತಿ ಹಾಗೂ ಜನಸಾಮಾನ್ಯರ ಜೀವನ ಪರಿಸ್ಥಿತಿಯನ್ನು ವಿವರಿಸಿ, ಪ್ಲಾವುಡ್ ಕಾರ್ಮಿಕರು ರಾಜ್ಯದಲ್ಲಿ ಸಂಯುಕ್ತ ಹೋರಾಟಕ್ಕೆ ಸಿದ್ಧತೆ ನಡೆಸಬೇಕೆಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಕೆ. ಶಂಕರ್‌ರವರು ಮಾತನಾಡಿ, ಪ್ಲಾವುಡ್ ಕಾರ್ಮಿಕರು ರಾಜ್ಯ ಮಟ್ಟದಲ್ಲಿ ಐಕ್ಯ ಹೋರಾಟವನ್ನು ಬಲಪಡಿಸುವುದರ ಜತೆಗೆ ಇತರ ದುಡಿಯುವ ಜನ ವಿಭಾಗದವರ ಐಕ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಯ ಮಹತ್ವವನ್ನು ವಿವರಿಸಿದರು.

ಮುಂದಿನ ವರ್ಷಕ್ಕೆ ನೂತನ ಸಂಘದ ಪದಾಧಿಕಾರಿಗಳಾಗಿ ಕೆ. ಶಂಕರ್ (ಅಧ್ಯಕ್ಷ) ಶ್ರೀಧರನ್ ಮತ್ತು ಪಿ.ಡಿ. ವರ್ಗೀಸ್ (ಉಪಾಧ್ಯಕ್ಷರು) ಹೆಚ್. ವಿಠಲ್ ಪ್ರಧಾನ ಕಾರ್ಯದರ್ಶಿ, ಸಿಲ್ವೆಸ್ಟರ್ ಡಿಸೋಜ ಸಹಕಾರ್ಯದರ್ಶಿಯಾಗಿ ಶಂಕರ ಶೆಟ್ಟಿಗಾರ ಕೋಶಾಧಿಕಾರಿಯಾಗಿ ಆಯ್ಕೆಮಾಡಲಾಯಿತು.

ಕೊನೆಯಲ್ಲಿ ಕಾರ್ಯದರ್ಶಿಯವರಾದ ಹೆಚ್. ವಿಠಲ್‌ನವರು ಅಭಿನಂಧನೆ ಸಲ್ಲಿಸಿದರು.

ಗಾಂಧಿ ಜಯಂತಿಯಂದು "ಕೋಮು ಸೌಹಾರ್ದತಾ ರ್‍ಯಾಲಿ"

ದಾಂಡೇಲಿ: ಗಾಂಧಿ ಜಯಂತಿಯ ಅಂಗವಾಗಿ ಅಕ್ಟೋಬರ್ 2 ರಂದು ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳು ಎಸ್.ಎಫ್.ಐ ನೇತೃತ್ವದಲ್ಲಿ ಕೋಮು ಸೌಹಾರ್ದತಾ ರ್‍ಯಾಲಿ ನಡೆಸಿದರು. ಅಂದು ಬೆಳಿಗ್ಗೆ 10 ಗಂಟೆಗೆ ಶುರುವಾದ ರ್‍ಯಾಲಿಯ ಉದ್ಘಾಟನೆಯನ್ನು ಬಂಗೂರ ನಗರ ಡಿಗ್ರಿ ಕಾಲೇಜಿನ ಉಪನ್ಯಾಸಕರಾದ ಎಸ್.ಪಿ. ಕರಿಯಪ್ಪನವರು ನೆರವೇರಿಸಿದರು. ಈ ಸಮಾರಂಭದಲ್ಲಿ ಡಿಗ್ರಿ ಕಾಲೇಜಿನ ಆರ್. ಆರ್. ಹೆಗಡೆ, ಮಾಜಿ ನಗರಸಭಾ ಅಧ್ಯಕ್ಷರಾದ ಕಾಂ. ಟಿ.ಎಸ್. ನಾಯ್ಕ, ನಗರ ಸಭಾ ಸದಸ್ಯರಾದ ಕಾಂ. ಅಕ್ರಮ ಖಾನ್, ಆಕಾಶ್ ಕಂಪ್ಯೂಟರ್ಸ್‌ನ ಕಾಂ. ಹೇಮಂತ ನಾಯ್ಕರವರು ಹಾಜರಿದ್ದರು ಮತ್ತು ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ನಡೆದ ಮೆರವಣಿಗೆಯು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ನಡೆಯಿತು. ಇದರ ನೇತೃತ್ವದ ಸಂಚಾಲಕತ್ವವನ್ನು ಎಸ್.ಎಫ್.ಐನ ದಾಂಡೇಲಿ ಘಟಕದ ಸಂಚಾಲಕರಾದ ಕಾಂ. ತಾಬರೇಜ ಖಾನ್ ವಹಿಸಿದ್ದರು.

ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ

ಮುಂಡಗೋಡ: ದಿನಾಂಕ 22.9.1993 ರಂದು ಎಸ್.ಎಫ್.ಐ ಮುಂಡಗೋಡ ಘಟಕದವರು ಏರ್ಪಡಿಸಿದ್ದ ಪದಬಂಧ ಸ್ಪರ್ಧೆಯ ಬಹುಮಾನವನ್ನು ದಿನಾಂಕ 2.10.1993 ರಂದು ಲೋಟಸ್ ಶಿಕ್ಷಣ ಸಂಘದವರು ಏರ್ಪಡಿಸಿದ್ದ ಗಾಂಧೀ ಪ್ರತಿಮೆ ಅನಾವರಣ ಕಾರ್ಯಕ್ರಮದ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮುಂಡಗೋಡ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀಯುತ ವಿ. ಆರ್. ನಾಯ್ಕ ಅವರು ವಿತರಿಸಿದರು.

23 ಜನರು ಬಹುಮಾನಕ್ಕೆ ಆಯ್ಕೆಯಾಗಿದ್ದರು. ಚೀಟಿ ಮೂಲಕ ಆಯ್ಕೆ ಮಾಡಿದಾಗ ಆಜಾದ್ ಪ್ರೌಢ ಶಾಲೆಯ ವಿದ್ಯಾರ್ಥಿ ಥಾಮಸ್ ಡ್ಯಾನಿಯಲ್ ಪ್ರಥಮ, ಅದೇ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ದಿಲೀಪ್ ಎ. ದೊಡ್ಡಮನಿ ದ್ವಿತೀಯ ಬಹುಮಾನ ಹಾಗೂ ಚಿಗಳ್ಳಿ ಪ್ರೌಢಶಾಲೆಯ ಸುರೇಶ್ ಎನ್. ಚವ್ಹಾಣ, ತೃತೀಯ ಬಹುಮಾನಕ್ಕೆ ಆಯ್ಕೆ ಆಗಿದ್ದರು. ಇನ್ನುಳಿದ 20 ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನ ಪ್ರಮಾಣ ಪತ್ರ ನೀಡಲಾಯಿತು.

ವೇದಿಕೆಯಲ್ಲಿ ಎಂ. ಕೆ. ಗಡವಾಲೆ, ಎ.ಎನ್. ಸುಬ್ರಾಯರಾವ್ ಮರಿಯಪ್ಪ ಟಿಪಾಲದವರ ಉಪಸ್ಥಿತರಿದ್ದರು. ಶ್ರೀಮತಿ ಶಿವಲಿಂಗಮ್ಮ ಮಡ್ಡಿಯವರ ಅಧ್ಯಕ್ಷತೆ ವಹಿಸಿದ್ದರು. ಲೋಟಸ್ ಪ್ರೌಢಶಾಲೆಯ ಶಿಕ್ಷಕ ಸಿಬ್ಬಂದಿ ಕಾರ್ಯಕ್ರಮ ನಿರ್ವಹಿಸಿದರು. ನಂತರ ಮನರಂಜನಾ ಕಾರ್ಯಕ್ರಮ ನಡೆಯಿತು.

ಎಸ್.ಎಫ್.ಐ ನಿಂದ ಉಪನ್ಯಾಸಕರಿಗೆ ಬಿಳ್ಕೊಡುಗೆ ಸಮಾರಂಭ

ಮುಂಡಗೋಡ : ದಿನಾಂಕ 3-10-1993 ರಂದು ಮುಂಡಗೋಡದ ಆದಿ ಜಾಂಭವ ಪ್ರೌಢಶಾಲೆಯಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ಉಪನ್ಯಾಸಕರಾದ ಶ್ರೀ ಡಿ. ಬಸವಲಿಂಗಪ್ಪ ಅವರಿಗೆ ಬಿಳ್ಕೊಡುಗೆ ಸಮಾರಂಭವನ್ನು ಮುಂಡಗೋಡ ಎಸ್.ಎಫ್.ಐ ಘಟಕದ ಪದಾಧಿಕಾರಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳು ಸೇರಿ ಏರ್ಪಡಿಸಿದ್ದರು.

ಇತ್ತೀಚೆಗೆ ಡಿ. ಬಸವಲಿಂಗಪ್ಪನವರು ಮುಂಡಗೋಡದಿಂದ ಹೊಳಲ್ಕೆರೆ ತಾಲೂಕಿನ ಎನ್.ಕೆ. ಹಳ್ಳಿಗೆ ವರ್ಗಾವಣೆ ಜೊತೆಗೆ ಬ್ರಾಂಚು ಪಾಲರಾಗಿ ನೇಮಕಗೊಂಡಿದ್ದಾರೆ. ಮೂರು ವರ್ಷಗಳ ಕಾಲ ಅತ್ಯುತ್ತಮ ಸೇವೆಯನ್ನು ಶಿಕ್ಷಣರಂಗ ಹಾಗೂ ಸಮಾಜದಲ್ಲೂ ಸಲ್ಲಿಸಿದ್ದಾರೆ. ತಮ್ಮ ಸಾಧನೆಯ ಮೂಲಕ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಜಿ.ವಿ. ಯಾಜಿ ಅವರು ಅಧ್ಯಕ್ಷತೆಯನ್ನು ಹೆಚ್. ಫಕೀರಪ್ಪ ಅವರು ವಹಿಸಿದ್ದರು. ಸುರೇಶ್ ಕರ್ಜಗಿ ಹಾಗೂ ಎಸ್.ಎಫ್.ಐ ನ ಕೆ.ಎಫ್. ಕುಮಾರ್, ವೀರ ಭದ್ರ ಹಿರೇಮಠ, ಮಂಜುನಾಥ ಸಿದ್ದನಗೌಡರ, ಗಣಪತಿ ಪಿಲೋಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮೊದಲಿಗೆ ಸದಾನಂದ ಬೆಂಡ್ಲಗಡ್ಡಾ ಪ್ರಾರ್ಥನೆ ಹಾಡಿದರು. ಕಾರ್ಯಕ್ರಮ ನಿರ್ವಹಣೆ, ಸ್ವಾಗತ ಭಾಷಣ ಯುವರಾಜ ಪಿ.ಕಂಬಾಳಿ ಮಠ ಮಾಡಿದರು.

ಡಂಕೆಲ್ ವಿರೋಧಿ ವಿಚಾರ ಗೋಷ್ಠಿ

ಒಳಗಾನೂರು : ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಒಳಗನೂರು ಗ್ರಾಮದ ಡಿ.ವೈ.ಎಫ್.ಐ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ಘಟಕಗಳು ಡಂಕೆಲ್ ಪ್ರಸ್ತಾವದಿಂದ ಕೃಷಿ, ಗ್ರಾಮೀಣ ರೈತ ಹಾಗೂ ಕೃಷಿ ಕೂಲಿಕಾರರ ಮೇಲೆ ಆಗುವ ಪರಿಣಾಮಗಳ ಬಗ್ಗೆ ಒಂದು ವಿಚಾರಗೋಷ್ಠಿಯನ್ನು ಸೆ. 17ರಂದು ಏರ್ಪಡಿಸಿದ್ದವು.

ಬಿ. ಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ರೈತ ಸಂಘದ ರಾಜ್ಯ ನಾಯಕ ಚಂದ್ರಶೇಖರ ಬಾಳೆ ವಿಷಯ ಪ್ರಸ್ತಾವನೆ ಮಾಡಿದ್ದರು.

ಗ್ರಾಮದ ಚಿತ್ರಮಂದಿರದಲ್ಲಿ ನಡೆದ ಈ ಗೋಷ್ಠಿಯಲ್ಲಿ 250 ಕ್ಕೂ ಹೆಚ್ಚು ಮಂದಿ ರೈತರು, ಕೃಷಿಕೂಲಿಕಾರರು ಹಾಗೂ ಯುವಜನರು ಭಾಗವಹಿಸಿದ್ದರು.

ತುರ್ವಿಹಾಳದಲ್ಲಿ ಬಹಿರಂಗ ಸಭೆ

ತುರ್ವಿಹಾಳ: ಡಂಕೆಲ್ ಪ್ರಸ್ತಾಪಗಳಿಂದ ಆಗುವ ಅಪಾಯಗಳನ್ನು ವಿವರಿಸಲಿಕ್ಕಾಗಿ ರಾಯಚೂರು ಜಿಲ್ಲೆಯ ತುರ್ವಿಹಾಳದಲ್ಲಿ ಸೆ. 17 ರಂದು ಸಂಜೆ ಒಂದು ಬಹಿರಂಗ ಸಭೆಯನ್ನು ನಡೆಸಲಾಯಿತು.

500 ಕ್ಕೂ ಹೆಚ್ಚು ಮಂದಿ ಹಮಾಲರು ರೈತರು, ಯುವಜನರು, ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಸಭೆಯ ಅಧ್ಯಕ್ಷತೆಯನ್ನು ಬಿ.ಲಿಂಗಪ್ಪ ವಹಿಸಿದ್ದರು. ಚಂದ್ರಶೇಖರ ಬಾಳೆ ಮುಖ್ಯ ಭಾಷಣಕಾರರಾಗಿದ್ದರು.

ಜನತಾದಳ ಮತ್ತು ಸ್ಥಳೀಯ ರೈತ ಸಂಘ ಮುಖಂಡರು ಅತಿಥಿಗಳಾಗಿದ್ದರು.

ಮುರಳೀಧರ ಸ್ವಾಗತಿಸಿದರು. ಶೇಕ್ಷಾ ಖಾದ್ರಿ ವಂದಿಸಿದರು.

ಶೋಷಕ ವ್ಯವಸ್ಥೆಯನ್ನು ಉಳಿಸಲು ಸ್ಥಾಪಿಸಿರುವ ಪಕ್ಷ ಬಿಜೆಪಿ

1991ರಲ್ಲಿ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯರಂಗ ಸರ್ಕಾರ ಮಂಡಲ್ ವರದಿಯನ್ನು ಜಾರಿಗೆ ತರುತ್ತೇನೆ ಎಂದ ದಿನ್ನ ಹಿಂದೆಯೇ ಶ್ರೀರಾಮನ ಹೆಸರಲ್ಲಿ ರಥ ಯಾತ್ರೆ ನಡೆಸಿದ ಪಕ್ಷ 1993 ರಲ್ಲಿ ಇಡೀ ಭಾರತವನ್ನು ವ್ಯಾಪಿಸಿದ ನೂರಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳು ಭಾಗವಹಿಸಿದ 'ಭಾರತ್ ಬಂದ್'ನ ಎರಡು ದಿನಗಳ ನಂತರ "ಜನಾದೇಶ ಯಾತ್ರೆ"ಗಳನ್ನು ನಡೆಸಿತು. ರಾಜಕೀಯದಲ್ಲಿ "ಅಧರ್ಮ" ತುಂಬಲಾಗುತ್ತಿದೆ ಎಂದು ಹೇಳುತ್ತಾ. "ಭಾರತ್ ಬಂದ್"ನ್ನು ವಿರೋಧಿಸಿದ ವೈರಿ ಕಾಂಗ್ರೆಸ್(ಐ) ನಂತೆಯೇ ಇತ್ತು. ಆದರೂ ಈ ಪಕ್ಷ ತಾನು ಕಾಂಗ್ರೆಸ್(ಐ) ಗೆ ಸಮರ್ಥ ಪರ್ಯಾಯ ನೀಡಬಲ್ಲೆ ಎಂದು ಎದೆ ತಟ್ಟಿ ಕೊಳ್ಳುತ್ತಿದೆ. ಆದರೆ ಎಲ್ಲರೂ ಸ್ಪಷ್ಟವಾಗಿ ಗುರುತಿಸುವಂತೆ ಚುನಾವಣೆಯ ಹೋರಾಟದಲ್ಲಿ, ಜನಗಳ ಗಮನಸೆಳೆಯುವಲ್ಲಿ ಈ "ರಾಷ್ಟ್ರೀಯ"ಪಕ್ಷಕ್ಕೆ ಇರುವ ಏಕೈಕ ವಿಷಯ "ಶ್ರೀರಾಮ ಜನ್ಮಭೂಮಿ ವಿವಾದ"

ಭಾರತೀಯ ಜನತಾ ಪಾರ್ಟಿಯ ಸ್ವರೂಪವೇನು? 1986 ರಿಂದೀಚೆಗೆ ಅದು ನಿರ್ಭಿಡೆಯಾಗಿ, ನಾಚಿಕೆಯಿಲ್ಲದೆ ಬಹುಸಂಖ್ಯಾಕ ಹಿಂದೂ ಕೋಮುವಾದವನ್ನು ಪ್ರತಿಪಾದಿಸುತ್ತಿದೆ. ಆದರೆ ಅದೊಂದು ಕೋಮುವಾದಿ ಪಕ್ಷ ಎಂದು ಬಿಟ್ಟರೆ ಆ ಪಕ್ಷದ ಚಟುವಟಿಕೆಗಳನ್ನು, ಆ ಪಕ್ಷ ಒಡ್ಡಿರುವ ಅಪಾಯಗಳನ್ನು ಅರಿತು ಕೊಳ್ಳಲು ಸಾಧ್ಯವೇ?

ಹಾಗದರೆ ಬಿಜೆಪಿಯ ನಿಜ ಸ್ವರೂಪವೇನು? ಅದು ಯಾರನ್ನು ಪ್ರತಿನಿಧಿಸುವ ಪಕ್ಷ? ಅದರ ಗುರಿಯೇನು? ಇದನ್ನು ತಿಳಿಯಲು ಈ ಪಕ್ಷದ ಪೂರ್ವಾಪರಗಳ ಬಗ್ಗೆ ಪರಿಶೀಲಿಸಬೇಕಾಗುತ್ತದೆ.

ರಾಜಕೀಯ ನೆಲೆಯ ಹುಡುಕಾಟ

ನಮಗೆಲ್ಲಾ ಗೊತ್ತಿರುವಂತೆ ಈಗಿನ ಭಾರತೀಯ ಜನತಾಪಕ್ಷ ಅಥವಾ ಬಿಜೆಪಿ ಅಸ್ತಿತ್ವಕ್ಕೆ ಬಂದದ್ದು 1980ರಲ್ಲಿ. ಅದರ ಮೊದಲು ಮೂರು ವರ್ಷ ಕೇಂದ್ರದಲ್ಲಿ 1977ರಲ್ಲಿ ಮೊತ್ತ ಮೊದಲ ಕಾಂಗ್ರೇಸ್ಸೇತರ ಸರಕಾರ ರಚಿಸಿದ ಜನತಾಪಕ್ಷದ ಅಂಗವಾಗಿದ್ದ ಈ ಪಕ್ಷದ ಈಗಿನ ಅವತಾರ 1977-80 ರ "ಜನತಾ" ಪ್ರಯೋಗ ಅಂದರೆ ನಾಲ್ಕು ಪ್ರಮುಖ ಕಾಂಗ್ರೇಸ್ಸೇತರ ರಾಜಕೀಯ ಪಕ್ಷಗಳು ವಿಲೀನಗೊಂಡು ಕಾಂಗ್ರೆಸ್‌ಗೆ ಕೇಂದ್ರದಲ್ಲಿ ಒಂದು ಪರ್ಯಾಯ ರಚಿಸುವ ಪ್ರಯತ್ನ ಕುಸಿದು ಬಿದ್ದಾಗ ಆರಂಭವಾಯಿತು. 1977ರ ಮೊದಲ ಅವತಾರದಲ್ಲಿ ಹೆಸರು ಭಾರತೀಯ ಜನ ಸಂಘ. ಇವುಗಳನ್ನು ಸ್ಥಾಪಿಸಿದವರ ಮುಖ್ಯ ಉದ್ದೇಶ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್)ದ "ಹಿಂದೂ ರಾಷ್ಟ್ರ" ದ ವಿಚಾರವನ್ನು ರಾಜಕೀಯವಾಗಿ ಆಚರಣೆಗೆ ತರುವುದು. ಆರ್.ಎಸ್.ಎಸ್. ಬಹಳ ಹಿಂದೆ 1925 ರಲ್ಲಿ ಗಾಂಧೀಜಿ ನೇತೃತ್ವದ ಸ್ವರಾಜ್ಯ-ಖಿಲಾಫತ್ ಆಂದೋಲನ ವಿಫಲಗೊಂಡು ಅದರ ಬೆನ್ನ ಹಿಂದೆಯೇ ದೇಶದಲ್ಲಿ ಕೋಮುಗಲಭೆಗಳು ನಡೆದ ನೆಲೆಯಲ್ಲಿ ಸ್ಥಾಪನೆಗೊಂಡಿತು. ಭಾರತ ಬ್ರಿಟಿಷರಿಂದ ಏಕೆ ಸ್ವಾತಂತ್ರ್ಯ ಗಳಿಸಬೇಕು? ಏಕೆಂದರೆ ಆ ಮೂಲಕ ವಸಾಹತುಶಾಹಿ ಕೊನೆಗೊಳಿಸಿ, ಪ್ರಜಾಪ್ರಭುತ್ವ ಸ್ಥಾಪಿಸಿ ಆಧುನಿಕ ಯುಗದತ್ತ, ಪ್ರಗತಿಯತ್ತ ಸಾಗಬೇಕು ಎಂಬ ವಿಚಾರದೊಂದಿಗೇ ಭಾರತ ಬ್ರಿಟಿಷರಿಂದ ಮುಕ್ತವಾಗಿ ತನ್ನ ಪ್ರಾಚೀನ ಕಾಲಕ್ಕೆ ಹಿಂತಿರುಗಬೇಕು ಎಂಬ ವಿಚಾರವೂ ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಆರಂಭದಿಂದಲೂ ಇತ್ತು. ಆದರೆ ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳುವ ಬ್ರಿಟಿಷರ ಕುತಂತ್ರವನ್ನು ಎದುರಿಸಬೇಕಾದರೆ, ಸ್ವಾತಂತ್ರ್ಯ ಆಂದೋಲನ ಯಶಸ್ವಿಯಾಗಬೇಕಾದರೆ ದೇಶದ ಎಲ್ಲಾ ಜನವಿಭಾಗಗಳನ್ನು ರೈತರನ್ನು, ಕಾರ್ಮಿಕರನ್ನು, ಮಧ್ಯಮವರ್ಗದವರನ್ನು ಎಲ್ಲಾ ಭಾಷೆಗಳ, ಎಲ್ಲಾ ಧರ್ಮಗಳ ಜನರನ್ನು ಒಳಗೊಳ್ಳುವುದು ಅಗತ್ಯ, ಪ್ರಾಚೀನ ಭಾರತದ ಕೆಲವು ನಕರಾತ್ಮಕ ಅಂಶಗಳನ್ನು ಅಸ್ಪೃಶ್ಯತೆ, ಜಾತೀಯತೆ, ಮತಾಂಧತೆ ಇತ್ಯಾದಿಗಳನ್ನು ತ್ಯಜಿಸುವುದು ಅಗತ್ಯ ಎಂದು ಆಂದೋಲನದ ಮುಖಂಡರ ಒಂದು ವಿಭಾಗ ಅನುಭವದಿಂದ ಕಂಡು ಕೊಂಡರು. ಆದ್ದರಿಂದ ಗಾಂಧೀಜಿ ನೇತೃತ್ವದಲ್ಲಿ ಕಾಂಗ್ರೆಸ್ ಹಿಂದೂ-ಮುಸಲ್ಮಾನ ಐಕ್ಯತೆಯ ಮೇಲೆ ಒತ್ತು ನೀಡಿತು. ಆದರೆ ಇನ್ನೊಂದು ವಿಭಾಗಕ್ಕೆ ಅದು ಸರಿಬರದೆ ಕೆಲವು ಹಿಂದೂ ಮುಖಂಡರು ಸಾವರ್‌ಕರ್ ನೇತೃತ್ವದ ಹಿಂದೂ ಮಹಾಸಭಾ ಮತ್ತು ಹೆಡ್ಗೆವಾರ್ ನೇತೃತ್ವದ ಆರ್.ಎಸ್.ಎಸ್. ಮೂಲಕ ಸಕ್ರಿಯರಾದರು. ಹಿಂದೂಗಳೇ ಒಂದು ರಾಷ್ಟ್ರ ಎಂಬ ಮತೀಯ ಆಧಾರದ ವಿಚಾರವನ್ನು ಮುಂದಿಟ್ಟರು (ಮಹಮ್ಮದಾಲಿ ಜಿನ್ನಾರವರು ಮತೀಯ ಆಧಾರದ ಮೇಲೆ ಪಾಕಿಸ್ತಾನದ ಬೇಡಿಕೆಯನ್ನು ಮುಂದಿಟ್ಟು ಪ್ರತ್ಯೇಕತಾವಾದೀ ಅಖಂಡ ಭಾರತವನ್ನು ಒಡೆದವರು ಎನಿಸಿಕೊಳ್ಳುವುದಕ್ಕಿಂತ ಎಷ್ಟೋ ಮೊದಲು ಇದೇ ಸ್ವರೂಪದ ವಿಚಾರವನ್ನು ಕೆಲವು ಹಿಂದೂ ಮುಖಂಡರು ಮುಂದಿಟ್ಟರು ಎಂಬುದನ್ನು ಇಲ್ಲಿ ಗಮನಿಸಬೇಕು.)

ಆದರೆ 'ಹಿಂದೂ ರಾಷ್ಟ್ರ' ವನ್ನು ಪ್ರತಿಪಾದಿಸುತ್ತಿದ್ದ ಈ ಎರಡು ಸಂಘಟನೆಗಳ ನಡುವೆಯೇ ತಿಕ್ಕಾಟ ಆರಂಭದಿಂದಲೇ ನಡೆದಿತ್ತು. ಆದ್ದರಿಂದ ದೇಶ ಸ್ವತಂತ್ರವಾದ ಕೂಡಲೇ ತಮ್ಮ ಗುರಿಯನ್ನು ರಾಜಕೀಯವಾಗಿ ಈಡೇರಿಸಲು ಹಿಂದೂ ಮಹಾಸಭಾವನ್ನು ಆರಿಸಿಕೊಳ್ಳಬೇಕೇ, ಕಾಂಗ್ರೆಸನ್ನು ಆರಿಸಿಕೊಳ್ಳಬೇಕೇ ಅಥವಾ ಹೊಸದೊಂದು ರಾಜಕೀಯ ಪಕ್ಷವನ್ನೇ ಸ್ಥಾಪಿಸಬೇಕೇ ಎಂಬ ದ್ವಂದ್ವಕ್ಕೆ ಒಳಗಾದ ಆರ್.ಎಸ್.ಎಸ್‌ನ ಮುಖಂಡರು ಅಂತಿಮವಾಗಿ ಹಿಂದೂ ಮಹಾಸಭಾವನ್ನು ಬದಿಗೊತ್ತಿ ಆಗ ನೆಹರೂರವರ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದ ಶ್ಯಾಮ ಪ್ರಸಾದ್ ಮುಖರ್ಜಿಯವರ ನೇತೃತ್ವದಲ್ಲಿ 'ಜನಸಂಘ' ಕ್ಕೆ ಜನ್ಮ ನೀಡಿದರು. ಆದರೂ ಸ್ವಾತಂತ್ರ್ಯದ ಮೊದಲು ಹಿಂದೂ ಮಹಾಸಭಾ ಹಾಗೂ ಆರ್.ಎಸ್.ಎಸ್ ನಡುವೆ ಇದ್ದ ತಿಕ್ಕಾಟ ಮುಂದೆ ಜನಸಂಘ ಹಾಗೂ ಆರ್.ಎಸ್.ಎಸ್ ನಡುವೆಯೂ ಆರಂಭವಾಗಿ ಸತತವಾಗಿ ಮುಂದುವರಿಯುತ್ತಾ ಬಂತು. ಇದೇಕೆ ಎಂದು ಅಚ್ಚರಿಯೆನಿಸಬಹುದಲ್ಲವೇ? ಏಕೆಂದರೆ "ಹಿಂದೂ ರಾಷ್ಟ್ರದ"ದ ವಿಚಾರ ಆಧುನಿಕ ಪ್ರಜಾಸತ್ತಾತ್ಮಕ ಭಾರತದ ವಾಸ್ತವತೆಗೆ ಸರಿಹೊಂದದ ವಿಚಾರವಾಗಿತ್ತು. ವಿವಿಧ ಜಾತಿ-ಮತ-ಭಾಷೆಗಳ ಭೇದಗಳನ್ನು ಮೀರಿ ನಿಂತ ಐಕ್ಯತೆಯಿಲ್ಲದೆ ಭಾರತ ಆಧುನಿಕ ಜಗತ್ತಿನಲ್ಲಿ ಪ್ರಗತಿ ಸಾಧಿಸುವುದು ಸಾಧ್ಯವಿಲ್ಲ ಎಂಬುದನ್ನು ಇದು ತೋರಿಸಿಕೊಡುತ್ತದೆ. ಒಂದು ರಾಜಕೀಯ ಪಕ್ಷ ಚುನಾವಣೆಯಲ್ಲಿ ಮತ ಕೇಳುವಾಗ ಕೇವಲ ಒಂದು ಜನ ವಿಭಾಗವನ್ನೇ ಅವಲಂಬಿಸಿರಲು ಸಾಧ್ಯವೇ? ಈ ತಿಕ್ಕಾಟದಲ್ಲೇ ಒಂದೊಮ್ಮೆ ಅಧ್ಯಕ್ಷರೂ ಆಗಿದ್ದ ಬಲರಾಜ್ ಮಧೋಕ್‌ರಂತವರು ಜನಸಂಘ ಬಿಡಬೇಕಾಯಿತು. ಮುಂದೆ ಇದರಿಂದಾಗಿಯೇ 1977 ರಲ್ಲಿ ಜನಸಂಘ ಆಗ ಜನ್ಮತಾಳಿದ ಜನತಾಪಕ್ಷದಲ್ಲಿ ಲೀನವಾಯಿತು; ಇದು ಕೂಡಾ ಪರಿಣಾಮಕಾರಿ ಮಾರ್ಗ ಅಲ್ಲ ಎಂದು ಅನಿಸಿದಾಗ ಹೊಸ ಅವತಾರ ತಳೆದು ಬಿ.ಜೆ. ಪಿ.ಯಾಯಿತು.

ಬಿ.ಜೆ.ಪಿ. ಸ್ಥಾಪನೆಯ ನಂತರ

ಬಿ.ಜೆ.ಪಿಯ ಸ್ಥಾಪನೆಯ ನಂತರವೂ ಇದುವರೆಗೆ ಮೂರು ಘಟ್ಟಗಳನ್ನು ಕಾಣಬಹುದು. 1980-86ರ ವಾಜಪೇಯಿ ಅಧ್ಯಕ್ಷತೆಯ ಕಾಲ, ಮತ್ತು 1986-89ರ ಅಡ್ವಾಣಿ ಅಧ್ಯಕ್ಷತೆಯ ಕಾಲ, ಮತ್ತು 1989 ರ ನಂತರದ 'ಯಶಸ್ವಿ ಮುನ್ನಡೆ'ಯ ಕಾಲ.

1980-86ರಲ್ಲಿ "ಗಾಂಧಿ-ಸಮಾಜವಾದ' ತನ್ನ ಗುರಿ ಎಂದು ಘೋಷಿಸಿಕೊಂಡ ಅವಧಿಯಲ್ಲಿ ಆರ್.ಎಸ್.ಎಸ್ ಮುಖಂಡರ ವಿರೋಧವಿದ್ದಾಗ್ಯೂ ಬಹುಸಂಖ್ಯಾತ ಕೋಮುವಾದ ಅಂದರೆ ಈ ದೇಶ ಕೇವಲ ಹಿಂದೂಗಳದ್ದೆ ಎಂಬ ಹಿಂದೂ ಕೋಮುವಾದದ ಅಬ್ಬರ ಹಿಂದೆ ಸರಿದು ಹೊಸ ಅವತಾರ ತಳೆದ ಬಿ.ಜೆ.ಪಿಗೆ ಒಂದು ವ್ಯಾಪಕ ಜನಬೆಂಬಲಗಳಿಸುವ ಪ್ರಯತ್ನ ನಡೆಯಿತು. ಆದರೆ 1984 ರಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಅದರ ಬಲ 2 ಕ್ಕೆ ಇಳಿದಾಗ 'ಗಾಂಧಿ ಸಮಾಜವಾದ' ವೆಂಬ ತನ್ನ ಅಸ್ಪಷ್ಟ ಸಿದ್ಧಾಂತ ನಿಷ್ಪ್ರಯೋಜಕ, ತಮ್ಮ ಕೋಮುವಾದೀ ಘೋಷಣೆಯನ್ನು ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ತಾನು ಪಡೆದುಕೊಂಡು ಲಾಭಗಿಟ್ಟಿಸಿದೆ ಎಂದು ಕಂಡುಕೊಂಡ ಬಿಜೆಪಿ ತನ್ನ ರಾಜಕೀಯ ಉಳಿವಿಗಾಗಿ 'ಹಿಂದುತ್ವ' ದ ವಿಚಾರವನ್ನು ಮತ್ತೆ ಪ್ರಧಾನವಾಗಿ ಪ್ರಚಾರಮಾಡಲಾರಂಭಿಸಿತು. ಹಿಂದೆ "ಹಿಂದೂರಾಷ್ಟ್ರ" ಪ್ರತಿಪಾದಿಸುವ ಆರ್.ಎಸ್.ಎಸ್.ಮತ್ತು ಅದನ್ನು ರಾಜಕೀಯವಾಗಿ ಸಾಕಾರಗೊಳಿಸ ಪ್ರಯತ್ನಿಸುವ ರಾಜಕೀಯ ಪಕ್ಷದ ನಡುವೆ ಸಂಬಂಧವಿಲ್ಲವೆಂದು ಬಹಿರಂಗವಾಗಿ ಹೇಳುತ್ತಿದ್ದವರೂ ಈಗ ಬಿಜೆಪಿಗೆ ಸ್ವತಃ ಆರ್.ಎಸ್.ಎಸ್. ಮಾರ್ಗನಿರ್ದೇಶಕ ಎಂದು ಬಹಿರಂಗವಾಗಿಯೇ ಹೇಳಲಾರಂಭಿದರು. ಗಾಂಧೀಜಿ ಕೊನೆಗೆ ಕಾಂಗ್ರೆಸ್ ಸದಸ್ಯರಲ್ಲದಿದ್ದರೂ ಕಾಂಗ್ರೆಸ್‌ನವರು ಮಾರ್ಗದರ್ಶನಕ್ಕೆ ಗಾಂಧೀಜಿ ಬಳಿಗೆ ಹೋಗುತ್ತಿರಲಿಲ್ಲವೇ ಹಾಗೆ ಎಂದು ಸಮರ್ಥಿಸಿಕೊಳ್ಳಲಾರಂಭಿಸಿದರು. ಅಂತಿಮವಾಗಿ ರಾಮದೇವಸ್ಥಾನದ ನಿರ್ಮಾಣದ ಪ್ರಶ್ನೆಯನ್ನು ಪ್ರಧಾನ ಬೇಡಿಕೆಯಾಗಿ ಎತ್ತಿಕೊಳ್ಳಲು ನಿರ್ಧರಿಸಲಾಯಿತು.

ಮುಸಲ್ಮಾನ-ವಿರೋಧಿ ಭಾವನೆಗಳನ್ನು ಉದ್ರೇಕಿಸುವುದು 1950 ರ ದಶಕದಿಂದಲೂ ಈ ರಾಜಕೀಯ ಗುಂಪಿನ ಮುಖ್ಯ ಅಸ್ತ್ರ. ಆದರೆ 1986 ರ ನಂತರ ಹಳೆಯ ಪ್ರಶ್ನೆಗಳ ಮೇಲೆ ಅತ್ಯಂತ ಆಕ್ರಮಣಕಾರೀ ರೀತಿಯಲ್ಲಿ ಪ್ರಚಾರ ಆರಂಭವಾಯಿತು. ಇನ್ನೂ ಕೆಲವು ಹೊಸ ಪ್ರಶ್ನೆಗಳನ್ನು ಸೇರಿಸಿಕೊಳ್ಳಲಾಯಿತು. ತಮಿಳುನಾಡಿನ ಮೀನಾಕ್ಷಿಪುರಂನಲ್ಲಿ ದಲಿತ ಹಿಂದೂಗಳ ಮತಾಂತರದ ಪ್ರಶ್ನೆಯ ಮೇಲೆ ಆರ್.ಎಸ್.ಎಸ್ ಮತ್ತು ಹೊಸದಾಗಿ ಹುಟ್ಟು ಹಾಕಿದ ವಿಶ್ವಹಿಂದೂ ಪರಿಷತ್ (ವಿ.ಹೆಚ್.ಪಿ.) ಗಲಾಟೆ ಎಬ್ಬಿಸಿದಾಗ ರಾಜಕೀಯ ಪಕ್ಷವಾದ ಬಿಜೆಪಿ ಕೂಡಾ ಅವರೊಂದಿಗೆ ಸೇರಿಕೊಂಡಿತು. ಅಯೋಧ್ಯೆಯಲ್ಲಿ ರಾಮಮಂದಿರದ ಪ್ರಶ್ನೆಯ ಮೇಲೆ ವಿ.ಹೆಚ್.ಪಿಗೆ ಒಮ್ಮಿಂದೊಮ್ಮೆಲೇ ಸಿಕ್ಕ ಬೆಂಬಲವನ್ನು ಬಿ.ಜೆ.ಪಿ. ರಾಜಕೀಯವಾಗಿ ಬಳಸಲು ನಿರ್ಧರಿಸಿತು. 1989 ರಲ್ಲಿ ಬಿಜೆಪಿಯ ಪಾಲಂಪುರ ರಾಷ್ಟ್ರೀಯ ಕಾರ್ಯಕಾರಿ ಮಂಡಳಿಯ ಸಭೆ ಅಯೋಧ್ಯೆಯ ವಿವಾದಗ್ರಸ್ತಸ್ಥಳದಲ್ಲೇ ರಾಮಮಂದಿರ ನಿರ್ಮಾಣದ ಬೇಕೆಂಬ ಒತ್ತಾಯವನ್ನು ಅಧಿಕೃತವಾಗಿ ಅಂಗೀಕರಿಸಿತು. ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಚಳುವಳಿ ಭುಗಿಲೆದ್ದಾಗ ಕಾಶ್ಮೀರದ ಬಗ್ಗೆ ಐತಿಹಾಸಿಕ ಕಾರಣಗಳಿಂದಾಗಿ ಸಂವಿಧಾನದಲ್ಲಿರುವ 370 ನೇ ಕಲಮನ್ನು ರದ್ದುಮಾಡಬೇಕೆಂಬ ಜನಸಂಘದ ಹಳೆಯ ಬೇಡಿಕೆಗೆ ಜೋಷಿಯವರ 'ಏಕತಾಯಾತ್ರೆ'ಯ ಮೂಲಕ ಹೊಸ ಒತ್ತು ನೀಡಲು ಪ್ರಯತ್ನಿಸಲಾಯಿತು.

ಬಾಂಗ್ಲಾದೇಶದಿಂದ ಬರುತ್ತಿರುವ ಮುಸಲ್ಮಾನ ವಲಸೆಗಾರರ ಪ್ರಶ್ನೆಯನ್ನು ಎತ್ತಿಕೊಂಡು ಮುಸ್ಲಿಂ-ವಿರೋಧಿ ಭಾವನೆಗಳನ್ನು ಉದ್ರೇಕಿಸಲು ಪ್ರಯತ್ನಿಸಲಾಯಿತು. ಆದರೆ ಅಷ್ಟೇ ಕಾನೂನುಬಾಹಿರವಾಗಿ ಬರುವ ಹಿಂದೂ ವಲಸೆಗಾರರನ್ನು ತೆರೆದ ಬಾಹುಗಳಿಂದ ಸ್ವಾಗತಿಸಿದರು ಇದೇ ಮಂದಿ.

ಯಾವುದೇ ಪ್ರಜಾಪ್ರಭುತ್ವದ ಹಿರಿಮೆಯನ್ನು ಅದು ತನ್ನ ಅಲ್ಪಸಂಖ್ಯಾತ ಜನರಿಗೆ

> *1977 ರಲ್ಲಿ ಜನಸಂಘ ಆಗ ಜನ್ಮತಾಳಿದ ಜನತಾಪಕ್ಷದಲ್ಲಿ ಲೀನವಾಯಿತು; ಇದು ಕೂಡಾ ಪರಿಣಾಮಕಾರಿ ಮಾರ್ಗ ಅಲ್ಲ ಎಂದು ಅನಿಸಿದಾಗ ಹೊಸ ಅವತಾರ ತಳೆದು ಬಿ.ಜೆ. ಪಿ.ಯಾಯಿತು.*

ಜುಲೈ 1993 ರಿಂದ ಭಾರತದ 41 ದೊಡ್ಡ ಕೈಗಾರಿಕೋದ್ಯಮಿಗಳು ಒಂದು ನೀಟಾಗಿ ಪ್ಯಾಕ್ ಮಾಡಿದ ಪಾರಿತೋಷಕವನ್ನು ಪಡೆದರು. ಅದರಲ್ಲಿದ್ದುದು ಬಿಜೆಪಿಯ ಬೆಂಗಳೂರು ಅಧಿವೇಶನದಲ್ಲಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಹಾಗೂ ಇತರ ಮುಖಂಡರ ಭಾಷಣಗಳ ವಿಡಿಯೋ ಕ್ಯಾಸೆಟ್, ಪತ್ರಿಕಾ ವರದಿಗಳ ಕ್ಲಿಪಿಂಗ್‌ಗಳು ಹಾಗೂ ಅಡ್ವಾಣಿಯವರಿಂದ ಒಂದು "ಪ್ರೀತಿಯ" ಪತ್ರ- "ಸಾರ್ವಜನಿಕ ಜೀವನವನ್ನು ಶುದ್ಧಗೊಳಿಸಲು ಚೆಕ್ ಮೂಲಕ ಮಾತ್ರ ಹಣ ಪಡೆಯುತ್ತೇವೆ. ನಿಮ್ಮಿಂದ ಕೇವಲ ಅಲ್ಪ "ಸಾಂಕೇತಿಕ ಕೊಡುಗೆ" ಸಾಕು........" ಇತ್ಯಾದಿ, ಇತ್ಯಾದಿ. ಈ ಮೂಲಕ 55 ಕೋಟಿ ರೂ. ಎತ್ತಬೇಕೆಂದಿದ್ದೇವೆ. ಉದ್ಯಮಿಗಳ ಸ್ಪಂದನ ನೋಡಿದರೆ ಇನ್ನೂ ಹೆಚ್ಚು ಸಂಗ್ರಹವಾಗಬಹುದು ಎಂಬ ನಿರೀಕ್ಷೆಯಿದೆ ಎನ್ನುತ್ತಾರಂತೆ ಬಿಜೆಪಿ ಮುಖಂಡರು. ಇದು 'ಟೈಂಸ್ ಆಫ್ ಇಂಡಿಯಾ' ಸುದ್ದಿ (ಆಗಸ್ಟ್ 29)

ಬಂಡವಾಳಶಾಹಿಗಳತ್ತ ಕೈ ಚಾಚುವವರು ದುಡಿಯುವ ಜನರಿಗೆ ಏನು ಮಾಡಿಯಾರು?

ಕಳೆದ ಚುನಾವಣೆಗಳ ಮೊದಲು ಹಾಗೂ ಚುನಾವಣೆಗಳಲ್ಲಿಯೂ ಬಿಜೆಪಿಗೆ ದೊಡ್ಡ ಬಂಡವಾಳಿಗರ ಒಂದು ವಿಭಾಗ ಬಹಿರಂಗ ಬೆಂಬಲ ಕೊಟ್ಟಿದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವಾಸ್ತವವಾಗಿ ದೊಡ್ಡ ಬಂಡವಾಳಿಗರ ಒಂದು ಗುಂಪು ಮುಖ್ಯವಾಗಿ ಮಾರ್ವಾಡಿ ವ್ಯಾಪಾರಸ್ಥರು ಹಿಂದೂ ಮತೀಯ ವಿಚಾರಗಳ ಜನ. ಆದರೆ ಮಾಲಕರ ಸ್ವಂತ ಪ್ರಯೋಜನದ ಪ್ರಶ್ನೆ ಬಂದಾಗ ಈ ಮತೀಯ ವಿಚಾರಗಳ ದೃಷ್ಟಿಯಿಂದ ವರ್ತಿಸುವುದಿಲ್ಲ. ಅಂದರೆ ತನ್ನ ಹಿಂದೂ ಕಾರ್ಮಿಕನಿಗೆ ಬೇರೆ ಕಾರ್ಮಿಕನಿಗಿಂತ ಹೆಚ್ಚು 'ನ್ಯಾಯಯುತ' ಸಂಬಳ ಕೊಡುವ ಬಗ್ಗೆ ಹಿಂದೂ ಬಂಡವಾಳಶಾಹಿ ಎಂದೂ ಯೋಚಿಸಲು ಸಾಧ್ಯವಿಲ್ಲದ್ದರಿಂದ ಸಾಮಾನ್ಯವಾಗಿ ಈ ದೊಡ್ಡ ವ್ಯಾಪಾರಸ್ಥರು ರಾಜಕೀಯದ ಪ್ರಶ್ನೆ ಬಂದಾಗ ಕಾಂಗ್ರೆಸ್ಸನ್ನು ಬೆಂಬಲಿಸುತ್ತಿದ್ದರು. ಆದರೆ 1990-91ರ ವೇಳೆಗೆ ಮೊದಲ ಬಾರಿಗೆ ಈ ನಿಲುವಿನಲ್ಲಿ ಬದಲಾವಣೆ ಕಂಡು ಬಂತು. 'ರಥಯಾತ್ರೆ'ಯ ನಂತರ ಕಲ್ಕತ್ತೆಗೆ ಬಂದ ಅಡ್ವಾಣಿಯವರಿಗೆ ಬಿರ್ಲಾಗಳು ದೊಡ್ಡ ಆತಿಥ್ಯ ನೀಡಿದರು. ದೊಡ್ಡ-ದೊಡ್ಡ ಉದ್ಯಮಿಗಳು ಇದರಲ್ಲಿ ಭಾಗವಹಿಸಿದ್ದರು. ಕೆಲವು ಉದ್ಯಮಿಗಳು ಗೊಂದಲದಲ್ಲಿರುವ ಕಾಂಗ್ರೆಸ್‌ಗೆ ಬಿಜೆಪಿಯೇ 'ಯೋಗ್ಯ' ಪರ್ಯಾಯ ಎಂದೂ ಭಾವಿಸಿ ಚುನಾವಣೆಗಳಲ್ಲಿ ನೆರವಾದರು. ಆದರೆ ಈ ಸ್ಥಿತಿ ಬಹಳ ದಿನ ಇರಲಿಲ್ಲ. ನರಸಿಂಹರಾವ್ ಸರ್ಕಾರ ಹೊಸ ಆರ್ಥಿಕ ನೀತಿಯಿಂದಾಗಿ ಬಿಜೆಪಿ ಬಗ್ಗೆ ದೊಡ್ಡ ಬಂಡವಾಳಿಗರ ಆಸಕ್ತಿ ಕಡಿಮೆಯಾಗಲಾರಂಭಿಸಿತು.

ಅಯೋಧ್ಯೆ ದುಸ್ಸಾಹಸದ ನಂತರ ಅದು ಇನ್ನಷ್ಟು ಕಡಿಮೆಯಾಯಿತು. ಮುಂಬೈಯಲ್ಲಿ ಶಿವಸೇನೆಯೊಂದಿಗೆ ಅದರ ಮಿತ್ರತ್ವ, ಮುಂಬೈ ಗಲಭೆಗಳ ಸಮಯದಲ್ಲಿ ಶಿವಸೇನೆಯ, ಬಿಜೆಪಿಯ ಪಾತ್ರದಿಂದಲೂ ಟಾಟಾ, ವಾಡಿಯಾಗಳಂತಹ ಬಂಡವಾಳಶಾಹಿಗಳಿಗೆ ಸಿಟ್ಟು ಬಂದಿತ್ತು. ಅಲ್ಲದೆ ಆರ್ಥಿಕ ನೀತಿಗಳನ್ನು ಕುರಿತಂತೆ ಬಿಜೆಪಿ ಒಮ್ಮೆ ಬಂಡವಾಳಶಾಹೀ-ಭೂ ಮಾಲಕರ ನೀತಿಗಳಿಗೆ ನೇರ, ಸ್ಪಷ್ಟ ಬೆಂಬಲ ನೀಡುವುದು, ಇನ್ನೊಮ್ಮೆ ಜನಗಳ ಗಮನ ಸೆಳೆಯಲು ಅವೇ ನೀತಿಗಳ ಸಾರ್ವಜನಿಕ ಟೀಕೆ ನಡೆಸುವುದು ಇವುಗಳಿಂದಲೂ ಉದ್ಯಮಿಗಳ ಆಸಕ್ತಿ ಕುಂದಲಾರಂಭಿಸಿತು.

ಆದರೆ ಬಲಪಂಥೀಯ ಆರ್ಥಿಕ ನೀತಿಗಳಲ್ಲಿ ಬಿಜೆಪಿಯ ಆಸಕ್ತಿ ಮಾತ್ರ ಕುಂದುವುದು ಸಾಧ್ಯವಿಲ್ಲ. ಅದರ ಒಂದು ದ್ಯೋತಕವೇ ಈ ಲೇಖನದ ಆರಂಭದಲ್ಲಿ ಹೇಳಿದ 'ಪಾರಿತೋಷಕ'ದ ಪ್ಯಾಕ್. ಉದ್ಯಮಿಗಳನ್ನು ಒಲಿಸಿಕೊಳ್ಳಲು ಬಿಜೆಪಿ ಶತಪ್ರಯತ್ನ ನಡೆಸುತ್ತಿದೆ.

ಎಪ್ರಿಲ್ ತಿಂಗಳಲ್ಲಿ ಬಿಜೆಪಿ ಮುಖಂಡರು ಹಾಗೂ 'ಭಾರತೀಯ ಉದ್ಯಮಿಗಳ ಒಕ್ಕೂಟ' (ಸಿ.ಐ.ಐ) ದ ನಡುವೆ ನವದೆಹಲಿಯಲ್ಲಿ ಒಂದು ಸಭೆ ಏರ್ಪಡಿಸಿ ಉದ್ಯಮಿಗಳಿಗೆ ಬಿಜೆಪಿ ಆರ್ಥಿಕ ನೀತಿಯ ಬಗ್ಗೆ 'ಮನವರಿಕೆ' ಮಾಡಿಸಲಾಯಿತು. ನಂತರ ಬಿಜೆಪಿ ನಿಜವಾಗಿಯೂ ಹೇಗೆ ಉದ್ಯಮಿಗಳ ಹಿತಾಸಕ್ತಿ ಕಾಪಾಡುವ ಪಕ್ಷ ಎಂದು ಬಿಂಬಿಸುವ ಕಿರುಪುಸ್ತಕವನ್ನು ಪ್ರಕಟಿಸಲಾಯಿತು. ಬಿಜೆಪಿಯ ಎಂ.ಪಿ. ಹಾಗೂ ಉಕ್ಕು ಕೈಗಾರಿಕೋದ್ಯಮಿ ವೀರೇನ್ ಶಹಾರ ಮುನ್ನುಡಿ ಇದಕ್ಕೆ ಬಂಡವಾಳಶಾಹಿಗಳ ಕೇಂದ್ರ ನಗರ ಮುಂಬೈಯಲ್ಲಿ ಅವರೊಡನೆ ಸದಾ ಸಂಪರ್ಕವಿಟ್ಟುಕೊಳ್ಳಲು ಒಂದು ವಿಶೇಷ ಸೆಲ್ ಪ್ರಾರಂಭಿಸಲಾಗಿದೆಯಂತೆ. ಭಾರತೀಯ ವ್ಯಾಪಾರಿಗಳ ಚೇಂಬರ್‌ನ ಮಾಜಿ ಅಧ್ಯಕ್ಷ ಪ್ರಾಣ್‌ಲಾಲ್ ಭೋಗಿಲಾಲ್ ಇದರ ಮುಖ್ಯಸ್ಥ.

"1980ರ ದಶಕದ ಮಧ್ಯಭಾಗದವರೆಗೆ ಇದ್ದಂತೆ ಈಗೇನೂ ಬಿಜೆಪಿ ಅಸ್ತಿತ್ವಕ್ಕಾಗಿ ಒದ್ದಾಟ ನಡೆಸುತ್ತಿರುವ ಪಕ್ಷ ಅಲ್ಲ. ಆಗ ರಾಜೀವ್‌ಗಾಂಧಿ ಹೊಸ ಪ್ರವಾದಿಯಾಗಿದ್ದರು. ಯಾರೂ ಅವರ ವಿರುದ್ಧ ಯಾವುದೇ ಮಾತು ಕೇಳಲು ಸಿದ್ಧರಿರಲಿಲ್ಲ. ಆದರೆ ಈಗ ಹಾಗಿಲ್ಲ" ಎನ್ನುತ್ತಾರೆ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಮಹಜನ್- ರಾಜೀವ್‌ಗಾಂಧಿ ಹೊಸ ಆರ್ಥಿಕ ನೀತಿ ಉಂಟುಮಾಡಿದ ಬಿಕ್ಕಟ್ಟು 'ಹಿಂದುತ್ವ'ದ ಅಸ್ತ್ರ ಹಿಡಿದು ಮುಂದೆ ಸಾಗಲು ತಮಗೆ ಅವಕಾಶ ಮಾಡಿಕೊಟ್ಟವು ಎಂಬ ಸಂತೋಷದಿಂದ. ಈ ಪ್ರಮೋದ್ ಮಹಾಜನ್ ಖಾಸಗಿ ವಿಮಾನ ಸಾರಿಗೆ ಉದ್ಯಮಿಗಳಿಗೆ ತಾವು ಅಧಿಕಾರಕ್ಕೆ ಬಂದರೆ ಸಂಪೂರ್ಣ ನೆರವು ನೀಡುವುದಾಗಿ ಮಾತುಕೊಟ್ಟಿದ್ದಾರಂತೆ.

ಕಾಂಗ್ರೆಸ್‌ನ ಹಣದ ಥೈಲಿಗಳು ಎಂದೆನಿಸಿಕೊಂಡ ಅಂಬಾನಿಗಳೊಡನೆ ಕೂಡಾ ಈಗ ಕೆಲವು ಬಿಜೆಪಿ ಮುಖಂಡರ ಸತತ ಸಂಪರ್ಕವಿದೆ ಎಂದು 'ಟೈಂಸ್ ಆಫ್ ಇಂಡಿಯಾ' ದ ಪತ್ರಕರ್ತರು ಹೇಳುತ್ತಾರೆ. ಅಡ್ವಾಣಿಯವರ 'ರಥಯಾತ್ರೆ'ಗೆ ಹಣ ಒದಗಿಸಿದವರು ಅಂಬಾನಿಗಳು ಎಂಬ ಆಪಾದನೆಯಿದ್ದು ಅದನ್ನು ಬಿಜೆಪಿ ನಿರಾಕರಿಸುತ್ತಿದ್ದರೂ ಬಿಜೆಪಿಯ ಮಿತ್ರ ಶಿವಸೇನೆಯ ಮುಖಂಡರು "ಧೀರೂಭಾಯಿ" ಅಂಬಾನಿ ನಮ್ಮದತ್ತು ತಂದೆ" ಎನ್ನುತ್ತಿದ್ದಾರಂತೆ. ಗುಜರಾತಿನಲ್ಲಿ ಅಂಬಾನಿಗಳ ಪೆಟ್ರೋಕೆಮಿಕಲ್ ಯೋಜನೆಗೆ ಬೆಂಬಲ ಕೊಡುವಲ್ಲಿ ಬಿ.ಜೆ.ಪಿ. ಹಾಗೂ ಕಾಂಗ್ರೆಸ್ ನಡುವೆ ಸ್ಪರ್ಧೆಯೇ ನಡೆದಿದೆ.

ಇತ್ತೀಚೆಗೆ ಶೇರು ಹಗರಣ ಕುರಿತಾದ ಜಂಟಿ ಸಂಸದೀಯ ವರದಿಯಲ್ಲಿ ಡಾ. ಮನಮೋಹನ್ ಸಿಂಗ್ ತನ್ನ ಬಗ್ಗೆ ಕಟುಮಾತುಗಳಿದ್ದುದನ್ನು ಕಂಡು ಕೋಪಿಸಿಕೊಂಡು ರಾಜೀನಾಮೆ ನೀಡುವುದಾಗಿ ಬೆದರಿಸಿದಾಗ ಬಿಜೆಪಿ ಸದಸ್ಯರು ಕಾಂಗ್ರೆಸ್ ಸದಸ್ಯರೊಡನೆ ಸೇರಿಕೊಂಡು ಕಟುಮಾತುಗಳನ್ನು ಮೆದುಗೊಳಿಸಲು ಶ್ರಮಿಸಿದರು ಎಂದೂ ಪತ್ರಿಕೆಗಳು ವರದಿ ಮಾಡಿವೆ. ಬಿಜೆಪಿ ಆಳುವ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷವೆನ್ನುವುದಕ್ಕೆ ಇದೂ ಒಂದು ಸಾಕ್ಷಿಯಲ್ಲವೆ?

ಬೆಲೆಯೇರಿಕೆ, ರಿಟ್ರೆಂಚ್‌ಮೆಂಟ್ ತಮ್ಮ ಬೇಡಿಕೆಗಳ ಇತ್ಯರ್ಥಕ್ಕೆ ಸರಕಾರದ ನಕಾರ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರ್ಮಿಕರು ನೌಕರರೊಡನೆ ಹೋರಾಟದ ದಾರಿ ಹಿಡಿದಿದ್ದ ರೈತಾಪಿ ವರ್ಗಗಳೊಡನೆ ನಿಕಟ ಸಂಪರ್ಕ ಇಟ್ಟುಕೊಳ್ಳಲು ಈ ಪಕ್ಷ ಇಂತಹ ಪ್ರಯತ್ನಗಳೇನಾದರೂ ಮಾಡಿದೆಯೇ? ಏನೂ ಇಲ್ಲ.

ಎಷ್ಟು ರಕ್ಷಣೆ, ಸಮಾನತೆ ನೀಡಿದೆ ಎಂಬುದರ ಮೂಲಕ ಅಳೆಯಬೇಕೆಂಬುದು ಪ್ರಜಾಪ್ರಭುತ್ವವಾದಿಗಳೆಲ್ಲಾ ಒಪ್ಪಿರುವ ಮಾನದಂಡ. ಈ ದೃಷ್ಟಿಯಲ್ಲಿ ವಿವಿಧ ಧರ್ಮಗಳಿಂದ ಬುಡಕಟ್ಟುಗಳಿಂದ ಕೂಡಿದ ಭಾರತದೇಶದ ಅಲ್ಪಸಂಖ್ಯಾತರಿಗೆ ಸಮಾನತೆಯ ಸ್ಥಾನ-ಮಾನ, ಹಕ್ಕು ದೊರೆತಿದೆಯೇ, ಈ ಹಕ್ಕುಗಳ ರಕ್ಷಣೆಯಾಗುತ್ತಿದೆಯೇ ಎಂದು ನೋಡಿಕೊಳ್ಳಲು "ಅಲ್ಪಸಂಖ್ಯಾಕ ಆಯೋಗ"ವನ್ನು ಭಾರತ ಸರಕಾರ ರಚಿಸಿತ್ತು. ಬಿಜೆಪಿ ಇದನ್ನು ಬಲವಾಗಿ ವಿರೋಧಿಸುತ್ತಿದೆ. ಇದು ಅಲ್ಪಸಂಖ್ಯಾಕರನ್ನು ತುಷ್ಟಿಗೊಳಿಸುವ, ಅವರನ್ನು ಅನವಶ್ಯಕವಾಗಿ ಖುಷಿಪಡಿಸುವ ಆಯೋಗ, ಇವನ್ನು ರದ್ದುಮಾಡಿ 'ಮಾನವ ಹಕ್ಕು ಆಯೋಗ' ರಚಿಸಿ ಎಂದು ಒತ್ತಾಯಿಸುತ್ತಿದೆ.

'ಹಿಂದುತ್ವ'ದ ಪ್ರತಿಪಾದನೆಯ ಮೂಲಕ ಸ್ಪಷ್ಟವಾಗಿ ಎದ್ದು ಕಾಣುವ ತನ್ನ ಬಹುಸಂಖ್ಯಾಕ ಕೋಮುವಾದವನ್ನು ಅದು 'ಖೋಟಾ ಜಾತ್ಯಾತೀತತೆ', 'ಅಲ್ಪಸಂಖ್ಯಾಕವಾದ', "ಸಾಚಾ ಜಾತ್ಯಾತೀತತೆ" ಇತ್ಯಾದಿ ಶಬ್ದಜಾಲಗಳನ್ನು ಹರಡಿ ಸಮರ್ಥಿಸಿಕೊಳ್ಳುವ, ಈ ದೇಶದಲ್ಲಿ ತಾವೇ ಏಕಮಾತ್ರ 'ರಾಷ್ಟ್ರವಾದಿಗಳು' ಎಂದು ನಂಬಿಸುವ ಭಾರೀ ಪ್ರಯತ್ನ ನಡೆಸಿದೆ.

ಈ ವಿಕೃತ ಪರಿಕಲ್ಪನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸಾಕಷ್ಟು ಯಶಸ್ಸು ದೊರೆಯಿತು. ಇದು ಹೇಗೆ ಸಾಧ್ಯವಾಯಿತು ಎಂದು ಹಲವರಿಗೆ ಬಹಳ ಆಶ್ಚರ್ಯವಾಗಿದೆ. ನಾಲ್ಕು ದಶಕಗಳ ಕಾಲ ಜನಗಳನ್ನು ಸ್ಪಂದಿಸಲಾಗದ ಈ ಘೋಷಣೆಗಳಿಗೆ ಈಗ ಒಮ್ಮಿಂದೊಮ್ಮೆಲೇ ಇಷ್ಟೊಂದು ಬೆಂಬಲ ಹೇಗೆ ದೊರೆಯಲು ಸಾಧ್ಯವಾಯಿತು? ಕೋಮುವಾದೀ ಘೋಷಣೆಗಳು ನಮ್ಮ ದೇಶದ ರಾಜಕೀಯ ರಂಗಸ್ಥಳದಲ್ಲಿ ಪ್ರಧಾನ ಪಾತ್ರ ವಹಿಸುವಂತಾಗಿ ಡಿಸೆಂಬರ್ 6 ರ ನಾಚಿಕೆಗೇಡಿ ಘಟನೆ ನಡೆಯಲು, ಆ ನಂತರವೂ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಬಹಿರಂಗ ಗೂಂಡಾಗಿರಿಯನ್ನು ಬಹಿರಂಗವಾಗಿಯೇ ಸಮರ್ಥಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತಿದೆ?

ಏಕೆ ಈ ಯಶಸ್ಸು?

1984 ನಂತರ ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ಪ್ರತಿಯೊಂದು ವಲಯದಲ್ಲೂ ಸಮಸ್ಯೆಗಳು ದೇಶವನ್ನು ಮೂಗಿನ ಮಟ್ಟದ ವರೆಗೆ ಮುಳುಗಿಸಿ ಮುಂದೇನು ಎಂದು ಚಿಂತಿಸುತ್ತಿದ್ದ ಬಿಕ್ಕಟ್ಟಿನ ಸನ್ನಿವೇಶ ದೇಶದ ಮುಂದಿತ್ತು. ಇಂದಿರಾಗಾಂಧಿಯವರು ಆರಂಭಿಸಿದ್ದ ಹೊಸ ಆರ್ಥಿಕ ನೀತಿಗಳನ್ನು ರಾಜೀವಗಾಂಧಿಯವರು ದೊಡ್ಡದಾಗಿ ಕೈಗೆತ್ತಿಕೊಂಡು ದೇಶದ ಮಧ್ಯಮವರ್ಗಗಳ, ಬಂಡವಾಳಿಗಳ, ಅವರ ಪತ್ರಿಕೆಗಳ ಕಣ್ಮಣಿಯಾದ ಮೂರು-ನಾಲ್ಕು ವರ್ಷಗಳಲ್ಲೇ ಅವೆಲ್ಲಾ ಕುಸಿದು ಬಿದ್ದು ಈ ಜನಗಳಿಗೆ ದಾರಿಕಾಣದಂತಾಗಿದ್ದ ಸನ್ನಿವೇಶ ಅಡ್ವಾಣಿ ಸಾರಥ್ಯದಲ್ಲಿ ಬಿ.ಜೆ.ಪಿ. ಹಿಂದೂ ಕೋಮುವಾದಕ್ಕೆ ಸುವರ್ಣಾವಕಾಶ ಒದಗಿಸಿತ್ತು.

ನಮಗೆ ಈಗಾಗಲೇ ತಿಳಿದಿರುವಂತೆ ಭಾರತ ಸ್ವತಂತ್ರವಾದಾಗ ಕೃಷಿ ರಂಗದಲ್ಲಿದ್ದ ಶೋಷಣೆಯ ಸಂಬಂಧಗಳನ್ನು ಬದಲಿಸದೆಯೇ ಕೈಗಾರಿಕೆಗಳನ್ನು ಬೆಳೆಸುವ ಮಾರ್ಗವನ್ನು ನಮ್ಮ ದೇಶದ ಆಳ್ವಿಕೆಯ ಸೂತ್ರ ಹಿಡಿದವರು ಅನುಸರಿಸಿದರು. ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲೇ ಇದು ತಪ್ಪುದಾರಿ, ನಮ್ಮ ಜನರ ಸಮಸ್ಯೆಗಳನ್ನು ಬಗೆಹರಿಸುವ ಬದಲು ಅವನ್ನು ಉಲ್ಬಣಗೊಳಿಸಿದ, ಬಡತನ, ನಿರುದ್ಯೋಗಗಳನ್ನು ಹೆಚ್ಚಿಸಿದ ದಾರಿ ಎಂದು ಹೆಚ್ಚೆಚ್ಚಾಗಿ ಅನುಭವಕ್ಕೆ ಬರಲಾರಂಭಿಸಿತು. ಈ ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇ ಎಂಬಂತಹ ಭಾವನೆ ಉಂಟಾಗಲಾರಂಭಿಸಿತು. ಇದರ ಪರಿಣಾಮ ಕಾಂಗ್ರೆಸ್ ಪಕ್ಷದ ಮೇಲೂ ಆಯಿತು. ಪಕ್ಷ ವಿಭಜನೆಯಾಯಿತು. ಆದರೂ ಅದು ತನ್ನ ನೀತಿಗಳನ್ನು ಗಂಭೀರವಾಗಿ ವಿಮರ್ಶಿಸಲಿಲ್ಲ. ಈ ತೀವ್ರ ಪರಿಸ್ಥಿತಿಯಿಂದ ಹೊರಬರಲು ಅದು ಆರಿಸಿಕೊಂಡ ಮಾರ್ಗವೆಂದರೆ ಈ ಸಮಸ್ಯೆಗಳ ನಡುವೆಯೂ ದುಡಿಯುವ ಜನಗಳಿಗೆ ಅಭಿವೃದ್ಧಿಯ ಫಲ ತುಸುವಾದರೂ ಸಿಗುವಂತಹ ಅವಕಾಶ ಕಲ್ಪಿಸಿದ, ಅನೇಕ ಕುಂದುಕೊರತೆಗಳ ನಡುವೆಯೂ ದೇಶಕ್ಕೆ ಆರ್ಥಿಕ ಸ್ವಾವಲಂಬನೆ ನೀಡಿದ್ದ ನೆಹರೂ ನೀತಿಯ ಅಂಶಗಳಿಗೇ ತಿಲಾಂಜಲಿ ನೀಡುವ ವಿಚಿತ್ರ ಮಾರ್ಗ.

ಆದರೆ ರಾಜೀವ್‌ಗಾಂಧಿ ಆಡಳಿತದ ಹೊಸ ಆರ್ಥಿಕ ನೀತಿ, ಉದಾರೀಕರಣ ನೀತಿ ದೇಶದ ಶ್ರೀಮಂತರ ವಿಭಾಗಗಳಿಗೆ [illegible] ಅವಕಾಶ ಮಾಡಿಕೊಟ್ಟಿತಷ್ಟೇ ಹೊರತು ದೇಶವನ್ನು ಬಿಕ್ಕಟ್ಟಿನಿಂದ ಹೊರತರಲಿಲ್ಲ. ಬದಲಾಗಿ ಅವನ್ನು ಇನ್ನಷ್ಟು ಹದಗೆಡಿಸಿತು. 1988-89 ರ ವೇಳೆಗೆ ಈ ಹೊಸ ಉದಾರನೀತಿಗಳು ಕುಸಿದಾಗ ದೇಶ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ತತ್ತರಿಸಲಾರಂಭಿಸಿತು.

ಉದಾರೀಕರಣದ ವಿಫಲತೆ, ಅದರ ಬೆನ್ನಹಿಂದೆಯೇ ಪದರ ಪದರವಾಗಿ ಹೊರಬಂದ ಬೋಫೋರ್ಸ್ ಮತ್ತಿತರ ಹಗರಣಗಳು ಉದಾರೀಕರಣದಿಂದ ತ್ವರಿತ ಲಾಭ ಪಡೆಯುವ ನಿರೀಕ್ಷೆಯಲ್ಲಿದ್ದ ಮಧ್ಯಮ ವರ್ಗಗಳಲ್ಲಿ ಹತಾಶೆ ಉಂಟುಮಾಡಿತು. ಆ ಹತಾಶೆಯ ಸನ್ನಿವೇಶದಲ್ಲಿ ಬಿಜೆಪಿಯ 'ಮುನ್ನಡೆ'ಯ ಅವಕಾಶ ತೆರೆದುಕೊಂಡಿತು. ಮೊದಲು ಕಾಂಗ್ರೆಸ್(ಐ) ಸೃಷ್ಟಿಸಿದ ಬಿಕ್ಕಟ್ಟಿಗೆ ಬೂರ್ಜ್ವಾ ಜಾತ್ಯಾತೀತ ಪರ್ಯಾಯ ಕೊಡುವಂತೆ ಕಾಣಿಸಿದ ವಿ.ಪಿ.ಸಿಂಗ್ ಜನತಾದಳದ ಮರೆಯಲ್ಲಿ ಬಿಜೆಪಿ ಜನಗಳಲ್ಲಿ ಕಾಂಗ್ರೆಸ್-ವಿರೋಧಿ ಬಾವನೆಯ ಲಾಭ ಪಡೆದು 1989 ರಲ್ಲಿ ರಾಷ್ಟ್ರೀಯರಂಗದೊಡನೆ ಮೈತ್ರಿಯ ಫಲವಾಗಿ 89 ಸೀಟುಗಳನ್ನು ಪಡೆಯಿತು. ರಾಷ್ಟ್ರೀಯ ರಂಗ ಸರ್ಕಾರ ಮಂಡಲ್ ವರದಿಯ ಜಾರಿಯ ನಿರ್ಧಾರ ಕೈಗೊಂಡಾಗ ರಾಜೀವ್‌ಗಾಂಧಿ ನೀತಿಗಳ ಪರಿಣಾಮವಾಗಿ ಮಧ್ಯಮವರ್ಗಗಳಲ್ಲಿ ಅಳಿದುಳಿದಿದ್ದ ಜಾತ್ಯಾತೀತತೆ ಕೂಡಾ ಕಳಚಿ ಬಿತ್ತು. ಏಕೆಂದರೆ ಬಹುಪಾಲು ಮೇಲ್ಜಾತಿಗಳಿಗೆ ಸೇರಿದ ಈ ಜನಗಳಿಗೆ ತಮ್ಮ 'ಅಭಿವೃದ್ಧಿ'ಯ ಮುಖ್ಯ ಮಾರ್ಗಕ್ಕೆ ಏಟು ಬಿದ್ದಿದೆ ಎಂದನಿಸಿತು. ಮೀಸಲಾತಿ-ವಿರೋಧಿ ಚಳುವಳಿಯ ಲಾಭ ಪಡೆದ ಬಿಜೆಪಿ ಇವರಲ್ಲಿ ಬಹುಮಂದಿಯನ್ನು ತಮ್ಮತ್ತ ಗೆದ್ದುಕೊಂಡು ಅಡ್ವಾಣಿಯವರ ರಥಾಯಾತ್ರೆಯ ಮೂಲಕ ಮಂದಿರ ನಿರ್ಮಾಣದ ಪ್ರಚಾರಕ್ಕೆ ಬೆಂಬಲ ಗಿಟ್ಟಿಸಿತು. ಹಾಗೆ 1990 ರಲ್ಲಿ 'ಹಿಂದುತ್ವ'ದ ಪರಿಕಲ್ಪನೆ ಮೂಲಕ ತನ್ನ ಬಲಪಂಥೀಯ ರಾಜಕೀಯಕ್ಕೆ ಬಿಜೆಪಿ ಭಾರೀ ಬೆಂಬಲ ಪಡೆಯಿತು. ಮಧ್ಯಮ ವರ್ಗಗಳ ವ್ಯಕ್ತಿಗಳ, ಉಚ್ಚ ಕುಲೀನರ, ನಿವೃತ್ತ ಅಧಿಕಾರಶಾಹಿಗಳ, ಮಿಲಿಟರಿ ಅಧಿಕಾರಿಗಳ, ಬುದ್ಧಿಜೀವಿಗಳ ಮೆರವಣಿಗೆಯೇ ಬಿಜೆಪಿ ಪಾಳೆಯದತ್ತ ಸಾಗಿತು. ಕರ್ನಾಟಕದಲ್ಲೂ ಡಾ. ವೆಂಕಟಗಿರಿಗೌಡ ಹಾವನೂರುರಂತವರು ಈ ಮೆರವಣಿಗೆಯ ಭಾಗವಾದರು.

> ***ನಾಲ್ಕು ದಶಕಗಳ ಕಾಲ ಜನಗಳನ್ನು ಸ್ಪಂದಿಸಲಾಗದ ಕೋಮುವಾದೀ ಘೋಷಣೆಗಳು ನಮ್ಮ ದೇಶದ ರಾಜಕೀಯ ರಂಗಸ್ಥಳದಲ್ಲಿ ಪ್ರಧಾನ ಪಾತ್ರ ವಹಿಸುವಂತಾಗಿ ಡಿಸೆಂಬರ್ 6 ರ ನಾಚಿಕೆಗೇಡಿ ಘಟನೆ ನಡೆಯಲು, ಆ ನಂತರವೂ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಬಹಿರಂಗ ಗೂಂಡಾಗಿರಿಯನ್ನು ಬಹಿರಂಗವಾಗಿಯೇ ಸಮರ್ಥಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತಿದೆ?***

ಅಂತರ್ರಾಷ್ಟ್ರೀಯ ರಂಗದಲ್ಲೂ 1980 ರ ನಂತರ ರೇಗನ್ ಮೂಲಕ ಬಲಪಂಥತ್ತ ಕಂಡು ಬಂದ ಒಲವಿನ ಸನ್ನಿವೇಶದಲ್ಲಿ ದೇಶವನ್ನು ಆವರಿಸಿದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಬಲಪಂಥೀಯ ನಿಲುವುಗಳಿಗೆ ಬೆಂಬಲ ಗಳಿಸುವ ಪ್ರಯತ್ನ ನಡೆಸಿತು ಎಂಬುದನ್ನು ಕೂಡಾ ಇಲ್ಲಿ ಗಮನಿಸಬೇಕು.

ಒಂದು ಗಹನ ಸಮಸ್ಯೆ ಎದುರಾದಾಗ ಅದನ್ನು ಪರಿಹರಿಸುವುದು ಹೇಗೆ ಎಂಬುದಕ್ಕೆ ಹಲವು ಸಲಹೆಗಳು ಬರುತ್ತವೆ. ಅವುಗಳಲ್ಲಿ ಕೆಲವು ಸಮಸ್ಯೆಯ ಮೂಲವನ್ನರಿಯದೆ ಕೊಟ್ಟ ಸಲಹೆಗಳಾದರೆ, ಇನ್ನು ಕೆಲವು ಈ ಸಮಸ್ಯೆಯ ಲಾಭ ಪಡೆದು ತಮ್ಮ ಗುರಿ ಈಡೇರಿಸಿಕೊಳ್ಳುವುದಕ್ಕಾಗಿಯೇ ನೀಡಿರುವ ಸಲಹೆಗಳಾಗಿರುತ್ತವೆ. ಬಿಜೆಪಿ 'ಹಿಂದುತ್ವ'ದ ಮೂಲಕ ನೀಡುವ ಪರಿಹಾರ ಈ ಎರಡನೇ ಜಾತಿಗೆ ಸೇರಿದ್ದು. ಸಮಾಜದಲ್ಲಿ ಪ್ರಬಲವಾಗಿರುವ ಬಂಡವಾಳಶಾಹಿಗಳು ಹಾಗೂ ಜಮೀಂದಾರರ ಹಿತಾಸಕ್ತಿಗಳಿಗೆ ಪ್ರಾಧಾನ್ಯತೆ ನೀಡಿದ್ದರಿಂದ ಉಂಟಾದ ಸಮಸ್ಯೆಗಳಿಗೆ ಪರಿಹಾರ ನೀಡಬೇಕಾದರೆ ಈ ನೀತಿಯನ್ನು ಬದಲಿಸುವುದು, ಈ ಹಿತಾಸಕ್ತಿಗಳಿಗೆ ಸವಾಲು ಹಾಕುವುದು ಅತೀಮುಖ್ಯ. ಆದರೆ ಬಿಜೆಪಿ ಧರ್ಮದ ಹೆಸರಿನಲ್ಲಿ ದುಡಿಯುವ ಜನಗಳಲ್ಲಿ ಒಡಕು ತಂದು ಅವರ ಗಮನವನ್ನು ಈ ಗಹನ ಸಮಸ್ಯೆಗಳಿಂದ ಬೇರೆಡೆ ತಿರುಗಿಸಿ ಆಳುವ ಮಂದಿಗೆ ತಮ್ಮ ಜನವಿರೋಧಿ ನೀತಿಗಳನ್ನು ಇನ್ನೂ ಕ್ರೂರ ರೀತಿಯಲ್ಲಿ ಮುಂದುವರಿಸಲು ಅವಕಾಶ ನೀಡ ಬಯಸುತ್ತದಷ್ಟೆ ಎಂಬುದು ಇದರಿಂದ ತಿಳಿಯುತ್ತದೆ. ಆರ್ಥಿಕ, ಸಾಂಸ್ಕೃತಿಕ ಮತ್ತಿತರ ರಂಗಗಳಲ್ಲೂ ಅದರ ವಿಚಾರಗಳನ್ನು, ನಿಲುವುಗಳನ್ನು ಪರಿಶೀಲಿಸಿದಾಗ ಈ 'ಹಿಂದುತ್ವ'ಪಡೆಯ ನಿಜ ಉದ್ದೇಶ ಇನ್ನಷ್ಟು ಸ್ಪಷ್ಟವಾಗುತ್ತದೆ.

ಈ ರೀತಿ ಬಿಜೆಪಿ ಕೋಮುವಾದವನ್ನು ತನ್ನ ಗುರಿಸಾಧನೆಯ ಅಸ್ತ್ರವಾಗಿ ಬಳಸುವ ಒಂದು ಬಲಪಂಥೀಯ ಪ್ರತಿಗಾಮಿ ಪಕ್ಷ ಅಂದರೆ ಮೂಲಭೂತವಾಗಿ ಆಳುವ ಶೋಷಕ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುವ, ಹಿಂದಿನ ಶೋಷಕ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೆನ್ನುವ ಪಕ್ಷ, ಆದರೆ ಮೇಲ್ನೋಟಕ್ಕೆ ಈಗಿರುವ ವ್ಯವಸ್ಥೆಯನ್ನು "ಬದಲಿಸುವ" ಅದಕ್ಕೊಂದು ಪರ್ಯಾಯ ನೀಡುವ, ಅದಕ್ಕಾಗಿ "ಸಾಮೂಹಿಕ ಆಂದೋಲನ" ನಡೆಸುವ ಒಂದು ಪಕ್ಷ ತಾನು ಎಂದು ಅದು ತೋರಿಸಿಕೊಳ್ಳಲು ಹೆಣಗುತ್ತಿದೆ. ಈ ರೀತಿಯಲ್ಲಿ ಅದು ಬೇರೆ ಆಳುವ ವರ್ಗಗಳ ಪಕ್ಷಗಳಿಗಿಂತ ಭಿನ್ನವಾಗಿ ಕಾಣುತ್ತದೆ. ಆದರೆ ಇದರಲ್ಲಿ ವಿಶೇಷತೆಯೇನೂ ಇಲ್ಲ. ಇರಾನ್‌ನಲ್ಲಿ ಖೋಮೇನಿ ಪಕ್ಷ, ಅಲ್ಜೀರಿಯಾದಲ್ಲಿ ಇಸ್ಲಾಮಿ ಪಕ್ಷ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್‌ಗಳಲ್ಲಿ ತಲೆಯೆತ್ತಿರುವ ಜನಾಂಗ ದ್ವೇಷೀ ಪಕ್ಷಗಳೂ ಇದೇ ರೀತಿಯ ಸೋಗು ಹಾಕುತ್ತಿವೆ. ಸಮಾಜ ಒಂದು ಅತ್ಯಂತ ಬಿಕ್ಕಟ್ಟಿನ ಸ್ಥಿತಿಗೆ ಬಂದಾಗ, ಆಳುವ ವರ್ಗಗಳ ಹಳೆಯ ವಿಧಾನಗಳು ನಿಷ್ಪ್ರಯೋಜಕವೇನಿಸಿದಾಗ ಇಂತಹ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ಶೋಷಣೆ ಮುಂದುವರೆಸುವ ಹೊಸ ವಿಧಾನಗಳನ್ನು ಒದಗಿಸಲು. ಬಿಜೆಪಿ ಇದೇ ಸಾಲಿಗೆ ಸೇರಿದ ಪಕ್ಷ

ಭಾರತದಂತಹ ಸಾಮೂಹಿಕ ಬಡತನವಿರುವ, ತೀವ್ರ ಆರ್ಥಿಕ ಸಾಮಾಜಿಕ ಅಸಮಾನತೆಗಳಿರುವ ರಾಜಕೀಯ ವಾತಾವರಣದಲ್ಲಿ, ಚುನಾವಣೆಗಳಲ್ಲಿ ಗೆಲ್ಲ ಬೇಕಾದರೆ ಸಮಾಜದ ಎಲ್ಲಾ ವಿಭಾಗಗಳನ್ನು ಒಲಿಸಿಕೊಳ್ಳಬೇಕಾದ ಅವಶ್ಯಕತೆಯಿರುವಲ್ಲಿ ಎಲ್ಲಾ ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ಸಾಮಾಜಿಕ ಸಮಾನತೆಯ, ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸುವ ಘೋಷಣೆ ಕೊಡಲೇಬೇಕಾಗುತ್ತದೆ.

> ***ಸಮಾಜ ಒಂದು ಅತ್ಯಂತ ಬಿಕ್ಕಟ್ಟಿನ ಸ್ಥಿತಿಗೆ ಬಂದಾಗ, ಆಳುವ ವರ್ಗಗಳ ಹಳೆಯ ವಿಧಾನಗಳು ನಿಷ್ಪ್ರಯೋಜಕವೇನಿಸಿದಾಗ ಇಂತಹ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ಶೋಷಣೆ ಮುಂದುವರೆಸುವ ಹೊಸ ವಿಧಾನಗಳನ್ನು ಒದಗಿಸಲು. ಬಿಜೆಪಿ ಇದೇ ಸಾಲಿಗೆ ಸೇರಿದ ಪಕ್ಷ.***

ಇಂತಹ ವಾತಾವರಣದಲ್ಲಿ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಬಿಜೆಪಿ ತಾನೊಂದು ಸಮರ್ಥ ರಾಜಕೀಯ ಪಕ್ಷವಾಗುವುದು ಹೇಗೆ ಎಂಬ ಹುಡುಕಾಟದಲ್ಲಿ ಕೊನೆಗೂ ಈ 'ಹಿಂದುತ್ವ'ವೇ ತನ್ನ ಯಶಸ್ಸಿಗೆ ಏಕೈಕ ಮಾರ್ಗ ಎಂದು ಕಂಡುಕೊಂಡಿದೆ. "ಹಿಂದೂ ರಾಷ್ಟ್ರೀಯವಾದ"ದ ಪ್ರತಿಪಾದನೆ ಮತ್ತು ಮುಸ್ಲಿಮರನ್ನು "ಆಂತರಿಕ ಶತ್ರು" ಎಂದು ಗುರುತಿಸಿಕೊಂಡು ಅದು ಪಡೆದುಕೊಂಡಿರುವ ಕೋಮುವಾದೀ ಸ್ವರೂಪದೊಂದಿಗೆ ಆರ್ಥಿಕ ಉದಾರೀಕರಣ, ಖಾಸಗೀಕರಣಕ್ಕೆ ಬೆಂಬಲ ಮುಂತಾದ ಅದರ ಬಲಪಂಥೀಯ ಆರ್ಥಿಕ ಧೋರಣೆಗಳು ಬಿಜೆಪಿಯನ್ನು ನಮ್ಮ ದೇಶದ ರಾಜಕೀಯರಂಗದಲ್ಲಿ ಒಂದು ವಿಶಿಷ್ಟ ಶಕ್ತಿಯನ್ನಾಗಿ ಮಾಡಿವೆ- ದೊಡ್ಡ ಬಂಡವಾಳಿಗರು ಹಾಗೂ ಭೂ ಮಾಲಕ ವರ್ಗಗಳ ಪ್ರತಿಗಾಮಿ ವಿಭಾಗಗಳನ್ನು ಪ್ರತಿನಿಧಿಸುವ ವಿಶಿಷ್ಟ ರಾಜಕೀಯ ಪಕ್ಷವನ್ನಾಗಿ ಮಾಡಿವೆ.

[ಆಧಾರ: "ದಿ ಮಾರ್ಕ್ಸಿಸ್ಟ್"ನಲ್ಲಿ ಜುಲೈ-ಸೆಪ್ಟೆಂಬರ್ 1992 ರ ಸಂಚಿಕೆಯಲ್ಲಿ ಪ್ರಕಟವಾದ ಕಾಂ. ಪ್ರಕಾಶ್ ಕಾರಾಟ್‌ರವರ ಲೇಖನ]

ಆತ್ಮರಕ್ಷಣೆಯ ಪ್ರಯತ್ನದಲ್ಲಿ ಭಾರತದ ಬಂಡವಾಳಿಗರು


ಹೊಸ ಆರ್ಥಿಕ ನೀತಿ ಎಲ್ಲ ದೇಶೀ ಬಂಡವಾಳಿಗರಿಗೆ ಎಲ್ಲ ರೀತಿಯಿಂದ ಅನುಕೂಲಕರವಾಗೇನೂ ಇಲ್ಲ. ಹಲವು ಬಂಡವಾಳಿಗರಿಗೆ ಹೊಸ ನೀತಿಗಳಿಂದ ಹೊಡೆತಗಳೂ ಬಿದ್ದಿವೆ. ಆಮದು ಉದಾರೀಕರಣದಿಂದ ಬಂಡವಾಳ ಸರಕುಗಳ ಆಮದು ಸುಲಭವಾಗಿದೆ. ಇದರಿಂದ ದೇಸೀ ಉತ್ಪಾದಕರಿಗೆ ವಿದೇಶೀಯರ ಸ್ಪರ್ಧೆ ಎದುರಾಗಿದೆ. ಪಾರ್ಲೆ ಎಂಬ ದೇಶೀ ಕಂಪನಿಯನ್ನು ಕೋಕಾ ಕೋಲಾ ಎಂಬ ಬಹುರಾಷ್ಟ್ರೀಯ ಕಂಪನಿ ನುಂಗಿ ಹಾಕಿದೆ. ದಶಕಗಳ ಕಾಲ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಭಾರತದ ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತ ಬಂದಿದ್ದ ಈ ಪಾರ್ಲೆ ಈಗ ಸೋತಿದೆ. ಇನ್ನೂ ಹಲವು ಸೋಲುಗಳು ಭವಿಷ್ಯದ ಗರ್ಭದಲ್ಲಿ ಅಡಗಿದೆ. ಹಲವು ದೇಸೀ ಕಂಪನಿಗಳು ಮುಳುಗಲಿವೆ.

ಈ ಸ್ಪರ್ಧೆಯ ಬಿಸಿ ದೇಶದ ಬಂಡವಾಳಿಗರಿಗೆ ಈಗ ತಟ್ಟುತ್ತಿದೆ. ಇದುವರೆಗೆ ಉದಾರೀಕರಣ ಜಗತ್ತಿನ ಆರ್ಥಿಕದೊಂದಿಗೆ ನಮ್ಮ ಆರ್ಥಿಕ ವಿಲೀನವಾಗಲು ಸಹಾಯಕ ಎಂದೆಲ್ಲ ಹೇಳುತ್ತಿದ್ದ ಒಕ್ಕೊರಲು ಈಗ ಒಡೆದಿದೆ ಯಾಕೆಂದರೆ ಕೆಲವು ದೇಶೀ ಬಂಡವಾಳಿಗರಿಗಾದರೂ ಈಗ ಉದಾರೀಕರಣ ಹೊಡೆತ ನೀಡಿದೆ.

ದೇಶದ ವಾಣಿಜ್ಯರಾಜಧಾನಿಯಾದ ಮುಂಬಯಿಯಲ್ಲಿ ಕೆಲವು ದಿನಗಳ ಹಿಂದೆ ದೇಶದ ದೊಡ್ಡ ಬಂಡವಾಳಿಗರ ಸಭೆಯೊಂದು ನಡೆಯಿತು. ಇಲ್ಲಿ ಎರಡು ತರಹದ ಅಭಿಪ್ರಾಯಗಳನ್ನು ಈ ಬಂಡವಾಳಿಗರು ವ್ಯಕ್ತಪಡಿಸಿದರು. ಒಂದು ಗುಂಪು ಉದಾರೀಕರಣ ಅಡೆ ತಡೆಯಿಲ್ಲದೆ ಮುಂದುವರಿಯಬೇಕೆಂದರೆ ಇನ್ನೊಂದು ಗುಂಪು ಉದಾರೀಕರಣ ನಿಧಾನ ಗತಿಯಲ್ಲಿ ಸಾಗಬೇಕು ಎಂದಿತು. ಅಂದರೆ ಬಂಡವಾಳಿಗರೆಲ್ಲ ಇನ್ನೂ ಉದಾರೀಕರಣದ ಪರವಾಗೇ ಇದ್ದಾರೆ. ತಮ್ಮ ಲಾಭಕ್ಕೆ ಹೊಡೆತ ಬಿದ್ದಿರುವ ಕೆಲವರು ಮಾತ್ರ ಈ ಹೊಡೆತ ತಪ್ಪಿಸಿಕೊಳ್ಳಲು ಸಮಯಾವಕಾಶ ಕೇಳುತ್ತಿದ್ದಾರೆ ಅಷ್ಟೇ. ಆದರೆ ಉದಾರೀಕರಣದ ಒಬ್ಬೊಬ್ಬ ಬಂಡವಾಳಿಗನಿಗಾಗಿ ಒಂದೊಂದು ತರಹ ಇರಲು ಸಾಧ್ಯವಿಲ್ಲ ತಾನೆ? ಉದಾರೀಕರಣ ಮುಂದುವರಿದಂತೆಲ್ಲ ಈ ದೇಶೀ ಬಂಡವಾಳಿಗರ ನಡುವಿನ ವೈರುಧ್ಯ ಇನ್ನೂ ಹೆಚ್ಚಲಿದೆ.

ಮನಮೋಹನಸಿಂಗರಿಗೆ ಸಾಮ್ರಾಜ್ಯಶಾಹಿಗಳ ಕಿರೀಟ

ಉದಾರೀಕರಣದ ಹೆಸರಿನಲ್ಲಿ ದೇಶವನ್ನೇ ಮಾರುತ್ತಿರುವ ಅರ್ಥಮಂತ್ರಿ ಮನಮೋಹನಸಿಂಗರಿಗೆ ಯೂರೋಪಿನ ಸಾಮ್ರಾಜ್ಯಶಾಹಿಗಳ ಪತ್ರಿಕೆ 'ಯುರೋಮನಿ' ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳ ಅತ್ಯುತ್ತಮ ಅರ್ಥಮಂತ್ರಿ ಎಂಬ ಬಿರುದು ಬಹುಮಾನ ನೀಡಿದೆ.



ನರಸಿಂಹರಾವ್ ಸರಕಾರದ 28ನೇ ತಿಂಗಳಲ್ಲಿ

ಈ ಪುರಸ್ಕಾರದಿಂದ ಉಬ್ಬಿಹೋದ ಮನಮೋಹನಸಿಂಗರು ಈ ಸಾಮ್ರಾಜ್ಯಶಾಹಿಗಳಿಗೆ 'ಉದಾರೀಕರಣ ನಿಲ್ಲದೇ ಮುಂದುವರಿಯುತ್ತದೆ ಇನ್ನೂ ಹೆಚ್ಚಿನ ಸುಧಾರಣೆಗಳ, ಅವಶ್ಯಕತೆ ಇದೆ. ನಾವು ಅದನ್ನು ಸಾಧಿಸುತ್ತೇವೆ' ಎಂದೆಲ್ಲ ಭರವಸೆ ನೀಡಿದ್ದಾರೆ. ಸಾಮ್ರಾಜ್ಯಶಾಹಿಗಳಿಗೆ ಅವರ ಲಾಭದ ಬಾಗಿಲುಗಳನ್ನು ತೆರೆದು ದೇಶದ ಸಂಪತ್ತನ್ನೆಲ್ಲ ಕೊಳ್ಳೆಹೊಡೆಯಲು ಅವಕಾಶ ಮಾಡಿಕೊಟ್ಟಿರುವ ಈ ಅರ್ಥಮಂತ್ರಿ ನಿಜಕ್ಕೂ ಬಹಳ ಉದಾರಿಯಾಗಿ ಕಂಡಿರುವುದು ಸಹಜವಲ್ಲವೆ? ಇಂತಹವರಿಗಲ್ಲದೆ ಇನ್ನಾರಿಗೆ ಪುರಸ್ಕಾರ ದೊರೆತೀತು?

ಇಂತಹ ಪುರಸ್ಕಾರಪಡೆದ ಮೇಲೆ ಈ ಸಾಮ್ರಾಜ್ಯಶಾಹಿಗಳಿಗೆ ಅಜೀವ ಪರ್ಯಂತ ಕೃತಜ್ಞನಾಗಿದ್ದು ಅವರ ಸೇವೆಯನ್ನು ಮಾಡುವುದು ಮನಮೋಹನರ ಕರ್ತವ್ಯವಲ್ಲವೆ?

ಆದರೆ ಈತನಿಂದಾಗಿ ಸರ್ವಸ್ವವನ್ನು ಕಳೆದುಕೊಳ್ಳುತ್ತಿರುವ ಈ ದೇಶದ ಬಡಜನತೆ ಈತನನ್ನು ಮತ್ತು ಈತನ ಸರ್ಕಾರವನ್ನು ಹೇಗೆ ಪುರಸ್ಕರಿಸಬೇಕು?

ಮುಗ್ಧಜನತೆಗೆ ವಿಷವುಣಿಸುವವರು

ಯಾರು ಗೊತ್ತೆ? ದೇಶದೊಳಗೆ ಹೊಸ ತಂತ್ರಜ್ಞಾನ ತಂದು, ಹೊಸ ಯುಗವನ್ನೇ ಸೃಷ್ಟಿ ಮಾಡುವರೆಂಬ ಹೊಗಳಿಕೆಗೆ ಪಾತ್ರರಾದ ಬಹುರಾಷ್ಟ್ರೀಯ ಕಂಪನಿಗಳು.

ಈ ಬಹುರಾಷ್ಟ್ರೀಯ ಕಂಪನಿಗಳು ಲಾಭಕೋರರು, ಲಾಭಕ್ಕಾಗಿ ಎಂತಹ ನೀಚ ಕೆಲಸವನ್ನಾದರೂ ಸರಿ ಮಾಡುತ್ತಾರೆ-ಮಾಡಿಸುತ್ತಾರೆ. ಈ ಎಲ್ಲ ನೀಚ ಕೆಲಸಗಳನ್ನು ಮುಚ್ಚಿ ಹಾಕಲೂ ಬಲ್ಲ ನಿಪುಣರು ಅವರು. ಆದರೆ ಎಲ್ಲವನ್ನು ಮುಚ್ಚಿಹಾಕಲು ಬರುವುದಿಲ್ಲವಲ್ಲ.

ಗ್ಲಾಕ್ಸೊ ಎಂಬ ಬಹುರಾಷ್ಟ್ರೀಯ ಕಂಪನಿ ಔಷಧಿಗಳನ್ನು ಉತ್ಪಾದಿಸುತ್ತಿದೆ. ಔಷಧಿಗಳನ್ನು ಉತ್ಪಾದಿಸುವ ಕಂಪನಿಗಳು ಔಷಧಿಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು. ಔಷಧಗಳಲ್ಲಿ ವಿಷಪೂರಿತ, ದೋಷಪೂರಿತ ರಾಸಾಯನಿಕಗಳು ಸೇರದಂತೆ ನೋಡಿಕೊಳ್ಳಬೇಕು. ಆದರೆ ಗ್ಲಾಕ್ಸೊ ತಯಾರಿಸಿದ ಒಂದು ಔಷಧದಲ್ಲಿ ಈ ಗುಣಮಟ್ಟ ಇಲ್ಲದಿರುವುದನ್ನು ಮಹಾರಾಷ್ಟ್ರ ಔಷಧಿ ಆಡಳಿತ ಪತ್ತೆಹಚ್ಚಿತು. ಈ ಔಷಧಿಯನ್ನು ಮಾರುಕಟ್ಟೆಗೆ ಕಳುಹಿಸದೆ ನಾಶಮಾಡುವಂತೆ ಆಜ್ಞೆ ಮಾಡಲಾಯಿತು. ಆದರೆ ಈ ಕಂಪನಿ ಅದೇ ಔಷಧಿಯನ್ನು ಯಾವುದೋ ಕಂಟ್ರಾಕ್ಟರನ ಮೂಲಕ ವಿತರಿಸಿತು. ಅಂದರೆ ಮಾರುಕಟ್ಟೆಗೆ ಕಳುಹಿಸಿತು. ಈಗ ಅದು ತಾನು ಆ ಕಂಟ್ರಾಕ್ಟರಿಗೆ ನಾಶಮಾಡಲು ನೀಡಿದ್ದೇವೆ ಎನ್ನುತ್ತಿದೆ. ಆದರೆ ಆತನೊಂದಿಗೆ ಅಂತಹ ಒಪ್ಪಂದ ಮಾಡಿಕೊಂಡಿಲ್ಲ. ಗುಣಮಟ್ಟ ಇಲ್ಲದಿದ್ದರೂ ಜನ ಉಪಯೋಗಿಸಬೇಕು. ವಿಷವಾದರೂ ಬಹುರಾಷ್ಟ್ರೀಯ ಕಂಪನಿ ಉತ್ಪಾದಿಸಿದರೆ ಅಮೃತವೆಂದು ಸ್ವೀಕರಿಸಬೇಕು ಎಂದಿರಬಹುದೆ ಅವರ ಧೋರಣೆ?

ಏರಿದ ಹಣದುಬ್ಬರ ಗಗನಕ್ಕೇರುತ್ತಲೇ ಇರುವ ಬೆಲೆಗಳು

ಇದು ಕೇಂದ್ರ ಮಂತ್ರಿ ಮಂಡಳದ ಸದಸ್ಯರಿಗಾಗಲಿ ಉನ್ನತ ಅಧಿಕಾರಿಗಳಿಗಾಗಲಿ ಕೂಡಲೇ ಅನುಭವಕ್ಕೆ ಬರುವಂತಹದ್ದಲ್ಲ. ಆದರೆ ದೇಶದ ಬಡ ಜನಕೋಟಿಗೆ ಕೂಡಲೇ ಅನುಭವಕ್ಕೆ ಬರುವಂತಹದ್ದು. ಹಣದುಬ್ಬರ ಕಡಿಮೆಯಾಗುತ್ತಿದೆ ಎಂದು ಸರ್ಕಾರ ಅಂಕಿ ಸಂಖ್ಯೆಗಳ ಸರ್ಕಸ್ಸು ಮಾಡುತ್ತಾ ಅರೆ ಸುಳ್ಳುಗಳನ್ನು ಹೇಳುತ್ತಲೇ ಇತ್ತು. ಈಗ ಹಣದುಬ್ಬರದ ಪ್ರಮಾಣವೇ ಶೇ. 7.8 ರಷ್ಟಕ್ಕೇ ಏರಿದೆ. ಅಂದರೆ ಬೆಲೆಗಳು ಇನ್ನೂ ವೇಗವಾಗಿ ಏರುತ್ತಿವೆ ಎಂದರ್ಥ.

ಈ ಸರ್ಕಾರಕ್ಕೆ ಬಡಜನತೆಯ ಬಗ್ಗೆ ಎಂತಹ ಕಾಳಜಿಯಿದೆ ಎಂಬುದನ್ನು ಇದು ತೋರಿಸುತ್ತದೆ. ಇದೇ ಸಮಯದಲ್ಲಿ ಲಾರಿಗಳ ಮುಷ್ಕರ ನಡೆಯಿತು. ಬೆಂಕಿಗೆ ತುಪ್ಪ ಸುರಿದಂತೆ ಅವಶ್ಯಕ ವಸ್ತುಗಳ ಬೆಲೆಗಳು ಯದ್ವಾ ತದ್ವಾ ಏರಿವೆ. ನಮ್ಮ ದೇಶದಲ್ಲಿ ಬೆಲೆಗಳು ಏರುವಾಗ ವೇಗ ಏರುತ್ತವೆ. ಆದರೆ ಇಳಿಯುವಾಗ (ಆಕಸ್ಮಾತ್ ಇಳಿದರೆ) ಬಹಳ ನಿಧಾನ. ಇವೆಲ್ಲವೂ ಬಂಡವಾಳಿಗರಿಗೆ ಅನುಕೂಲ ಬಡವರ ಹೊಟ್ಟೆಯ ಮೇಲೆ ಹೊಡೆವ ಕ್ರಿಯೆಗಳು.

ಈ ನಡುವೆ ಪುರಸ್ಕಾರಗಳನ್ನು ಪಡೆಯುತ್ತ ಸಾಮ್ರಾಜ್ಯಶಾಹಿಗಳ ಪ್ರಶಂಸೆಯ ಹೊಳೆಯಲ್ಲಿ ಮೀಯುತ್ತಿದ್ದಾರೆ ನಮ್ಮ ಅರ್ಥಮಂತ್ರಿ ಮನಮೋಹನಸಿಂಗರು.

ಎಂತಹ ವಿಪರ್ಯಾಸ!!



-- ವಿಶ್ವ

ರಮೇಶ್ ಭಂಡಾರಿ ಉಚ್ಚಾಟನೆ ಆಗ್ರಹಿಸಿ ರ್‍ಯಾಲಿ

ತ್ರಿಪುರಾ ರಾಜ್ಯಪಾಲ ರಮೇಶ್ ಭಂಡಾರಿಯವರನ್ನು ಹುದ್ದೆಯಿಂದ ತೆಗೆದುಹಾಕುವಂತೆ ಒತ್ತಾಯಿಸಿ ಸೆ. 26 ರಂದು ಯುವಜನರು ಅಗರ್ತಲಾದಲ್ಲಿ ಬೃಹತ್ ರ್‍ಯಾಲಿಯೊಂದನ್ನು ನಡೆಸಿದರು. ಡಿ.ವೈ.ಎಫ್.ಐ ರಾಜ್ಯ ಸಮಿತಿ ಕರೆಯ ಮೇರೆಗೆ ನಡೆದ ಈ ರ್‍ಯಾಲಿಯಲ್ಲಿ 8,000 ಕ್ಕೂ ಹೆಚ್ಚು ಜನರು ಭಾಗವಹಿಸಿದರು.

ರಾಜಧಾನಿಯ ವಿವಿಧ ಸ್ಥಳಗಳಿಂದ ಮೆರವಣಿಗೆ ಹೊರಟ ಯುವಜನರು ನಗರದ ಕೇಂದ್ರ ಪ್ರದೇಶವಾದ ಕಮಾನ್ ಚೌಮುಹನಿಯಲ್ಲಿ ಬಂದು ಸೇರಿದರು.

ತನ್ನ ರಾಜಕೀಯ ಲಾಭಕ್ಕಾಗಿ ಕೆಲವು ರಾಜಕೀಯ ನಾಯಕರನ್ನು ಹೇರು ಹಗರಣದಲ್ಲಿ ಸಿಲುಕಿಸಲು ಸಾಂವಿಧಾನಿಕ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡ ಭಂಡಾರಿಯವರಂಥ ಪಿತೂರಿಗಾರರು ಅಧಿಕಾರದಲ್ಲಿ ಮುಂದುವರಿಯುವುದನ್ನು ರಾಜ್ಯ ತ್ರಿಪುರಾ ಜನತೆ ಸಹಿಸುವುದಿಲ್ಲ ಎಂದು ರ್‍ಯಾಲಿಯಲ್ಲಿ ಮಾತನಾಡಿದ ನಾಯಕರು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ರಾಜ್ಯದ ಎಡರಂಗ ಸರಕಾರದ ವಿರುದ್ಧ ರಾಜ್ಯಪಾಲ ರಮೇಶ್ ಭಂಡಾರಿ ಕೆಟ್ಟ ಉದ್ದೇಶ ಹೊಂದಿರುವುದನ್ನು ನಾಯಕರು ಬಹಿರಂಗ ಪಡಿಸಿದರು.

ಮುಖ್ಯಮಂತ್ರಿ ದಶರಥ್ ದೇಬ್ ವಿರುದ್ಧ ಭಂಡಾರಿ ಮಾಡಿರುವ ಟೀಕೆ ದೇಶದ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಗೆ ಅಪಾಯಕಾರಿಯಾದುದು ಎಂದು ಹೇಳಿದ ನಾಯಕರು, ಭಂಡಾರಿಯವರನ್ನು ತಕ್ಷಣ ತೆಗೆದುಹಾಕುವಂತೆ ಆಗ್ರಹ ಪಡಿಸಿದರು.

ಈ ಬೇಡಿಕೆಯನ್ನು ಈಡೇರಿಸುವಂತೆ ಆಗ್ರಹಪಡಿಸಿ ಡಿ.ವೈ.ಎಫ್.ಐ ರಾಜ್ಯ ಸಮಿತಿ ರಾಷ್ಟ್ರಪತಿ, ಪ್ರಧಾನಿ ಹಾಗೂ ಲೋಕಸಭೆಯಲ್ಲಿ ಸಿಪಿಐ(ಎಂ) ನಾಯಕರಾಗಿರುವ ಸೋಮನಾಥ ಚಟರ್ಜಿಯವರಿಗೆ ತಂತಿ ಸಂದೇಶಗಳನ್ನು ಕಳುಹಿಸಿದೆ.

ಪಂಜಾಬ್‌ನಲ್ಲಿ ಶಾಂತಿ ನೆಲೆಗೊಳಿಸಲು ಆಂದೋಲನ

ಪಂಜಾಬ್‌ನಲ್ಲಿ ಚಿರಕಾಲ ಬಾಳುವಂಥ ಶಾಂತಿ ಹಾಗೂ ನ್ಯಾಯವನ್ನು ಪ್ರತಿಷ್ಠಾಪಿಸಲಿಕ್ಕಾಗಿ ಜನರನ್ನು ಬೃಹತ್ ಪ್ರಮಾಣದಲ್ಲಿ ಅಣಿನೆರಯಿಸಲು ಸಿಪಿಐ(ಎಂ) ಪಂಜಾಬ್ ರಾಜ್ಯ ಘಟಕ ತೀರ್ಮಾನಿಸಿದೆ. ಹೊಸ ಆರ್ಥಿಕ ನೀತಿಗಳು ತಂದಿರುವ ಸಂಕಷ್ಟ, ರಾಜ್ಯ ಆಡಳಿತದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ವಿರುದ್ಧವೂ ಹೋರಾಡಲು ಅದು ನಿಶ್ಚಯಿಸಿದೆ.

ಈ ಉದ್ದೇಶದಿಂದ ಅಕ್ಟೋಬರ್ 10 ರಿಂದ ನವೆಂಬರ್ 10 ರವರೆಗೆ ರಾಜ್ಯಾದ್ಯಂತ ರಾಜಕೀಯ ಸಮ್ಮೇಳನಗಳನ್ನು ನಡೆಸುವ ಕಾರ್ಯಕ್ರಮವೊಂದನ್ನು ಅದು ರೂಪಿಸಿದೆ. ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಜಾಥಾವೊಂದನ್ನು ಸಂಘಟಿಸುವ ಗುರಿಯೊಂದಿಗೆ ನವೆಂಬರ್ ಕೊನೆಯ ವಾರದಲ್ಲಿ ವಿಶಾಲ ತಳಹದಿಯ ರಾಜ್ಯ ಮಟ್ಟದ ಸಮಾವೇಶವೊಂದನ್ನು ಏರ್ಪಡಿಸಲು ಕೂಡ ಪಕ್ಷ ಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಿಪಿಐ ಮತ್ತು ಇತರ ಸಮಾನಮನಸ್ಕ ಪಕ್ಷಗಳು ಹಾಗೂ ವ್ಯಕ್ತಿಗಳನ್ನು ಸಿಪಿಐ(ಎಂ) ಕೋರಿದೆ.

ಸೆಪ್ಟೆಂಬರ್ 22 ರಿಂದ 24 ರವರೆಗೆ ಚಂಡೀಗಢದಲ್ಲಿ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ಈ ಸಂಬಂಧ ಮಹತ್ವದ ನಿರ್ಣಯವನ್ನು ಪಕ್ಷ ಕೈಗೊಂಡಿತು.

ರಾಜ್ಯದಲ್ಲಿ ಸುಮಾರು ಮಟ್ಟಿಗೆ ನೆಲೆಸಿರುವ ಶಾಂತಿಯ ವಾತಾವರಣವನ್ನು ಉಳಿಸಿಕೊಂಡು ರಾಜ್ಯವನ್ನು ಕಾಡುತ್ತಿರುವ ದೀರ್ಘಕಾಲದ ಪ್ರಶ್ನೆಗಳನ್ನು ಬಗೆಹರಿಸಲು ಕಾಂಗ್ರೆಸ್(ಐ) ಸರಕಾರ ಯಾವುದೇ ರಚನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಗತ್ ರಾಮ್ ಪಾಸ್ಲಾ ಟೀಕಿಸಿದ್ದಾರೆ.

ಕೇಂದ್ರ ಸರಕಾರದ ಸಂಕುಚಿತ ಧೋರಣೆಗಳಿಂದಾಗಿ ಹಿಂದೆ ಅನೇಕ ಸುವರ್ಣಾವಕಾಶಗಳನ್ನು ಕೈ ತಪ್ಪಿ ಹೋಗಿರುವುದನ್ನು ನೆನಪಿಸಿರುವ ಅವರು ಇದರಿಂದಾಗಿ ಪಂಜಾಬ್ ಜನರು ಕಷ್ಟಕೋಟಲೆಗಳನ್ನು ಅನುಭವಿಸಬೇಕಾಗಿದೆ ಎಂದು ವಿಷಾದಿಸಿದ್ದಾರೆ.

ಖಂಡನೆ

ಮಹಾ ಪಂಜಾಬ್ ರಚನೆಗೆ ಕರೆ ನೀಡಿರುವುದೇ ಮೊದಲಾದ ಮುಖ್ಯಮಂತ್ರಿ ಬಿಯಾಂತ್ ಸಿಂಗ್‌ರ ಹಲವು ಹೇಳಿಕೆಗಳನ್ನು ರಾಜ್ಯ ಸಮಿತಿ ಟೀಕಿಸಿದೆ. ಹಾಗೂ ಖಿಂಡಿಸಿದೇಂಥ ಕರೆಯಿಂದ ಕೋಮುವಾದಿಗಳು ಹಾಗೂ ಪ್ರತ್ಯೇಕತಾವಾದಿಗಳ ಬಲ ಹೆಚ್ಚಾಗುತ್ತದೆ ಎಂದು ವಿಶ್ಲೇಷಿಸಿದೆ.

ಮುಗ್ಧ ಜನರ ಮೇಲೆ ಕೆಲವು ಪೋಲೀಸ್ ಅಧಿಕಾರಿಗಳು ದೌರ್ಜನ್ಯ ನಡೆಸುತ್ತಿರುವ ಬಗ್ಗೆ ರಾಜ್ಯ ಸಮಿತಿ ಕಳವಳ ವ್ಯಕ್ತಪಡಿಸಿದೆ.

ಮಧ್ಯ ಪ್ರದೇಶ ಸಿಐಟಿಯು ನಾಯಕರ ಬಂಧನ

ಜವಳಿ ಕಾರ್ಮಿಕರ ಹೋರಾಟದಲ್ಲಿ ಪಾಲ್ಗೊಂಡಿರುವ ಮಧ್ಯಪ್ರದೇಶ ಸಿಐಟಿಯು ನಾಯಕರನ್ನು ಪೋಲೀಸರು ಸೆಪ್ಟೆಂಬರ್ 25 ರಂದು ಬಂಧಿಸಿದರು. ಕೇಂದ್ರ ಸಚಿವರು ಹಾಗೂ ಕಾಂಗ್ರೆ ನಾಯಕರಾದ ಸೀತಾರಾಂ ಕೇಸರಿ, ಬಲರಾಂ ಸಿಂಗ್ ಯಾದವ್ ಮತ್ತು ಮಾಧವ ರಾವ್ ಸಿಂಧಿಯಾ ಗ್ವಾಲಿಯರ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಿ ಪ್ರತಿಭಟನೆ ವ್ಯಕ್ತಪಡಿಸಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್, ಜವಳಿ ಕಾರ್ಮಿಕರ ಜಂಟಿ ಸಂಘ(ಸಿಐಟಿಯು)ದ ಪ್ರಧಾನ ಕಾರ್ಯದರ್ಶಿ ರಾಮ್ ವಿಲಾಸ್ ಗೋಸ್ವಾಮಿ ಸಹಿತ ಅನೇಕ ಟ್ರೇಡ್ ಯೂನಿಯನ್ ನಾಯಕರನ್ನು ಬಂಧಿಸಲಾಯಿತು.

ಜೆಯಾಜಿ ಕಾಟನ್ (ಜೆಸಿ) ಮಿಲ್ಲನ್ನು ತೆರೆಯಬೇಕು ಹಾಗೂ ಕಳೆದ 14 ತಿಂಗಳಿಂದ ಮುಚ್ಚಿರುವ ಈ ಮಿಲ್ಲಿನ ಕಾರ್ಮಿಕರ ವೇತನವನ್ನು ನೀಡಬೇಕೆಂದು ಒತ್ತಾಯಿಸಿ ಕಪ್ಪು ಬಾವುಟ ಪ್ರದರ್ಶನವನ್ನು ನಡೆಸಲಾಯಿತು.

ಗ್ವಾಲಿಯರ್‌ಗೆ ಭೇಟಿ ನೀಡುವ ಎಲ್ಲಾ ಕೇಂದ್ರ ನಾಯಕರು ರಾಜ್ಯಪಾಲ ಹಾಗೂ ಸಂಸತ್ ಸದಸ್ಯರಿಗೆ ಕಪ್ಪು ಬಾವುಟ ತೋರಿ ಪ್ರತಿಭಟನೆ ವ್ಯಕ್ತಪಡಿಸಲು ಜೆ.ಸಿ. ಮಿಲ್ ಕಾರ್ಮಿಕರ ಹೋರಾಟಕ್ಕೆ ನೇತೃತ್ವ ನೀಡಿರುವ ಜಂಟಿ ಹೋರಾಟ ಸಮಿತಿ ನಿರ್ಧರಿಸಿದೆ.

ಸೆ. 25 ರ ಪ್ರದರ್ಶನದಲ್ಲಿ ಪಾಲ್ಗೊಂಡ ಸಿಐಟಿಯು ನಾಯಕರು ಹಾಗೂ ಕಾರ್ಯಕರ್ತರಲ್ಲದೆ ಇಂಟಕ್‌ನ ಮೂವರು ಹಾಗೂ ಏಟಕ್‌ನ ಮೂವರು ನಾಯಕರನ್ನು ಕೂಡಾ ಬಂಧಿಸಲಾಯಿತು.

ಜೆಸಿ ಮಿಲ್ಲನ್ನು ಕಳೆದ ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಮುಚ್ಚಲಾಗಿದೆ. ನೌಕರರು, ಕಾರ್ಮಿಕರು ಹಾಗೂ ಅವರ ಕುಟುಂಬ ವರ್ಗದವರು ಉಪವಾಸದ ದವಡೆಯಲ್ಲಿದ್ದಾರೆ. ಇಷ್ಟಾದರೂ ಹಿಂದಿನ ಬಿಜೆಪಿ ಸರಕಾರ ಅಥವಾ ಈಗ ರಾಷ್ಟ್ರಪತಿ ಆಡಳಿತದಡಿ ಇರುವ ಪ್ರಸಕ್ತ ಆಡಳಿತ ವ್ಯವಸ್ಥೆ ಬೇಡಿಕೆಗಳನ್ನು ಈಡೇರಿಸಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ.

ಮಾಧವರಾವ್ ಸಿಂಧಿಯಾ ಕೂಡ ಸದಸ್ಯರಾಗಿರುವ ನಾಗರಿಕ ಸಮಿತಿಯೊಂದು ಅವರ ಸಮ್ಮುಖದಲ್ಲೇ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು. ಆದರೆ ಸಿಂಧಿಯಾರ ಉಪಸ್ಥಿತಿಯಲ್ಲಿ ಟಿ.ಯು ನಾಯಕರನ್ನು ಬಂಧಿಸಿರುವುದು ಗಮನಾರ್ಹವಾಗಿದೆ. ನಾಗರಿಕ ಸಮಿತಿಯು ಕಾರ್ಮಿಕರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೌಹಾರ್ದತೆಯನ್ನು ತೋರುತ್ತಿದೆ.

ಬಿಹಾರ ರ್‍ಯಾಲಿಗೆ ಸಿದ್ಧತೆ

ಬಿಹಾರ ರಾಜ್ಯದಲ್ಲಿ ತೀಕ್ಷ್ಣವಾದ ಭೂಹೋರಾಟ ನಡೆಯುತ್ತಿರುವುದು ಓದುಗರಿಗೆ ತಿಳಿದಿದೆಯಷ್ಟೆ. ಈಗ ಚಳುವಳಿಯ ಸಾಧನೆಗಳನ್ನು ಕ್ರೋಢೀಕರಿಸಿ ಅದನ್ನು ತೀವ್ರಗೊಳಿಸಲು ರಾಜ್ಯ ಕಿಸಾನ್ ಸಭಾ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳು ತೀರ್ಮಾನಿಸಿವೆ.

ಇದರ ಅಂಗವಾಗಿ ನವೆಂಬರ್ ಐದರಂದು ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವರ ನಿವಾಸದ ಮುಂದೆ ಬೃಹತ್ ರ್‍ಯಾಲಿಯೊದನ್ನು ನಡೆಸಲಾಗುತ್ತದೆ. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಎಸ್. ರಾಮಚಂದ್ರ ಪಿಳ್ಳೈ, ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ರಾಮನಾರಾಯಣ ಗೋಸ್ವಾಮಿ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ (ಎ.ಐ.ಎ.ಡಬ್ಲ್ಯುಯು.) ಸಹ ಕಾರ್ಯದರ್ಶಿ ವಿಜಯ ರಾಘವನ್ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

ಹೊಸ ಮಾಸಲಾತಿ ನೀತಿಗೆ ಅನುಗುಣವಾಗಿ ಇತರ ಹಿಂದುಳಿದ ವರ್ಗ (ಓ.ಬಿ.ಸಿ.) ಗಳಲ್ಲಿನ ಅತೀ ವಂಚಿತ ವಿಭಾಗಗಳಿಗೆ ಆದ್ಯತೆ ನೀಡುವುದರೊಂದಿಗೆ ಭೂ ಸುಧಾರಣೆಯನ್ನು ಜಾರಿ ಮಾಡುವಂತೆ ಆಗ್ರಹಪಡಿಸುವುದು ರ್‍ಯಾಲಿಯ ಮುಖ್ಯ ಉದ್ದೇಶವಾಗಿದೆ.

ಚುನಾಯಿತ ಪ್ರತಿನಿಧಿಗಳಿಗೆ ಸಾಕಷ್ಟು ಶಾಸನಾತ್ಮಕ ಹಾಗೂ ಆಡಳಿತಾತ್ಮಕ ಅಧಿಕಾರಗಳೊಂದಿಗೆ ಬಿಹಾರ 16 ಜಿಲ್ಲೆಗಳಲ್ಲಿ ಸ್ವಾಯುತ್ತ ಮಂಡಳಿಗಳ ಸ್ಥಾಪನೆ, ಬುಡಕಟ್ಟು ಜನರಿಗೆ ಹೆಚ್ಚಿನ ಪ್ರಾಧಾನ್ಯ ಹಾಗೂ ಬುಡಕಟ್ಟೇತರ ಶೋಷಿತ ಜನರ ಸುರಕ್ಷತೆ ಮೊದಲಾದವುಗಳು ಇತರ ಪ್ರಮುಖ ಬೇಡಿಕೆಗಳಾಗಿವೆ.

ಕಾಂಗ್ರೆ ಹಲ್ಲೆಗೆ ಬಲಿ

ಪ.ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಸೆ. 21 ರಂದು ಕಾಂಗ್ರೆಸ್(ಐ) ಗೂಂಡಾಗಳು ನಡೆಸಿದ ಹಲ್ಲೆಯಲ್ಲಿ ಡಿ.ವೈ.ಎಫ್.ಐ ಕಾರ್ಯಕರ್ತ ತುಕೂನ್ ಶೇಖ್ ಬಲಿಯಾಗಿದ್ದಾರೆ. ಇತರ ಆರು ಮಂದಿ ಗಾಯಗೊಡಿದ್ದಾರೆ.

ಅಗಲಿದ ನಾಯಕ ಹರನಾಥ ಚಂದ್ರಾ ಅವರ ಅಂತ್ಯಕ್ರಿಯೆಗಾಗಿ ಸಿದ್ಧತೆಗಳು ನಡೆಯುತ್ತಿದ್ದಾಗ ಕಾಂಗ್ರೆ ಗೂಂಡಾಗಳು ಈ ಆಕ್ರಮಣ ನಡೆಸಿದರು. ಶೇಖರನ್ನು ಅಟ್ಟಿಸಿಕೊಂಡು ಹೋದರು. ಆತ ಆಶ್ರಯ ಪಡೆದ ಮನೆ ಬಾಗಿಲನ್ನು ಒಡೆದು ನುಗ್ಗಿದ ದುಷ್ಕರ್ಮಿಗಳು ಶೇಖರನ್ನು ಕೊಚ್ಚಿಕೊಂದು ಹಾಕಿದರು. ಶೇಖರ ರಕ್ಷಣೆಗೆ ಧಾವಿಸಿದವರ ಮೇಲೆ ಹಲ್ಲೆ ಮಾಡಿದಾಗ ಆರು ಮಂದಿ ಗಾಯಗೊಂಡರು.

ಪರಿಶಿಶಿಷ್ಟರ ರಕ್ಷಣೆ ಮಹತ್ವದ ತೀರ್ಪು

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯುವ ಸಂಬಂಧದ ಕಾನೂನಿನ ನಿಯಮಗಳನ್ವಯ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿದ ಮೊತ್ತ ಮೊದಲ ಪ್ರಕರಣ ಕೇರಳದಲ್ಲಿ ದಾಖಲಾಗಿದೆ.

ಸೆಪ್ಟೆಂಬರ್ 29 ರಂದು ಇಂಥ ಒಂದು ತೀರ್ಪನ್ನು ನ್ಯಾಯಾಲಯ ನೀಡಿತು.

ಸಂಬಂದಿತ ಆರೋಪಿ ಆದಿವಾಸಿ ಮಹಿಳೆಯೊಬ್ಬರ ಮನೆಯನ್ನು ಸುಟ್ಟು ಹಾಕಿದ ಆರೋಪ ಸಾಬೀತಾಗಿದ್ದು ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 7,500 ರೂ. ಗಳ ದಂಡವನ್ನು ವಿಧಿಸಲಾಗಿದೆ.

ಅಪರಾಧಿ ದಂಡವನ್ನು ಕಟ್ಟಿದರೆ ಸಂತ್ರಸ್ತ ಆದಿವಾಸಿ ಮಹಿಳೆ 5,000 ರೂ. ಪರಿಹಾರ ಪಡೆಯಲಿದ್ದಾರೆ. ಆತ ದಂಡವನ್ನು ಕಟ್ಟದಿದ್ದರೆ ಸೆರೆವಾಸವನ್ನು ಎರಡು ವರ್ಷ ವಿಸ್ತರಿಸಲಾಗುತ್ತದೆ.

ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶಕ್ಕೆ ಒತ್ತಾಯಿಸಿ ಪಿಕೆಟಿಂಗ್

ತುಮಕೂರು : ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವಂತೆ ಒತ್ತಾಯಿಸಿ ಎಸ್.ಎಫ್.ಐ., ಡಿ.ವೈ.ಎಫ್.ಐನ 36 ಮಂದಿ ಕಾರ್ಯಕರ್ತರು ಇಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಛೇರಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ಪಿಕೆಟಿಂಗ್ ಮಾಡುತ್ತಿದ್ದ ಕಾರ್ಯಕರ್ತರನ್ನುದ್ದೇಶಿಸಿ ಎಸ್.ಎಫ್.ಐನ ರಾಜ್ಯ ಸಹ ಕಾರ್ಯದರ್ಶಿ ಈ ಬಸವರಾಜು ಮಾತನಾಡಿ ಜನತೆಯ ಹಣದಿಂದ ಬೆಳೆದ ಮಠ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳು ಸುಪ್ರೀಂ ಕೋರ್ಟ್ ತೀರ್ಪಿಗೆ ಬೆಲೆ ಕೊಡದೆ ಶೇ. 50 ರಷ್ಟು ಸೀಟು ಕೇಳುತ್ತಿರುವುದು, ನ್ಯಾಯಯುತವಲ್ಲ.



ಇಂತಹ ಬ್ಲಾಕ್‌ಮೇಲ್‌ಗೆ ಸರ್ಕಾರ ಮಣಿದು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುತ್ತಿದೆ ಎಂದರು. ಅಲ್ಲದೆ ಹಿಂದಿ ಕಡ್ಡಾಯ ಹಾಗೂ ಏರಿಸಿರುವ ಪಿ.ಯು.ಸಿ. ಪದವಿ ಶುಲ್ಕವನ್ನು ಸಹ ಹಿಂತೆಗೆದುಕ್ಕೊಳ್ಳುವಂತೆ ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಸ್ವತಂತ್ರ ಹೋರಾಟಗಾರರಾದ ಕೆ.ವಿ. ಕೃಷ್ಣಸ್ವಾಮಿ, ಸ.ವಿ. ಓದ, ಸಂಚಾಲಕ ಹೆಚ್. ವಿ. ಮಂಜುನಾಥ್, ಡಿ.ವೈ.ಎಫ್.ಐನ ಬಿ. ಉಮೇಶ್. ಎಸ್.ಎಫ್.ಐನ ಜಿಲ್ಲಾಧ್ಯಕ್ಷ, ಕೆ. ಎನ್. ಉಮೇಶ್, ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿದರು.

ಸ್ವಾವಲಂಬನೆಗಾಗಿ ಧರಣೆ

ದೇಶದ ಸ್ವಾವಲಂಬನೆ ಉಳಿವಿಗಾಗಿ ಒತ್ತಾಯಿಸಿ ಗಾಂಧಿ ಜಯಂತಿ ಅಂಗವಾಗಿ ಅ.2 ರಂದು ತುಮಕೂರಿನ ಸ್ವಾತಂತ್ರ ಚೌಕದಲ್ಲಿ ಧರಣೆಯು ಯಶಸ್ವಿಯಾಗಿ ನಡೆಯಿತು.

ಬೆಳಿಗ್ಗೆ 10 ರಿಂದ ಸಂಜೆ 4 ರ ತನಕ ನಡೆದ ಈ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ವಿಮಾ ನೌಕರರು, ಆಟೋ ಚಾಲಕರು, ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಕಾರ್ಯಕರ್ತರು ಭಾಗವಹಿಸಿದರು.

ಧರಣೆಯನ್ನುದ್ದೇಶಿಸಿ ಮಾತನಾಡಿದ ಸ್ವಾತಂತ್ರ್ಯ ಹೋರಾಟಗಾರರೂ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಗಳೂ ಆದ ಕಾಂ. ಹೆಚ್.ಸಿ. ಚನ್ನಪ್ಪನವರು, ಬಹುರಾಷ್ಟ್ರೀಯ ಸಂಸ್ಥೆಯಾದ ಕಾರ್ಗಿಲ್‌ನಂತಹ ಅನೇಕ ಸಂಸ್ಥೆಗಳಿಗೆ ಭಾರತದಲ್ಲಿ ತಳವೂರಲು ಅವಕಾಶಮಾಡಿಕೊಡುವ ಮೂಲಕ ಕೇಂದ್ರ ಸರ್ಕಾರ ಸ್ವಾವಲಂಬಿಯನ್ನೇ ಮಾರಲು ಹೊರಟಿದೆ. ಡಂಕೆಲ್ ಪ್ರಸ್ತಾಪಗಳ ಮೂಲಕ ಮುಂದುವರೆದ ರಾಷ್ಟ್ರಗಳು ನಮ್ಮ ದೇಶದ ಎಲ್ಲ ವಿಭಾಗದಲ್ಲೂ ಹತೋಟಿ ಸಾಧಿಸಹೊರಟಿವೆ. ಇದರ ವಿರುದ್ಧ ಹೋರಾಟ ಅಗತ್ಯವೆಂದರು.

ಕಾರ್ಯಕ್ರಮದಲ್ಲಿ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಈ. ಬಸವರಾಜು, ಕಾರ್ಯದರ್ಶಿ ಸೈಯದ್ ಮುಜೀಬ್, ಜಿಲ್ಲಾಧ್ಯಕ್ಷ ಕೆ.ಎನ್. ಉಮೇಶ್, ಡಿ.ವೈ.ಎಫ್.ಐ ಕಾರ್ಯದರ್ಶಿ ಬಿ. ಉಮೇಶ್, ಬಿ.ಡಿ.ಎ. ಆರ್.ಡಿ.ಯು.ನ ಕಾರ್ಯದರ್ಶಿ ಎಂ.ಎನ್. ಚಲುವರಾಜು, ವಿಮಾನೌಕರರ ಸಂಘದ ಜಿ.ಕೆ. ಗಂಗಾಧರ್, ಸ್ವಾತಂತ್ರ ಹೋರಾಟಗಾರ ಟಿ.ಕೆ. ಗೋವಿಂದ ರಾಜು ಮಾತನಾಡಿದರು.

ಭೂಕಂಪ ಸಂತ್ರಸ್ಥರಿಗೆ ಹಣ-ಬಟ್ಟೆ ಸಂಗ್ರಹಣೆ

ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಕೆಲ ಭಾಗಗಳಲ್ಲಿ ನಡೆದ ಭೂಕಂಪದಿಂದ ನೊಂದ ಜನರಿಗೆ ಹಣ ಮತ್ತು ಬಟ್ಟೆಗಳನ್ನು ಗಾಂಧಿ ಜಯಂತಿಯಂದು ತುಮಕೂರಿನಲ್ಲಿ ಸಂಗ್ರಹಿಸಲಾಯ್ತು ಗಾಂಧಿ ಜಯಂತಿಯ ನಂತರ ಈ ಬಗ್ಗೆ ಮನವಿ ಮಾಡಿದ ತುಮಕೂರು ಜಿಲ್ಲಾಧಿಕಾರಿಗಳು ವಿವಿಧ ಸಂಘ ಸಂಸ್ಥೆಗಳ, ಅಧಿಕಾರಿಗಳ 8 ತಂಡಗಳನ್ನು ರಚಿಸಿದರು. ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಈ. ಬಸವರಾಜು, ಮತ್ತು ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ಅವರಿದ್ದ ತಂಡದಲ್ಲಿ 1674 ರೂ ಮತ್ತು ಮೂರು ಮೂಟೆ ಬಟ್ಟೆಗಳನ್ನು ಸಂಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ನೀಡಿದರು. ಇದೇ ದಿನ ಎಲ್ಲ ತಂಡಗಳೂ ಸೇರಿದಂತೆ 1.2 ಲಕ್ಷ ಹಣ, 50 ಸಾವಿರ ಬೆಲೆಬಾಳುವ ಬಟ್ಟೆ ಇತರ ವಸ್ತುಗಳನ್ನು ಸಂಗ್ರಹಿಸಿದರು.

ಪದವಿ ಶುಲ್ಕ ಹೆಚ್ಚಳ ವಿರೋಧಿಸಿ ತಾಲ್ಲೂಕು ಕಛೇರಿ ಮುತ್ತಿಗೆ

ತುರುವೇಕೆರೆ: ಎಸ್.ಎಫ್.ಐ ನೇತೃತ್ವದಲ್ಲಿ ಅಕ್ಟೋಬರ್ ಒಂದರಂದು ತಾಲ್ಲೂಕು ಕಛೇರಿಯನ್ನು ಸುಮಾರು ಒಂದೂವರೆಗಂಟೆ ಕಾಲಮುತ್ತಿಗೆ ಹಾಕಲಾಯಿತು. ಈ ಸಭೆಯನ್ನು ಉದ್ದೇಶಿಸಿ ತಾಲ್ಲೂಕು ಕಾರ್ಯದರ್ಶಿ ಅಲ್ಲಾ ಬಕಾಶ್‌ರವರು ಮಾತನಾಡಿ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಪಟ್ಟ ಸುಪ್ರೀಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಬೇಕೆಂದು ಏರಿಸಿರುವ ಪದವಿ ಶುಲ್ಕವನ್ನು ಈ ಕೂಡಲೇ ಇಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ನಂತರ ತಾಲ್ಲೂಕು ಅಧ್ಯಕ್ಷರಾದ ಕಡೇಹಳ್ಳಿ ಶಿವರಾಮಯ್ಯ, ಸಹಕಾರ್ಯದರ್ಶಿ ಡಿ.ಎನ್. ಸತೀಶ್ ಚಂದ್ರೇಗೌಡ, ಮಹಮದ್ ಗೌಸ್, ಕುಮಾರ್ ಸ್ವಾಮಿ ಮಾತನಾಡಿದರು. ನಂತರ ಬಿ.ಕೆ. ಪ್ರೇಮಕುಮಾರ್‌ರವರು ಮನವಿಯನ್ನು ಓದಿ, ಶಿರಸ್ತೇದಾರ್ ಗೋಪಾಲಯ್ಯನವರಿಗೆ ಒಪ್ಪಿಸಿದರು. ಈ ಹೋರಾಟದಲ್ಲಿ ಎಸ್.ಎಫ್.ಐನ ಎಸ್.ವಿ. ರವಿ ಲೋಕೇಶ್, ಮಹಾದೇವಯ್ಯ, ಡಿ.ಎಸ್.ಎಸ್.ನ ನಂಜಮರಿರವರು ಉಪಸ್ಥಿತರಿದ್ದರು.

ಭೂಕಂಪ ಪರಿಹಾರ ತುರ್ತು ಕರ್ತವ್ಯ

ಎಸ್.ಎಫ್.ಐ. ಮನವಿ

ಮಹಾರಾಷ್ಟ್ರದ ಮರಾಠಾವಾಡ ಪ್ರದೇಶದಲ್ಲಿ ಹಾಗೂ ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಭೀಕರ ಭೂಕಂಪಕ್ಕೆ ಬಲಿಯಾದ ಸಾವಿರಾರು ಜನರಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಭೂಕಂಪ ಪರಿಹಾರ ನಿಧಿ ಸಂಗ್ರಹಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ನಿರ್ಧರಿಸಿದ್ದು ತಕ್ಷಣ ನಮ್ಮ ಕಾರ್ಯಕರ್ತರು ನಿಧಿ ಸಂಗ್ರಹಕ್ಕೆ ಬರಲಿದ್ದು ಜನತೆ ಉದಾರವಾಗಿ ಹಣ ಮತ್ತಿತರೆ ಸಹಾಯಗಳನ್ನು ನೀಡಬೇಕೆಂದು ವಿನಂತಿಸುತ್ತೇವೆ.

ಪರಿಹಾರ ನಿಧಿಗೆ ಹಣವನ್ನು 'ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ' ರಾಜ್ಯ ಸಮಿತಿಯ ಹೆಸರಿಗೆ ಡಿ.ಡಿ. ಅಥವಾ ಚೆಕ್ ಮೂಲಕ ಸಹ ಕಳುಹಿಸಬಹುದು. ಈ ಮುಂದಿನ ವಿಳಾಸಕ್ಕೆ ಎಸ್.ಎಫ್.ಐ ಕಛೇರಿ, ನಂ. 106, ರತನ್ ಮಹಲ್, ಮಲ್ಲೇಶ್ವರಂ ವೃತ್ತ, ಬೆಂಗಳೂರು-3

ಈ ಮಹಾನ್ ದುರಂತಕ್ಕೆ ಸಿಕ್ಕಿರುವ ಆ ಜನತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೀವ್ರಗತಿಯಲ್ಲಿ ಅಗತ್ಯ ಸಹಾಯ ಮತ್ತಿತರ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಸ್.ಎಫ್.ಐ ಆಗ್ರಪಡಿಸಿದೆ.

ಡಿ.ವೈ.ಎಫ್.ಐ ಮನವಿ

ಪೂರ್ವ ಮಹಾರಾಷ್ಟ್ರ ಪ್ರದೇಶದಲ್ಲಿ ಮತ್ತು ಕರ್ನಾಟಕವ ಉತ್ತರ ಜಿಲ್ಲೆಗಳಲ್ಲಿ ಭೀಕರ ಭೂಕಂಪಕ್ಕೆ 30 ಸಾವಿರಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದು ಡಿ.ವೈ.ಎಪ್.ಐ ಕರ್ನಾಟಕ ರಾಜ್ಯ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಸಂಕಷ್ಟಕ್ಕೀಡಾದ ಜನ ಸಾಮಾನ್ಯರಿಗೆ ತುರ್ತು ಸಹಾಯ ನೀಡುವುದು ಅವಶ್ಯವಾಗಿದ್ದು ಈ ಸಂಬಂಧ ಹಣ, ಬಟ್ಟೆ, ಬರೆ ಔಷಧ ವಸ್ತುಗಳನ್ನು ಸಂಗ್ರಹಿಸಲು ಡಿ.ವೈ.ಎಫ್.ಐ. ಕಾರ್ಯಕರ್ತರು ಜನರ ಬಳಿಗೆ ತೆರಳಲಿದ್ದು ಆ ಸಂದರ್ಭದಲ್ಲಿ ಸರ್ವ ವಿಧದ ಸಹಾಯ ನೀಡಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತದೆ. ಹಾಗೆಯೇ ನೇರವಾಗಿ ಸಹಾಯ ಕಳುಹಿಸುವವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

ಡಿ.ವೈ.ಎಫ್.ಐ ಕರ್ನಾಟಕ ರಾಜ್ಯ ಸಮಿತಿ, ರೂಂ. ನಂ. 106, ರತನ್ ಮಹಲ್, ಮಲ್ಲೇಶ್ವರಂ ಸರ್ಕಲ್, ಬೆಂಗಳೂರು-560 003.

ಈ ದುರಂತದಲ್ಲಿ ಕಷ್ಟ ನಷ್ಟಗಳಿಗೀಡಾದವರಿಗೆ ಸಮಗ್ರ ಪರಿಹಾರವನ್ನು ಈ ಕೂಡಲೇ ಒದಗಿಸಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಡಿ.ವೈ.ಎಫ್. ಐ ಒತ್ತಾಯಿಸಿದೆ.

ಯೆಲ್ಟ್‌ಸಿನ್ ಸರ್ವಾಧಿಕಾರಿ ರಾಕ್ಷಸೀಕೃತ್ಯಕ್ಕೆ ಜನತೆಯ ಸವಾಲು

ಪುಟ 1ರಿಂದ

ವಿರೋಧಿ ಆಜ್ಞೆಗೆ ಪಾರ್ಲಿಮೆಂಟು ಮಾತ್ರ ವಿರೋಧಿಸಿದ್ದಲ್ಲ. ಸಂವಿಧಾನಾತ್ಮಕವಾಗಿ ರಚಿತವಾದ ಕೋರ್ಟು, ಪ್ರಾದೇಶಿಕ ಸೋವಿಯೆತ್‌ಗಳು, ಹಲವಾರು ಸಾಮೂಹಿಕ ಸಂಘಟನೆಗಳು ವಿರೋಧಿಸಿದವು. ಭಾರಿ ಪ್ರದರ್ಶನಗಳು ನಡೆದವು. ಇಡೀ ದೇಶದಲ್ಲಿ ಕೇವಲ ಪಾರ್ಲಿಮೆಂಟು ಸದಸ್ಯರು ಮಾತ್ರವೇ ತನ್ನನ್ನು ವಿರೋಧಿಸುತ್ತಿದ್ದಾರೆ ಎಂಬುದಕ್ಕೆ ಉತ್ತರವೆಂಬಂತೆ ಮಾಸ್ಕೋದ ಬೀದಿಬೀದಿಗಳಲ್ಲಿ ಪ್ರದರ್ಶನಗಳು ನಡೆದವು. ಭದ್ರತಾ ಪಡೆಗಳೊಂದಿಗೆ ಜನ ಘರ್ಷಣೆಗೆ ನಿಂತರು. ಮಾಸ್ಕೋ ಮೇಯರ್ ಕಚೇರಿ ಹಾಗೂ ಟೆಲಿವಿಷನ್ ಸ್ಟೇಶನ್ ಜನರ ವಶವಾಯಿತು. ಇವೆಲ್ಲದರಲ್ಲಿ ಭಾಗವಹಿಸಿದ್ದು ಕಮ್ಯುನಿಸ್ಟರು, ಇತರ ರಾಷ್ಟ್ರೀಯವಾದಿ ಗುಂಪುಗಳ ಸದಸ್ಯರು ಮಾತ್ರವಲ್ಲ, ಸಾವಿರಾರು ಬಡ, ಮಧ್ಯಮವರ್ಗದ ಮಾಸ್ಕೋವಾಸಿಗಳು ಬೀದಿಗಿಳಿದು ಭಾಗವಹಿಸಿದರು. ಕಮ್ಯುನಿಸ್ಟರ ನಾಯಕತ್ವದ ಕಾರ್ಮಿಕರು ಇದರಲ್ಲಿ ಮುಂಚೂಣಿಯಲ್ಲಿದ್ದರು. ಈ ರೀತಿ ಬೀದಿಗಿಳಿದು ಯೆಲ್ಟ್‌ಸಿನ್ ಸರ್ವಾಧಿಕಾರದ ವಿರುದ್ಧ, ಪಾರ್ಲಿಮೆಂಟಿನ ಬೆಂಬಲವಾಗಿ ನಿಂತವರ. ಸಂಖ್ಯೆ ಗಣನೀಯವಾಗಿತ್ತು. 1991 ರಲ್ಲಿ ಯೆಲ್ಟ್‌ಸಿನ್ನರ ಬೆಂಬಲವಾಗಿ ಒಂದು ದಿನ ನಡೆಯಿತು ಎನ್ನಲಾದ ಪ್ರದರ್ಶನಗಳಿಗಿಂತ ಎಷ್ಟೋ ಪಟ್ಟು ಹೆಚ್ಚಾಗಿತ್ತು. ಇದು ಸುಮಾರು ಎರಡು ವಾರಗಳವರೆಗೆ ಸತತವಾಗಿ ನಡೆದ ಕಾರ್ಯಾಚರಣೆ ಪಾರ್ಲಿಮೆಂಟಿನ ಕಟ್ಟಡದ ಸುತ್ತಲಂತಲೂ ಹಗಲು ರಾತ್ರಿ ಭದ್ರತಾಪಡೆಗಳ ಬೆದರಿಕೆ [illegible]ದೆ ರಕ್ಷಣಾ ಪಡೆಗಳೂ, ಹಲವಾರು ಸಶಸ್ತ್ರ ಸ್ವಯಂ ಸೇವಕರು ಪಾರ್ಲಿಮೆಂಟಿನ ರಕ್ಷಣೆಗೆ ಟೊಂಕಕಟ್ಟಿ ನಿಂತರು.

ಮಾತುಕತೆಯ ನಾಟಕ

ಈ ರೀತಿಯ ರಾಜಕೀಯ ಸವಾಲಿಂದಾಗಿ, ಯೆಲ್ಟ್‌ಸಿನ್ ಎರಡು ಬಾರಿ ಶಸ್ತ್ರಾಸ್ತ್ರ ಒಪ್ಪಿಸಿ ಶರಣಾಗಿ ಇಲ್ಲವೆ ಮಿಲಿಟರಿ ಕಾರ್ಯಾಚರಣೆ ನಡೆಸಲಾಗುವುದು ಎಂಬ ಕೊನೆ ಎಚ್ಚರಿಕೆ ಅವಧಿ ಮುಂದೆ ಹಾಕಬೇಕಾಯಿತು. ರಶ್ಯನ್ ಚರ್ಚ್‌ನ ಮಧ್ಯಸ್ಥಿಕೆಯಲ್ಲಿ ಮಾತುಕತೆಗೂ ಒಪ್ಪಬೇಕಾಯಿತು. ಮಾತುಕತೆ ನಡೆದ ಒಂದೆರಡು ದಿನಗಳಲ್ಲಿ ವಿದ್ಯುತ್, ನೀರು, ಗ್ಯಾಸ್ ಸರಬರಾಜು ಪುನರಾರಂಭಿಸುವ ಮೂಲಕ ಪಾರ್ಲಿಮೆಂಟು ಸದಸ್ಯರನ್ನು ಗೆದ್ದುಕೊಳ್ಳುವ ಪ್ರಯತ್ನವೂ ನಡೆಯಿತು. ಸೆಪ್ಟೆಂಬರ್ 21 ರ ಆಜ್ಞೆ ವಾಪಸು ತೆಗೆದುಕೊಳ್ಳಬೇಕು ಎಂಬ ಪಾರ್ಲಿಮೆಂಟಿನ ಒಕ್ಕೊರಲಿನ ಬೇಡಿಕೆ ಒಪ್ಪಲು ಯೆಲ್ಟ್‌ಸಿನ್ ತಯಾರಿರಲಿಲ್ಲ. ರಶ್ಯನ್ ಚರ್ಚ್ ಹಾಗೂ ಕೈಗಾರಿಕೋದ್ಯಮಿಗಳು ಸಂಸ್ಥೆ ರೂಪಿಸಿದ ರಾಜಿ ಸೂತ್ರ ಯೆಲ್ಟ್‌ಸಿನ್ ಹಟದಿಂದ ಫಲಕಾರಿಯಾಗಲಿಲ್ಲ. ಸೆಪ್ಟೆಂಬರ್ 21 ರ ಆಜ್ಞೆ ಹಿಂದಕ್ಕೆ ತೆಗೆದುಕೊಳ್ಳುವುದು, ಪಾರ್ಲಿಮೆಂಟು ಹಾಗೂ ಅಧ್ಯಕ್ಷೀಯ ಚುನಾವಣೆ ಏಕಕಾಲದಲ್ಲಿ, ಪಾರ್ಲಿಮೆಂಟು ಯೆಲ್ಟ್‌ಸಿನ್ ಸಂವಿಧಾನವನ್ನು ಪರಿಶೀಲಿಸುವುದು- ಆ ರಾಜಿ ಸೂತ್ರದ ಮುಖ್ಯ ಅಂಶಗಳಾಗಿದ್ದವು. ಅಮೇರಿಕನ್ ಸರ್ಕಾರ ಹಾಗೂ ಜಿ-7 ಸಾಮ್ರಾಜ್ಯಶಾಹಿ ಕೂಟಕ್ಕೆ ಪರಿಸ್ಥಿತಿ ಕೈಮೀರುತ್ತಿದೆ ಎಂದು ಅನಿಸತೊಡಗಿತ್ತು. ಮಾಸ್ಕೋ ಆಚೆಗೆ ರಶ್ಯದ ಸೈಬಿರಿಯಾ ಹಾಗೂ ವಿರಾಲ್ ಪ್ರಾಂತ್ಯಗಳು ಕೇಂದ್ರದ ಅಧಿಕಾರ ಧಿಕ್ಕರಿಸುವ ಆತಂಕ ಹೆಚ್ಚುತ್ತಿತ್ತು. ಆದ್ದರಿಂದಲೇ ಪಾರ್ಲಿಮೆಂಟಿನ ಮೇಲೆ ಟ್ಯಾಂಕ್ ದಾಳಿ ನಡೆಸಬೇಕೆಂಬ ಒತ್ತಡ ಯೆಲ್ಟ್‌ಸಿನ್ ಮೇಲೆ ಹೆಚ್ಚಾಯಿತು. ಸೆಪ್ಟೆಂಬರ್ 21ರ ಸಂವಿಧಾನ-ವಿರೋಧಿ ಆಜ್ಞೆಯಿಂದ ಆರಂಭಿಸಿ ಪ್ರತಿದಿನದ ಕಾರ್ಯಾಚರಣೆ ಬಗ್ಗೆ ಯೆಲ್ಟ್‌ಸಿನ್ ಅಮೇರಿಕದ ಕ್ಲಿಂಟನ್ ಆಡಳಿತದ ಜತೆ ನೇರ ಪರಾಮರ್ಶೆ ಮಾಡಿ ಅನುಮತಿ ತೆಗೆದುಕೊಳ್ಳುತ್ತಿದ್ದರು. ಅಕ್ಟೋಬರ್ 4 ರ ರಕ್ತಪಾತದ ಬಗ್ಗೆ ಸಹ 'ಸಲಹೆ' 'ಅನುಮತಿ' ಬಂದಿದ್ದು ವಾಶಿಂಗ್ಟನ್‌ನಿಂದಲೇ ಅಮೇರಿಕನ್ ಸೇನಾಧ್ಯಕ್ಷ ಜನರಲ್ ಶಾಲಿಕಾಶ್‌ವಿಲ್ಲಿ, ಸೆಪ್ಟೆಂಬರ್ 22 ರಿಂದಲೇ ರಶ್ಯದ ಸೇನಾ ಮುಖ್ಯ ಕಚೇರಿಯೊಂದಿಗೆ ನೇರ ಸಂಪರ್ಕ ಹೊಂದಿದ್ದೆ ಎಂದು ಅಮೇರಿಕನ್ ಪಾರ್ಲಿಮೆಂಟರಿ ಸಮಿತಿಗೆ ಹೇಳಿದ್ದಾರೆ.

ರಾಕ್ಷಸೀ ಕೃತ್ಯ

ಆ ಮೇಲೆ ನಡೆದದ್ದು ಯೆಲ್ಟ್‌ಸಿನ್ನರಿಗೆ ಮಾತ್ರ ಸಾಧ್ಯವಿದ್ದ ರಾಕ್ಷಸೀ ಕೃತ್ಯ. ಪಾರ್ಲಿಮೆಂಟು ಭವನದ ಎಲ್ಲಾ ಕಡೆಯಿಂದ ಭಾರಿ ಟ್ಯಾಂಕ್ ದಾಳಿ ನಡೆಸಲಾಯಿತು. ಪಾರ್ಲಿಮೆಂಟು ಭವನದ ಹಲವಾರು ಮಹಡಿಗಳಲ್ಲಿ ಬೆಂಕಿ ಹತ್ತಿಕೊಂಡು ಉರಿಯಹತ್ತಿತು. ಟ್ಯಾಂಕ್ ದಾಳಿಯ ಮರೆಯಲ್ಲಿ ವಿಶೇಷ ತರಬೇತಿ ಪಡೆದ ಪಡೆಗಳು ಪಾರ್ಲಿಮೆಂಟು ಭವನಕ್ಕೆ ನುಗ್ಗಿದವು. ಈ 'ಸೂಪರ್ ಪವರ್' ಸೈನ್ಯಬಲದ ಎದುರಿಗೆ ಸಣ್ಣ ಶಸ್ತ್ರಾಸ್ತ್ರ ಹೊಂದಿದ್ದ ಸ್ವಯಂ ಸೇವಕ ಹಾಗೂ ಪಾರ್ಲಿಮೆಂಟು ರಕ್ಷಣಾ ಪಡೆಗಳು ಹೆಚ್ಚು ಕಾಲ ಪ್ರತಿರೋಧ ಒಡ್ಡುವುದು ಸಾಧ್ಯವಿರಲಿಲ್ಲ. ಆದರೂ 10 ಗಂಟೆಗಳಿಗೂ ಹೆಚ್ಚು ಕಾಲ ಕದನ ನಡೆಯಿತು. 500 ಕ್ಕೂ ಹೆಚ್ಚು ಜನ ಪಾರ್ಲಿಮೆಂಟಿನ ಭವನ ರಕ್ಷಣೆಗೆ ಪ್ರಾಣ ತೆತ್ತರು. ಇದು ಪ್ರತಿರೋಧದ ಗಂಭೀರತೆಯನ್ನು ತೋರಿಸುತ್ತದೆ. ಯೆಲ್ಟ್‌ಸಿನ್ನರ ಪಡೆಗಳು ಪಾರ್ಲಿಮೆಂಟು ಸದಸ್ಯರನ್ನು ಬಂಧಿಸಿದವು. ಪಾರ್ಲಿಮೆಂಟು ಅಧ್ಯಕ್ಷ ರುಸ್ಲನ್ ಖಸ್‌ಬುಲತೊವ್‌ರು ಕಾದಾಟದಲ್ಲಿ ಗಾಯಗೊಂಡಿದ್ದಾರೆಂದು ವರದಿಯಾಗಿದೆ. ಖಸ್‌ಬುಲತೊವ್ ಹಾಗೂ ಅಧ್ಯಕ್ಷ ರುತ್‌ಸ್ಕೊಯ್ ವಿಶೇಷ ಬಂಧೀಗ್ರಹದಲ್ಲಿಡಲಾಗಿದೆ ಎನ್ನಲಾಗಿದೆ.

ವಿಭಿನ್ನ ವ್ಯವಸ್ಥೆಗಳ ನಡುವೆ ಹೋರಾಟವಲ್ಲ

ಅಧ್ಯಕ್ಷ ಹಾಗೂ ಪಾರ್ಲಿಮೆಂಟಿನ ನಡುವಿನ ಘರ್ಷಣೆ ಎರಡು ವಿಭಿನ್ನ ಸಾಮಾಜಿಕ ವ್ಯವಸ್ಥೆ ಪ್ರತಿನಿಧಿಸುವ ಶಕ್ತಿಗಳ ನಡುವೆ ಹೋರಾಟವಲ್ಲ. 1991 ರಲ್ಲೇ ಈ ಹೋರಾಟದ ಫಲಿತಾಂಶ ನಿರ್ಧಾರಿತವಾಗಿದೆ. ಸಮಾಜವಾದಿ ವ್ಯವಸ್ಥೆ ಕಿತ್ತೊಗೆದು ಬೂರ್ಜ್ವಾ ವ್ಯವಸ್ಥೆ ಪುನಃಸ್ಥಾಪಿಸುವವರು ಅಧಿಕಾರಕ್ಕೆ ಬಂದಿದ್ದರು. ಅಕ್ಟೋಬರ್ 3-4ರ ಹಿಂಸಾತ್ಮಕ ಘರ್ಷಣೆ ಎರಡು ಬೆಳವಣಿಗೆಗಳ ಸಂಗಮದ ಫಲ. ಹಳೆಯ ರಾಜಕೀಯ ಹಂದರ ಉಳಿಸಿಕೊಳ್ಳುವ ಪ್ರಯತ್ನ ಒಂದೆಡೆಗಾದರೆ, ಅತ್ಯಂತ ಕ್ರೂರ ಬಂಡವಾಳಶಾಹಿಯಿಂದ ಬೆಂದ ಜನರ ಹೋರಾಟ ಇನ್ನೊಂದೆಡೆ.

ಮೊದಲನೆಯ ಬೆಳವಣಿಗೆಯ ಪ್ರತಿನಿಧಿಗಳು ಖಸ್‌ಬುಲಾತೋವ್ ಹಾಗೂ ರೂತ್‌ಸ್ಕೊಯ್. 1990-91 ರ ಸಂದಿಗ್ಧ ಸ್ಥಿತಿಯಲ್ಲಿ ಇವರು ಯೆಲ್ಟ್‌ಸಿನ್ ಬೆಂಬಲಿಗರು. ಅಧಿಕಾರ ಹಂಚಿಕೊಳ್ಳುವ ವಿಷಯದಲ್ಲಿ ಹಾಗೂ ಆರ್ಥಿಕ ಬದಲಾವಣೆಗಳ ವೇಗ ಹಾಗೂ ಪರಿಣಾಮಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಕಾಣಿಸಿಕೊಂಡವು. ಯೆಲ್ಟ್‌ಸಿನ್-ವಿರೋಧಿ ಗುಂಪಿನಲ್ಲಿ ಕಮ್ಯುನಿಸ್ಟರು ಇದ್ದರು. ಆದರೂ ಸಮಾಜವಾದಿ ವ್ಯವಸ್ಥೆಗೆ ಹೋರಾಡುವ ಕೂಟವಲ್ಲ ಇದು. ಎರಡನೆಯ ಬೆಳವಣಿಗೆ ಹೆಚ್ಚು ಗಮನಾರ್ಹವಾದುದ್ದು. ದುಡಿಯುವ ಸಮರಶೀಲ ಹೋರಾಟದಲ್ಲಿ ಭಾಗವಹಿಸುತ್ತಿರುವುದು ನಿಜವಾಗಿಯೂ ಗಮನಾರ್ಹವಾದ ಹೊಸ ಬೆಳವಣಿಗೆ. ಸೋವಿಯೆಟ್ ಒಕ್ಕೂಟದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಕಳಚಿಹಾಕುವುದು ಅಷ್ಟು ಸುಲಭದ ಕೆಲಸವಲ್ಲ. ಎಲ್ಲಾ ನ್ಯೂನತೆಗಳಿದ್ದರೂ ಅದು ದುಡಿಯುವ ಜನತೆಗೆ ಅನುಕೂಲಕರವಾಗಿದ್ದ ವ್ಯವಸ್ಥೆ. ಏಳು ದಶಕಗಳ ಸಮಾಜವಾದಿ ಸಾಧನೆಗಳನ್ನು ಅಳಿಸಿ ಹಾಕುವುದರ ವಿರುದ್ಧ, ದುಡಿಯುವ ಜನ ತೀವ್ರ ಪ್ರತಿರೋಧ ಒಡ್ಡುತ್ತಾರೆ. ಬಂಡವಾಳಶಾಹಿ ಪುನಃ ಸ್ಥಾಪನೆಯ ಹಾದಿ ದುರ್ಗಮ ಹಾದಿ ಎಂದು ಸಿಪಿಐ(ಎಂ) ಸಮಾಜವಾದಿ ಸೋವಿಯೆಟ್ ಒಕ್ಕೂಟದ ವಿಘಟನೆಯ ಬಗ್ಗೆ ಮಾಡಿದ ಅಂದಾಜು ಸರಿ ಇದೆ ಎಂದು ಈ ಬೆಳವಣಿಗೆಗಳು ತೋರಿಸಿವೆ.

ರಾಜಕೀಯ ಸಂಘರ್ಷ ಮುಂದುವರೆಯುತ್ತದೆ

ಈಗ ಅಧ್ಯಕ್ಷ ಯೆಲ್ಟ್‌ಸಿನ್‌ರ ಕೈ ಮೇಲಾದಂತೆ ಕಂಡರೂ ಈ ರಾಜಕೀಯ ಸಂಘರ್ಷ ನಿಂತಿಲ್ಲ. ಈಗಷ್ಟೇ ಆರಂಭವಾಗಿದೆ. ಮಾಸ್ಕೋದಲ್ಲಿ ಪಾರ್ಲಿಮೆಂಟು ತೆರವು ಮಾಡುವಷ್ಟು ಸೈನ್ಯದ ತುಕಡಿಗಳು ಅವರ ಆಜ್ಞೆ ಪಾಲಿಸಿವೆ. ಇಂತಹ ರಾಕ್ಷಸೀ ಕೃತ್ಯದಲ್ಲಿ ಪಾಲುಗೊಂಡಿವೆ. ಆದರೆ ಸೈನ್ಯದಲ್ಲಿ ದೊಡ್ಡ ವಿಭಾಗ ಯೆಲ್ಟ್‌ಸಿನ್‌ರ ನೀತಿಯಿಂದ ರೋಸಿದೆ. ಜನಾಂದೋಲನವನ್ನು ಬಲಪ್ರಯೋಗದಿಂದ ದಮನ ಮಾಡುವ ಸ್ಥಿತಿ ಬಂದರೆ ಸೈನ್ಯದ ದೊಡ್ಡ ವಿಭಾಗ ದಂಗೆ ಏಳುವ ಸಾಧ್ಯತೆ ಇದೆ. ರಾತ್ರಿ ಕರ್ಫ್ಯೂ, ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ವಿರೋಧ ಪಕ್ಷಗಳ ಪತ್ರಿಕೆಗಳು, ಕಛೇರಿಗಳಿಗೆ ಬೀಗಮುದ್ರೆ ಹಾಕಲಾಗಿದೆ. ಆದ್ದರಿಂದ ವಿರೋಧ ಪಕ್ಷ ಭೂಗತವಾಗಿ, ಗೆರಿಲ್ಲಾ ಹೋರಾಟ ಆರಂಭವಾಗುವ ಸಾಧ್ಯತೆ ಇದೆ. 80ಕ್ಕೂ ಹೆಚ್ಚು ಪ್ರದೇಶಗಳಲ್ಲೂ ಯೆಲ್ಟ್‌ಸಿನ್ ನೇಮಿತ ಮುಖ್ಯಸ್ಥರಿಗೂ ಅಲ್ಲಿನ ಪ್ರಾದೇಶಿಕ ಸೋವಿಯೆಟ್‌ಗಳಿಗೂ ಇದೇ ರೀತಿ ಘರ್ಷಣೆ ಇದೆ. ಅಲ್ಲೆಲ್ಲಾ ಬಲಪ್ರಯೋಗ ಅಗತ್ಯವಾದರೆ ಕಾನೂನು-ವ್ಯವಸ್ಥೆ ತೀರಾ ಹದಗೆಡಬಹುದು.

ಯೆಲ್ಟ್‌ಸಿನ್ ಯೋಜನೆ ಪ್ರಕಾರವೇ ಪಾರ್ಲಿಮೆಂಟಿಗೆ ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಬೇಕಾದಿತು. ಮೊದಲನೆಯದಾಗಿ ಯೆಲ್ಟ್‌ಸಿನ್ ಚುನಾವಣೆ ನಡೆಸುತ್ತಾರೋ ಇಲ್ಲವೋ ಎಂಬುದೇ ಸಂಶಯ. ಆಗ 'ಪ್ರಜಾಪ್ರಭುತ್ವ'ದ ಸೋಗಿಗೆ ಇನ್ನಷ್ಟು ಧಕ್ಕೆ ಬರುತ್ತದೆ. ಚುನಾವಣೆ ನಡೆಸಿದರೆ ಈಗಿನ ಪಾರ್ಲಿಮೆಂಟಿಗಿಂತಲೂ ಹೆಚ್ಚು 'ಮಾರುಕಟ್ಟೆ-ಆರ್ಥಿಕ ವಿರೋಧಿ' ಸದಸ್ಯರು ಆಯ್ಕೆಯಾಗುವ ಸಾಧ್ಯತೆ ಇಲ್ಲದಿಲ್ಲ. ಆದ್ದರಿಂದ ಯೆಲ್ಟ್‌ಸಿನ್‌ರು ರಾಜಕೀಯ ಹೋರಾಟ ಎದುರಿಸಬೇಕಾಗುತ್ತದೆ. ಪಾರ್ಲಿಮೆಂಟಿನ ರಕ್ಷಣೆಯಲ್ಲಿ ಸೋಲು ರಶ್ಯಾ ಹಾಗೂ ಇಡೀ ಜಗತ್ತಿನಲ್ಲಿ ಸಮಾಜವಾದಿ ಶಕ್ತಿಗಳನ್ನು ಕಂಗೆಡಿಸುವುದಿಲ್ಲ. ಬಂಡವಾಳಶಾಹಿಗೆ ಪ್ರತಿರೋಧ ಜೀವಂತವಾಗಿದೆ ಹಾಗೂ ಬೆಳೆಯುತ್ತದೆ. ಕಾರ್ಮಿಕರು, ನಿವೃತ್ತರು ಹಾಗೂ ಮಾಜಿ ಯೋಧರ, ಹೆಚ್ಚುತ್ತಿರುವ ದಾರಿದ್ರ್ಯ ರಶ್ಯನ್ ಮಹಿಳೆಯರ ದುಸ್ಥಿತಿ ಹಾಗೂ ರಶ್ಯನ್ ಮಾಫಿಯಾದ ಬಲದಲ್ಲಿ ಹೆಚ್ಚಳ-ಜನತೆಯ ದೃಢ ಪ್ರತಿಕ್ರಿಯೆಯನ್ನು ಸದಾ ಜೀವಂತವಾಗಿರುತ್ತದೆ.

ಶಿಕ್ಷಣದ ವ್ಯಾಪಾರೀಕರಣಕ್ಕೆ ಪ್ರೋತ್ಸಾಹ ನೀಡಿದ ತೀರ್ಪು - ಎಸ್.ಎಫ್.ಐ

ಕೇಂದ್ರ ಸರ್ಕಾರದ ಮಧ್ಯೆ ಪ್ರವೇಶದ ಕಾರಣ ಎನ್.ಆರ್.ಐ.ಗಳಿಗೆಂದು ಮೀಸಲಿಟ್ಟಿದ್ದ ಶೇ. 5 ಸೀಟುಗಳನ್ನು ಶೇ. 15 ಕ್ಕೆ ಏರಿಸಿ, ಅದನ್ನು ಭರ್ತಿಮಾಡಿಕೊಳ್ಳಲು ಖಾಸಗಿಯವರಿಗೆ ಅನುಮತಿ ನೀಡುವ ಹಾಗೂ ವೈದ್ಯಕ್ಷೇತ್ರೀಯ ಪದವಿಗೆ ವರ್ಷಕ್ಕೆ 1,40,000-00 1,2[illegible]00-00 ಹಾಗೂ ಒಂದು ಲಕ್ಷ ರೂಪಾಯಿಗಳು ಶುಲ್ಕವೆಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಶಿಕ್ಷಣದಲ್ಲಿ ವ್ಯಾಪಾರವನ್ನು ಕೊನೆಗಾಣಿಸಬೇಕೆಂಬ ಆಶಯದೊಂದಿಗೆ ಉನ್ನಿಕೃಷ್ಣನ್ ಕೇಸಿಗೆ ಸಂಬಂಧಿಸಿ ತಾನೇ ನೀಡಿದ್ದ ತೀರ್ಪಿಗೆ ಸಂಪೂರ್ಣ ವಿರುದ್ಧವಾದ ತೀರ್ಪಾಗಿದೆ.

ದೇಶದ ಸಾಮಾನ್ಯ ಜನತೆಗೆ ವೃತ್ತಿಪರ ಶಿಕ್ಷಣ ಲಭಿಸಬೇಕೆಂಬ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಾರವನ್ನು ನಿಯಂತ್ರಿಸಬೇಕೆನ್ನುವುದರಲ್ಲಿ ಸುಪ್ರೀಂ ಕೋರ್ಟ್‌ಗೆ ಪ್ರಾಮಾಣಿಕ ಕಳಕಳಿ ಕಾಳಜಿ ಇದ್ದರೆ ತನ್ನ ಹಿಂದಿನ ತೀರ್ಪಿಗೆ ನ್ಯಾಯಾಲಯ ಬದ್ಧವಾಗಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿ ಆಗ್ರಹಿಸಿದೆ.

ಎನ್.ಆರ್.ಐ.ಗಳಿಗೆ ಸಂಬಂಧಿಸಿದ ಈ ತೀರ್ಪಿಗೆ ಕಾರಣವಾದ ಕೇಂದ್ರ ಸರ್ಕಾರದ ಕ್ರಮ ಶಿಕ್ಷಣವನ್ನು ಖಾಸಗೀಕರಣ ಮಾಡುವ ತನ್ನ ನೀತಿಯ ಭಾಗವಾಗಿದೆಯೆಂದು ಎಸ್.ಎಫ್.ಐ ಭಾವಿಸಿದೆ. ದುಬಾರಿ ಶುಲ್ಕಗಳ ಮೂಲಕ ಹಾಗೂ ಶೇ. 15ರಷ್ಟು ಸೀಟುಗಳಲ್ಲಿ ತಮ್ಮ ದಂಧೆಯನ್ನು ಮುಂದುವರಿಸಬಹುದೆಂಬ ಸಂತೋಷದಿಂದ ನ್ಯಾಯಾಲಯದ ಬಗ್ಗೆ ಇರುವ 'ಗೌರವ' ಇತ್ಯಾದಿ ನಯವಂಚಕ ಮಾತುಗಳನ್ನಾಡುತ್ತಿರುವ ಶಿಕ್ಷಣದ ವ್ಯಾಪಾರಿಗಳ ವರ್ತನೆಯನ್ನು ಎಸ್.ಎಫ್.ಐ ಖಂಡಿಸಿದೆ.

"ಉಚಿತ" ಹಾಗೂ "ಪೇಮೆಂಟ್" ಸೀಟುಗಳಲ್ಲಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯಲು ಅವಕಾಶವಾಗುವಂತೆ ಪ್ರವೇಶದ ಕೊನೆಯ ದಿನಾಂಕ ಗಡುವನ್ನು ವಿಸ್ತರಿಸಬೇಕೆಂದು, ತನ್ನ ಹಿಂದಿನ ತೀರ್ಪಿಗೆ ಬದ್ಧವಾಗಿ ಖಾಸಗಿಯವರಿಗೆ ಆಯ್ಕೆಯ ಅಧಿಕಾರ ನೀಡಬಾರದೆಂದು ಹಾಗೂ ನ್ಯಾಯಯುತ ಶುಲ್ಕ ನಿಗದಿಯ ಅಧಿಕಾರ ರಾಜ್ಯ ಸರ್ಕಾರಗಳಿಗೆ ನೀಡಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ನ್ಯಾಯಾಲಯದ [illegible]

ಬೇಡಿಕೆಗಳ ಈಡೇರಿಕೆಗೆ ಅನಿರ್ದಿಷ್ಟ ಧರಣಿ

ಶಹಾಪುರ: ಸ್ಥಳೀಯ ಜೂನಿಯರ್ ಕಾಲೇಜಿನಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಲು ಹಾಗೂ ಇತಿಹಾಸದ ಉಪನ್ಯಾಸಕರ ನೇಮಕಾತಿಯನ್ನು ತಕ್ಷಣವೇ ಮಾಡಲು ಅನೇಕ ವರ್ಷಗಳಿಂದ ಮನವಿ ಹಾಗೂ ಇನ್ನಿತರ ಪ್ರತಿಭಟನೆಗಳ ಮೂಲಕ ಒತ್ತಾಯಿಸಿದರೂ ಅದು ಬಗೆಹರಿದಿಲ್ಲ. ಈ ಅವ್ಯವಸ್ಥೆಗೆ ಕಿವುಡಾಗಿರುವ ಅಧಿಕಾರಿಗಳನ್ನು ಎಚ್ಚರಿಸಲು ಎಸ್.ಎಫ್.ಐನ ತಾಲೂಕು ಸಮಿತಿ ಆಶ್ರಯದಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು 21.9.93 ರಿಂದ ನಡೆಸಲಾಗುತ್ತಿದೆ.

1984 ರಿಂದಲೇ ಭೌತಶಾಸ್ತ್ರದ ಉಪನ್ಯಾಸಕರ ಕೊರತೆ ಇದ್ದುದೇ ಅಲ್ಲದೆ ಇಲ್ಲಿಯವರೆಗೂ ಇತಿಹಾಸದ ಉಪನ್ಯಾಸಕರ ಗೈರುಹಾಜರಿ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯನ್ನುಂಟುಮಾಡಿದೆ. ವಿದ್ಯಾರ್ಥಿಗಳಿಗೆ ಶಾಲಾ ಆವರಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು, ಆಟದ ಮೈದಾನದ ವ್ಯವಸ್ಥೆಗಾಗಿ, ಹಾಸ್ಟೆಲ್‌ನಲ್ಲಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸುವುದರ ಬಗ್ಗೆ ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿ ಇಲ್ಲಿಯ ತನಕ ನೋಟ್ ಪುಸ್ತಕಗಳನ್ನು ವಿತರಿಸದಿರುವುದರ ಬಗ್ಗೆ ತೀವ್ರ ಗಮನ ಕೊಡಲು ಹರಿಸುವಂತೆ ಒತ್ತಾಯಿಸಲಾಗಿದೆ. ಈ ಬಗ್ಗೆ ಇಲ್ಲಿಯವರೆಗೂ ತಳೆದ ನಿರಾಸಕ್ತಿಯನ್ನೇ ಮುಂದುವರೆಸಿದರೆ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಉಗ್ರ ಪ್ರತಿಭಟನೆಯನ್ನು ನಡೆಸುವುದಾಗಿ ಧರಣಿನಿರತ ವಿದ್ಯಾರ್ಥಿಗಳು ಎಚ್ಚರಿಸಿದ್ದಾರೆ.

ಶಹಾಪುರ : ಇಲ್ಲಿನ ಹೈಸ್ಕೂಲ್ ವಿದ್ಯಾರ್ಥಿಗಳ ಎಸ್.ಎಫ್.ಐ ಹೈಸ್ಕೂಲ್ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಅಬ್ದುಲ್ ಬಾಷಾ ಟಿ. ವಡಿಗೇರಾ, ಕಾರ್ಯದರ್ಶಿಯಾಗಿ ಶಿವಪ್ಪ ದೋರನಹಳ್ಳಿ, ಉಪಾಧ್ಯಕ್ಷರಾಗಿ 4 ಜನರನ್ನು ಸಹ ಕಾರ್ಯದರ್ಶಿಗಳಾಗಿ ಆರು ಜನರನ್ನು ಆಯ್ಕೆ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ವರದಕ್ಷಿಣೆ ಕಿರುಕುಳದಿಂದ ನಿಧನ

[illegible] ಮಂಡ್ಯ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾದ ಕಾಂ. ಹನುಮಂತುರವರ ತಂಗಿಯಾದ ಚಿಕ್ಕ ಹನುಮಮ್ಮನವರು ಗಂಡನ ಮನೆಯವರ ಕಿರುಕುಳದಿಂದ ದಿನಾಂಕ 14.9.1993 ರಂದು ನಿಧನರಾಗಿದ್ದಾರೆ. ಈ ನಿಧನಕ್ಕೆ ಎಸ್.ಎಫ್.ಐ ಮಂಡ್ಯ ಜಿಲ್ಲಾ ಸಮಿತಿಯು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಕಾಲೇಜಿಗೆ ಬೀಗ ಮುದ್ರೆ ಈಡೇರಿದ ಬೇಡಿಕೆಗಳು

ರಾಯಚೂರು: ಇಲ್ಲಿನ ಜವಾಹರ ನಗರ ಪದವಿ ಪೂರ್ವ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರೇ ಇಲ್ಲದೆ ಹಲವು ತಿಂಗಳು ಕಳೆದು ಹೋದರು ಕಾಲೇಜಿನ ವ್ಯವಸ್ಥಾಪಕರ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪ್ರತಿ ಕಾಲೇಜಿಗೂ ಅವಶ್ಯವಾದ ಲೈಬ್ರರಿ ಹಾಗೂ ಇನ್ನಿತರ ಕನಿಷ್ಠ ಸೌಲಭ್ಯಗಳನ್ನು ಈಡೇರಿಸಲು ಎಸ್.ಎಫ್.ಐ . ರಾಯಚೂರು ಸಮಿತಿಯು ಆಗ್ರಹಿಸಿತ್ತು. ಆದರೆ ಕಾಲೇಜಿನ ವ್ಯವಸ್ಥಾಪಕರು ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಇದನ್ನು ಪ್ರತಿಭಟಿಸಿ 23.6.1993 ರಂದು ವಿದ್ಯಾರ್ಥಿಗಳು ಕಾಲೇಜನ್ನು ಬಹಿಷ್ಕರಿಸಿ ಕಾಲೇಜಿಗೆ ಬೀಗಮುದ್ರೆಯನ್ನು ಘೋಷಿಸಿದರು.

ನಂತರ ವಿದ್ಯಾರ್ಥಿಗಳು ಶಾಂತಿಯುತ ಧರಣಿಯನ್ನು ನಡೆಸಲಾರಂಭಿಸಿದರು. ಧರಣಿಕಾರರನ್ನುದ್ದೇಶಿಸಿ ರಾಯಚೂರು ಡಿ.ವೈ.ಎಫ್.ಐನ ಸತ್ಯನಾರಾಯಣ, ಬಿ. ಬಸವರಾಜ್ ಮುಂತಾದವರು ಮಾತನಾಡಿ ಶಿಕ್ಷಣ ರಂಗದಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಲು ವಿದ್ಯಾರ್ಥಿಗಳೇ ಮುಂದಾಗಬೇಕು. ತೀವ್ರ ಹೋರಾಟಗಳಿಂದ ಮಾತ್ರವೇ ನಮ್ಮ ಅವಶ್ಯಕತೆಗಳು ಈಡೇರುತ್ತವೆ ಎಂದು ತಿಳಿಸಿದರು.

ಧರಣಿ ನಡೆಯುತ್ತಿದ್ದ ಹಾಗೆಯೇ ವ್ಯವಸ್ಥಾಪಕರು ಕರೆದ ಸಭೆಯಲ್ಲಿ ಎಸ್.ಎಫ್.ಐನ ಎಸ್. ಮಾರುತಿ, ಆನಂದ, ರವಿ, ಯಲ್ಲಪ್ಪ, ಪೂರ್ಣಿಮಾ, ಅರುಣ ಮುಂತಾದವರು ಭಾಗವಹಿಸಿ ಎಲ್ಲಾ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು. ಕಾಲೇಜಿನ ವ್ಯವಸ್ಥಾಪಕರು ತಕ್ಷಣವೇ ಇಂಗ್ಲೀಷ್ ಉಪನ್ಯಾಸಕರ ನೇಮಕಾತಿಯನ್ನು ಮಾಡಿ, ಇನ್ನಿತರ ಬೇಡಿಕೆಗಳನ್ನು ಒಂದು ತಿಂಗಳೊಳಗ ಈಡೇರಿಸುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು. ಅದನ್ನು ಲಿಖಿತ ರೂಪದಲ್ಲಿ ಪಡೆದ ನಂತರ ಧರಣಿಯನ್ನು ಹಿಂಪಡೆಯಲಾಯಿತು. ಈ ವಿಜಯಕ್ಕೆ ಕಾಲೇಜಿನ ವಿದ್ಯಾರ್ಥಿ ಸಮುದಾಯವನ್ನು ಎಸ್.ಎಫ್. ಐನ ರಾಯಚೂರು ತಾಲೂಕು ಸಮಿತಿಯ ಅಧ್ಯಕ್ಷರಾದ ಎಸ್. ಮಾರುತಿಯವರು ಅಭಿನಂದಿಸಿದ್ದಾರೆ.

ನ್ಯಾಯಯುತ ಬೇಡಿಕೆಗೆ ಬೀಗ ಮುದ್ರೆ ಮದ್ದೇ?

ಹಟ್ಟಿ: ಹಟ್ಟಿ ಚಿನ್ನದ ಗಣಿಯ ಕೆಲಸ ಮಾಡುವ ಕಾರ್ಮಿಕ ತಮ್ಮ ತುಟ್ಟಿಭತ್ಯೆಯ ಹೆಚ್ಚಿನ ವೇತನ ಹಾಗೂ ಬೋನಸ್ ನೀಡಬೇಕೆಂದು ಒತ್ತಾಯಿಸಿ ಧರಣಿ ಮಾಡಿದಾಗ ಚಿನ್ನದ ಗಣಿಯನ್ನು ಬೀಗ ಮುದ್ರೆ ಮಾಡಿರುವುದು ಅತ್ಯಂತ ಖಂಡನೀಯ.

ಇಂಜಿನಿಯರಿಂಗ್ ವಿಭಾಗದ ಕಾರ್ಮಿಕರು 19.9.1993 ರಂದು ಮುಖ್ಯ ಅಭಿಯಂತರ ಕಛೇರಿ ಮುಂದೆ ಧರಣಿ ನಡೆಸಿದರು. 3-4 ವರ್ಷಗಳಿದ ಬಾಕಿ ಇರುವ ತುಟ್ಟಿಭತ್ಯೆಯನ್ನು ನೀಡಲು ಕಾರ್ಮಿಕರು ಧರಣಿ ನಡೆಸಲು ನಿರ್ಧರಿಸಿ ಎಲ್ಲಾ ಅಧಿಕಾರಿಗಳನ್ನು ಘೇರಾವ್ ಮಾಡಿದರು. ಕಂಪನಿಯ ಆಡಳಿತಾಧಿಕಾರಿಯಾದ ಸಾಹುಕಾರ್ ತಿಳಿಸಿ ನೀವು ಮುಷ್ಕರಕ್ಕಿನಾದರೂ ಇಳಿದರೆ ಲಾಕೌಟ್ ಮಾಡುವುದಾಗಿ ಬೆದರಿಸಿದರು. ಆ ನಂತರ ಕಾರ್ಮಿಕರು ತಿಂಗಳಿಗೆ 80 ರಿಂದ 85ಕೆ. ಜಿಯವರೆಗೆ ಚಿನ್ನವನ್ನು ಕೊಟ್ಟರೆ ಮಾತ್ರ ತುಟ್ಟಿಭತ್ಯೆ ಹಾಗೂ ಬೋನಸ್ ನೀಡುವುದಾಗಿ ತಿಳಿಸಿದರು. ಆದರೆ ಇಲ್ಲಿನ ಕಾರ್ಖಾನೆಗೆ ಬರುತ್ತಿದ್ದ ಸಂಪನ್ಮೂಲ ಹಾಗೂ ಲಾಭಾಂಶಗಳನ್ನು ಮಂಗಳೂರು, ಚಿತ್ರದುರ್ಗ, ಕೆಲ್ಲಾಡಿ, ಗದಗ್, ಭೈರಾಪುರ ಮುಂತಾದ ಗಣಿಗಳಿಗೆ ವರ್ಗಾಯಿಸಿದ ಸರಕಾರದ ಧೋರಣೆ ಹಾಗೂ ಆಡಳಿತಾಧಿಕಾರಿಗಳು ಲಾಭಾಂಶವನ್ನು ಕೊಳ್ಳೆ ಹೊಡೆಯುವುದನ್ನು ಎತ್ತಿ ತೋರಿಸಿದ ಕಾರ್ಮಿಕರು ಧರಣಿಯನ್ನು ನಿಲ್ಲಿಸುವುದಿಲ್ಲ ತುಟ್ಟಿಭತ್ಯೆಯನ್ನು ನೀಡಿದರೆ ಮಾತ್ರ ನಿಲ್ಲಿಸುತ್ತೇವೆಂದು ಘೋಷಿಸಿದರು.

ಇದನ್ನು ಕೇಳಿದ ಆಡಳಿತಾಧಿಕಾರಿಗಳು ಲಿಂಗಸುಗೂರು ತಹಶೀಲ್ದಾರರ ಜೊತೆ ಸೇರಿ ನಿಷೇದಾಜ್ಞೆ ಜಾರಿ ಮಾಡಿ ಕಾರ್ಖಾನೆಯ ದ್ವಾರಗಳನ್ನು ಮುಚ್ಚಿಸಿ ಸುಮಾರು 3000 ಕಾರ್ಮಿಕರ ಮೇಲೆ ಅಶ್ರುವಾಯು ಸಿಡಿಸಿ, ಲಾಠಿಚಾರ್ಜ್ ಮಾಡಿ ಮುಗ್ಧ ಕಾರ್ಮಿಕರನ್ನು ಬಂಧಿಸಿದರು. ಈ ಬಗ್ಗೆ ಕಾರ್ಮಿಕರ ಮೇಲೆ ನಡೆದ ಈ ಧಾಳಿಯ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಸಿಐಟಿಯು ಹಟ್ಟಿಘಟಕ ಒತ್ತಾಯಿಸಿವೆ.

ಅನೇಕ ದಿನಪತ್ರಿಕೆಗಳಲ್ಲಿ ಆಡಳಿತ ವರ್ಗದವರು ಈ ಬೀಗಮುದ್ರೆಗೆ ಕಾರ್ಮಿಕರೇ ಕಾರಣವೆಂದು ಚಿತ್ರಿಸಿರುವುದು ನಿಜಕ್ಕೂ ವಿಷಾದನೀಯವಾಗಿದೆ. ಇಲ್ಲಿ ಕಾರ್ಮಿಕರು ಅನ್ಯಾಯಕ್ಕೊಳಪಟ್ಟು ಬೀಗಮುದ್ರೆಯಿಂದ ಕೆಲಸವೂ ಇಲ್ಲದೆ ಇರುವಾಗ ಕಾರ್ಮಿಕರೇ ಕಾರಣ ಎನ್ನುವುದು ಆಡಳಿತ ವರ್ಗದವರ ಪಿತೂರಿಯಷ್ಟೆ.

ಇದಲ್ಲದೆ ಪೋಲೀಸರು ತಮ್ಮ ಅಂಗಿಗಳನ್ನು ತಾವೇ ಹರಿದುಕೊಂಡು ಕಾರ್ಖಾನೆಯ ಕಿಟಕಿ ಗಾಜುಗಳನ್ನು ಒಡೆದು ಕಾರು ಜೀಪ್‌ಗಳ ಗ್ಲಾಸ್‌ಗಳನ್ನು ತಾವೇ ಒಡೆದು ಇದು ಕಾರ್ಮಿಕರ ಕೃತ್ಯವೆಂದು ಹೇಳಿರುವುದು ನಾಚಿಕೆಗೇಡಿನ ಸಂಗತಿಯೆಂದೂ ಇದರ ಬಗ್ಗೆ ಸ್ವತಃ ಜಿಲ್ಲಾಧಿಕಾರಿಗಳೇ ತನಿಖೆ ನಡೆಸಬೇಕೆಂದು ಸಿಐಟಿಯು ಹಟ್ಟಿ ಘಟಕದ ಮುಖಂಡರಾದ ಬಶೀರ್ ಅಹ್ಮದ್, ಅಮರ ಗುಂಡಪ್ಪ, ಶಿವಾನಂದ್, ಎಸುಪಾದಂ ಆಗ್ರಹಪಡಿಸಿದ್ದಾರೆ.

ಹೋರಾಟಕ್ಕೆ ಜಯ ರಾವ್ ನೀತಿಗೊಂದು ಸೋಲು
ಪೊಲಿಟ್‌ಬ್ಯೂರೋ

ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿ ಕಾರ್ಗಿಲ್ ಗುಜರಾತಿನ ಕಾಂಡ್ಲಾ ಬಂದರಿನಲ್ಲಿ ಉಪ್ಪು ತಯಾರಿಸುವ ಕಾರ್ಖಾನೆ ಹಾಕುವ ತನ್ನ ಯೋಜನೆಯನ್ನು ಕೈಬಿಡಲು ನಿರ್ಧರಿಸಿರುವುದು ದೇಶೀ ಸಣ್ಣ ಉದ್ಯಮವಲಯದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶವನ್ನು ವಿರೋಧಿಸುವವರಿಗೆ ದೊರೆತಿರುವ ಒಂದು ವಿಜಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ಮೂಲಕ ಬಹುರಾಷ್ಟ್ರೀಯ ಮುಕ್ತ ಪ್ರವೇಶ ನೀಡುವುದನ್ನು ವಿರುದ್ಧ ಎಲ್ಲಾ ಶಕ್ತಿಗಳು ಆರಂಭಿಸಿರುವ ಹೋರಾಟ ಒಂದು ಹೆಜ್ಜೆ ಮುಂದಿಟ್ಟಿವೆ ಎಂದಿರುವ ಪಿ.ಬಿ. ಕಾರ್ಗಿಲ್ ಯೋಜನೆಯ ವಿರುದ್ಧ ಮುಂಚೆಯಿಂದ ಕಾಂಡ್ಲಾದವರೆಗೆ ಜಾಥಾವನ್ನು ನಡೆಸಿದ ಯುವಜನ- ವಿದ್ಯಾರ್ಥಿಗಳು ಹಾಗೂ ಇತರೆಲ್ಲಾ ಸಂಘಟನೆಗಳನ್ನು ಅಭಿನಂದಿಸಿವೆ. ದೇಶದ ಆರ್ಥಿಕ ಹಿತಾಸಕ್ತಿಗಳಿಗೆ ಮಾರಕವಾಗುವ ವಲಯಗಳಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಪ್ರವೇಶ ನೀಡುವ ನೀತಿಯನ್ನು ನರಸಿಂಹರಾವ್ ಸರ್ಕಾರ ಮರುಪರಿಶೀಲಿಸಬೇಕೆಂದು ಪಿ.ಬಿ. ಹೇಳಿದೆ.

KRNM/BGS-405 MAG(2) PRB DECR 319-78/79

1994 ಭೂ ಆಕ್ರಮಣ ವರ್ಷ ಕೃಷಿ ಕಾರ್ಮಿಕ ಸಂಘದ ನಿರ್ಧಾರ

ನವಂಬರ್ 1-7 ಸಮರಶೀಲ ಕಾರ್ಯಾಚರಣೆಗಳ ಪ್ರಚಾರ ವಾರ

ಬ್ಲಾಕ್ ಮಟ್ಟದಲ್ಲಿ ಭೂಮಿತಿಗೆ ಮೀರಿದ ಹೆಚ್ಚುವರಿ ಭೂಮಿ, ಸರ್ಕಾರಿ ಬಂಜರು ಭೂಮಿ, ಕೃಷಿ ಯೋಗ್ಯ ಅರಣ್ಯ-ಭೂಮಿಗಳನ್ನು ಗುರುತಿಸುವ ಒಂದು ಬೃಹತ್ ಸಾಮೂಹಿಕ ಪ್ರಕ್ಷೋಭೆ ನಡೆಸಲು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜನರಲ್ ಕೌನ್ಸಿಲ್ ನಿರ್ಧರಿಸಿದೆ. ಈ ಅಕ್ಟೋಬರ್ ರಿಂದ ಡಿಸೆಂಬರ್‌ವರೆಗಿನ ಮೂರು ತಿಂಗಳ ಕಾಲ ಈ ಆಂದೋಲನ ದೇಶಾದ್ಯಂತ ನಡೆಯಲಿದೆ.

1994 ನ್ನು 'ಭೂ ಆಕ್ರಮಣ ವರ್ಷ' ಎಂದು ಘೋಷಿಸಬೇಕೆಂದೂ ಜನರಲ್ ಕೌನ್ಸಿಲ್ ಸೂಚಿಸಿತು. ಮುಂದಿನ ಮೂರು ತಿಂಗಳಲ್ಲಿ ಗುರುತಿಸಿದ ಜಮೀನನ್ನು ಆಕ್ರಮಿಸಿಕೊಳ್ಳುವ ಹೋರಾಟ 1994 ರಲ್ಲಿ ಆರಂಭವಾಗುವುದು. ಬಿಹಾರದ ಭೂ ಆಕ್ರಮಣ ಆಂದೋಲನದ ಅನುಭವದ ಆಧಾರದ ಮೇಲೆ ಇದು ನಡೆಯುತ್ತದೆ. ಎಲ್ಲಾ ಬಡರೈತರು, ಕೃಷಿ ಕೂಲಿಕಾರರು ಹಾಗೂ ಸಮಾನ ವಿಚಾರದ ಸಂಘಟನೆಗಳು ಈ ಆಂದೋಲನವನ್ನು ಯಶಸ್ವಿಗೊಳಿಸಲು ಮುಂದೆ ಬರಬೇಕೆಂದು ಜನರಲ್ ಕೌನ್ಸಿಲ್ ಕರೆ ನೀಡಿದೆ. ಸೆಪ್ಟೆಂಬರ್ 27-28 ರಂದು ನಡೆದ ಈ ಸಭೆ ನವಂಬರ್ 1 ರಿಂದ 7 ರವರೆಗೆ "ಸಮರಶೀಲ ಕಾರ್ಯಾಚರಣೆಗಳ ಸಕ್ರಿಯ ಪ್ರಕ್ಷೋಭೆಯ ವಾರ" ಎಂದು ಆಚರಿಸಲು ಕರೆ ನೀಡಿದೆ.

ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ ಶಾಸನ, ಅದರ ಜಾರಿಗೆ ವ್ಯವಸ್ಥೆ, ತೀವ್ರ ಭೂ ಸುಧಾರಣೆಗಳ ಮೂಲಕ ಭೂಮಿಯ ಪಟ್ಟಾ, ಮಹಿಳೆಯರಿಗೆ ಜಂಟಿ ಪಟ್ಟಾ, ಮನೆ ನಿವೇಶನ, ತಕ್ಷಣ ಕೃಷಿ ಕೂಲಿಕಾರರ ಬಗ್ಗೆ ಒಂದು ಸಮಗ್ರ ಕೇಂದ್ರೀಯ ಶಾಸನ, ವಿಕೇಂದ್ರೀಕೃತ ಗ್ರಾಮೀಣ ಸ್ವಯಂಮಾಡಳಿತದ ಸ್ಥಾಪನೆ ಇತ್ಯಾದಿ ಮುಖ್ಯ ಬೇಡಿಕೆಗಳು.

ಆಹಾರ ಬೆಳೆಗಳಿಂದ ಹಣದ ಬೆಳೆಗಳತ್ತ ಬದಲಿಸುವುದನ್ನು ನಿಲ್ಲಿಸಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಕೃಷಿ ಕೂಲಿಕಾರರಿಗೆ ಸಮಗ್ರ ವಸತಿ ಯೋಜನೆ, ಆದಿವಾಸಿಗಳ ಜಮೀನು ಪರಭಾರೆ ನಿಲ್ಲಿಸುವುದು, ಕೃಷಿ ಕೂಲಿಕಾರರಿಗೆ ಆರೋಗ್ಯ ಹಾಗೂ ಶಿಕ್ಷಣ ಸೌಲಭ್ಯಗಳು ಈ ಪ್ರಕ್ಷೋಭೆಯಲ್ಲಿನ ಇತರ ಬೇಡಿಕೆಗಳು.

ಭಾರತದಲ್ಲಿ ಚೀಣೀ ಕಮ್ಯುನಿಸ್ಟರ ನಿಯೋಗ

ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ಚೀಣೀ ಕಮ್ಯುನಿಸ್ಟ ಪಕ್ಷದ ಬಿಜಿಂಗ್ ಪಾರ್ಟಿ ಸ್ಕೂಲಿನ ಆರು ಸದಸ್ಯರ ನಿಯೋಗವೊಂದು ಸೆಪ್ಟೆಂಬರ್ 25ಹಾಗೂ 26 ರಂದು ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಪಕ್ಷದ ಶಿಕ್ಷಣ ಜವಾಬ್ದಾರಿ ನೋಡಿಕೊಳ್ಳುತ್ತಿರುವ ಪಿ. ರಾಮಚಂದ್ರನ್ ಅವರನ್ನು ಭೇಟಿ ಮಾಡಿತು. ಈ ನಿಯೋಗ ಭಾರತದ ವಿವಿಧ ಭಾಗಗಳಿಗೆ ಭೇಟಿ ನೀಡಲಿದ್ದು ಭಾರತದ ಸನ್ನಿವೇಶವನ್ನು ಮುಖ್ಯವಾಗಿ ಪಶ್ಚಿಮಬಂಗಾಳದ ಸ್ಥಳೀಯ ಆಡಳಿತದ ಅನುಭವವನ್ನು ತಿಳಿಯಲು ಹಾಗೂ ಸಿಪಿಐ(ಎಂ) ನೊಳಗೆ ಪಕ್ಷದ ಶಿಕ್ಷಣದ ಬಗ್ಗೆ ತಿಳಿಯಲು ಪ್ರಯತ್ನಿಸುತ್ತದೆ ಎಂದು ಹೇಳಲಾಗಿದೆ.

ಕಾಂ. ಪಿ. ರಾಮಚಂದ್ರನ್‌ರೊಂದಿಗೆ ಹಾಗೂ ಕಾಂ. ಸುರ್ಜಿತ್‌ರೊಂದಿಗೆ ಎರಡು ಗಂಟೆಗಳ ಕಾಲ ಮಾತುಕತೆ ನಡೆಸಿದ ನಿಯೋಗ ಪಕ್ಷದ ಪರಿಣತರೊಂದಿಗೂ ಭಾರತದ ಪರಿಸ್ಥಿತಿಯ ಬಗ್ಗೆ ಸಮಾಲೋಚನೆ ನಡೆಸಿತು.

ಕಲ್ಕತ್ತೆಯಲ್ಲಿ ಸೆಪ್ಟೆಂಬರ್ 30 ರಂದು ಪಶ್ಚಿಮಬಂಗಾಳದ ಎಡರಂಗ ಮುಖಂಡರೊಡನೆ ಚರ್ಚೆ ನಡೆಸಿದರು. ಚರ್ಚೆಯ ಸಂದರ್ಭದಲ್ಲಿ ವೈಜ್ಞಾನಿಕ ಸಮಾಜವಾದದ ಚೌಕಟ್ಟಿನಲ್ಲಿ ಆರ್ಥಿಕ ಪ್ರಗತಿಯನ್ನು ತೀವ್ರಗೊಳಿಸಲು ಸಮಾಜವಾದಿ ಮಾರುಕಟ್ಟೆ ಆರ್ಥಿಕವನ್ನು ತರಲಾಗಿದೆ ಎಂದರು. ಸುಮಾರು ಒಂದೂವರೆ ಗಂಟೆ ಕಾಲ ರಾಜಕೀಯ, ಆರ್ಥಿಕ, ಸೈದ್ಧಾಂತಿಕ ವಿಷಯಗಳ ಮೇಲೆ ವಿಚಾರ ವಿನಿಮಯ ನಡೆಯಿತು. ಇದಕ್ಕೆ ಮೊದಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರನ್ನು ನಿಯೋಗ ಭೇಟಿಯಾಯಿತು. ಚೀಣೀ ಪಾರ್ಟಿ ಶಾಲೆ ನಡೆಸುವಲ್ಲಿ ಅನುಭವ, ಅದರ ಪಠ್ಯಕ್ರಮ, ಸಮಾಜವಾದಿ ಮಾರುಕಟ್ಟೆ ಆರ್ಥಿಕದ ನೀತಿ ಬಗ್ಗೆ ನಿಯೋಗದ ಸದಸ್ಯರು ತಿಳಿಸಿದರು. ಈ ಶಾಲೆಯಲ್ಲಿ ಮಾರ್ಕ್ಸ್‌ವಾದ- ಲೆನಿನ್‌ವಾದದ ಮೂಲಭೂತ ಬೋಧನೆಗಳ ಮೇಲೆ ಅತೀ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ನಿಯೋಗದ ಮುಖಂಡ ವಾಂಗ್ ಝಿಕಾಯ್ ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇನ್ ದಾಸ್ ಗುಪ್ತಾ ಎಡರಂಗ ಸರಕಾರದ ಸತತ 16 ವರ್ಷ ಅಧಿಕಾರದಲ್ಲಿರುವ ಕಾರಣಗಳನ್ನು ವಿವರಿಸಿದರು.

ಚೀಣೀ ನಿಯೋಗ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೂ ಭೇಟಿ ನೀಡಿತು. ಅಲ್ಲಿಯ ವಿದ್ಯಾರ್ಥಿ ಸಂಘ, ಉಪಕುಲಪತಿ ಹಾಗೂ ವಿವಿ.ದ ಉಚ್ಚ ಅಧಿಕಾರಿಗಳು ಅವರಿಗೆ ಸ್ವಾಗತ ನೀಡಿದರು.

ಅಕ್ಟೋಬರ್ 1 ರಂದು ಚೀಣಾದ ಬಗ್ಗೆ ಒಂದು ಪ್ರದರ್ಶನವನ್ನು ಪಶ್ಚಿಮ ಬಂಗಾಳ ಸರಕಾರದ ಸಂಸ್ಕೃತಿ-ಪ್ರಸಾರ ಇಲಾಖೆ ಏರ್ಪಡಿಸಿತ್ತು.

ಕಲ್ಕತ್ತೆಯಿಂದ ನಿಯೋಗ ತಿರುವನಂತಪುರಕ್ಕೆ ಹೋಗಿ ಅಲ್ಲಿ ಕೇರಳದ ಖಾಯಂ ಶಾಲೆಗೆ ಭೇಟಿ ನೀಡಿ ಅಲ್ಲಿಂದ ಮದ್ರಾಸಿಗೆ ತೆರಳುವ ಕಾರ್ಯಕ್ರಮವಿತ್ತು.

ಕ್ಯೂಬಾದಲ್ಲಿ ಜ್ಯೋತಿ ಬಸು, ಯೆಚೂರಿ

ಪಶ್ಚಿಮಬಂಗಾಳದ ಮುಖ್ಯ ಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿ ಬಸು ಅಕ್ಟೋಬರ್ 20 ರಂದು ಹವಾನಾದಲ್ಲಿ ಕ್ಯೂಬಾದ ಅಧ್ಯಕ್ಷ ಫಿಡಲ್ ಕಾಸ್ಟ್ರೋರನ್ನು ಭೇಟಿ ಮಾಡಿದರು. ವಿವಿಧ ವಿಷಯಗಳ ತಾನೇ ಎರಡು ಗಂಟೆಗಳ ಕಾಲ ಅವರ ನಡುವೆ ಚರ್ಚೆ ನಡೆಯಿತು. ಇನ್ನೊಬ್ಬ ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರೂ ಅವರ ಜೊತೆ ಗಿದ್ದರು.

ಮಹಾರಾಷ್ಟ್ರದ ಭೀಕರ ಭೂಕಂಪಕ್ಕೆ ಬಲಿಯಾದವರಿಗೆ ಫಿಡೆಲ್ ಕಾಸ್ಟ್ರೋ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದರು. ಅಮೇರಿಕಾ ಹಾಕಿದ ಆರ್ಥಿಕ ನಿರ್ಬಂಧದಿಂದ ಅತ್ಯಂತ ಕಠಿಣ ಪರಿಸ್ಥಿತಿ ಉಂಟು ಮಾಡಿದ್ದರೂ ಕ್ಯೂಬಾ ಭೂಕಂಪ ಪೀಡಿತರಿಗೆ ತನ್ನ ಕೈಲಾದ ನೆರವು ನೀಡುತ್ತದೆ ಎಂದರು.

ಜ್ಯೋತಿಬಸುರವರನ್ನು "ವಯಸ್ಸಾದ ಯುವಕ" ಎನ್ನುತ್ತಾ "ಎಲ್ಲಕಡೆಯಿಂದಲೂ ಮುತ್ತಿಗೆಗೊಳಗಾದ ಕ್ಯೂಬಾದ ಜನರಿಗೆ ಭಾರತದಲ್ಲಿ ಆಹಾರ, ಔಷಧಿಗಳನ್ನು ಸಂಗ್ರಹಿಸಿ ಕಳಿಸಿಕೊಟ್ಟ ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ನಮ್ಮ ಹಾರ್ದಿಕ ಕೃತಜ್ಞತೆ. ನಿಮ್ಮ ನೆರವು ಸಕಾಲಿಕವಾಗಿತ್ತು" ಎಂದರು.

ಪಶ್ಚಿಮಬಂಗಾಳದಲ್ಲಿ ಹದಿನಾರು ವರ್ಷಗಳ ಕಾಲ ಸತತವಾಗಿ ಚುನಾವಣೆಗಳಲ್ಲಿ ಗೆಲ್ಲುತ್ತಾ ಬಂದಿರುವ ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಕ್ಯಾಸ್ಟ್ರೋ ಕಮ್ಯುನಿಸ್ಟರ ಈ ಸಾಧನೆಯನ್ನು ಬೇರೆ ದೇಶಗಳ ಕಮ್ಯುನಿಸ್ಟರು, ಪ್ರಗತಿಪರರು ಅಧ್ಯಯನ ಮಾಡಬೇಕು ಎಂದರು. ಪಶ್ಚಿಮಬಂಗಾಳದ ಆರ್ಥಿಕ ಅಬಿವೃದ್ಧಿ, ಮುಖ್ಯವಾಗಿ ಕೃಷಿ ರಂಗದಲ್ಲಿನ ಅಭಿವೃದ್ಧಿಯನ್ನು ಕ್ಯೂಬಾದ ಜನತೆ ಅಧ್ಯಯನ ಮಾಡಬೇಕು ಎಂದೂ ಅವರು ಹೇಳಿದರು.

"ಬಟ್ಟೆ ಉದ್ದಿಮೆಯಲ್ಲಿ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರ ಕಾರಣ"

-ಇಂಟಕ್ ಮುಖಂಡರ ಆಪಾದನೆ

ಬಟ್ಟೆ ಉದ್ದಿಮೆಯಲ್ಲಿ ಈಗ ಉಂಟಾಗಿರುವ ಬಿಕ್ಕಟ್ಟಿಗೆ ಕೇಂದ್ರ ನೀತಿಗಳೇ ಕಾರಣ ಎಂದು ಕಲ್ಕತ್ತೆಯಲ್ಲಿ ನಡೆದ ಒಂದು ಕಾರ್ಮಿಕ ಸಂಘಗಳ ಜಂಟಿ ಸಮಾವೇಶ ಆಪಾದಿಸಿದೆ. ಸಿಐಟಿಯು, ಇಂಟಕ್ ಹಾಗೂ ಬಟ್ಟೆ ಉದ್ದಿಮೆಯಲ್ಲಿನ ಏಳು ಸಂಘಟನೆಗಳು ಈ ಸಮಾವೇಶವನ್ನು ಏರ್ಪಡಿಸಿದವು.

ಸಮಾಲೋಚನೆಯಲ್ಲಿ ಮಾತನಾಡುತ್ತಾ ಇಂಟಕ್ ಮುಖಂಡ, ಸುಬ್ರತೋ ಮುಖರ್ಜಿ ಕೇದ್ರದಲ್ಲಿ ಬಂದ ಸರ್ಕಾರಗಳ ಕೈಗಾರಿಕಾ ನೀತಿಗಳೇ ಬಟ್ಟೆ ಉದ್ಯಮದಲ್ಲಿನ ಬಿಕ್ಕಟ್ಟಿಗೆ ಕಾರಣ ಎಂದರು. ಎನ್.ಟಿ.ಸಿ.ಯ ಆಡಳಿತ ವರ್ಗವನ್ನು ಕಟುವಾಗಿ ಟೀಕಿಸುತ್ತಾ ಕೇಂದ್ರ ಸರ್ಕಾರ ಸರಿಯಾದ ನೀತಿಗಳನ್ನು ಅನುಸರಿಸಿದ್ದರೆ. ಎನ್.ಟಿ.ಸಿಯಲ್ಲಿ ಈಗಿನ ತೀವ್ರ ತೊಂದರೆಗಳು ಬರುತ್ತಿರಲಿಲ್ಲ ಎಂದರು. ದೇಶಾದ್ಯಂತ ಒಂದೇ ಸಾರಿಗೆ ದರವೂ ಉದ್ದಿಮೆಗಳ ಬಿಕ್ಕಟ್ಟಿಗೆ ಒಂದು, ಮಹತ್ವದ ಕಾರಣ ಎಂದು ಬಂಗಾಲ ಪಾಟಿರೀಸ್‌ನ್ನು ಮುಚ್ಚಿದುದರ ಬಗ್ಗೆ ಟೀಕಿಸುತ್ತಾ ಈ ರಂಗದಲ್ಲಿ ಇನ್ನೊಂದು ಕಂಪೆನಿಗೆ ಏಕಸ್ವಾಮ್ಯ ನೀಡಲು ಹೀಗೆ ಮಾಡಲಾಯಿತು ಎಂದ ಅವರು ಕೇಂದ್ರದ ಕೈಗಾರಿಕಾ ನೀತಿಗಳ ವಿರುದ್ಧ ಚರ್ಚೆಗಳು ಮತ್ತು ಆಂದೋಲನಗಳು ಎರಡೂ ನಡೆಯಬೇಕು ಎಂದರು. ಸುಬ್ರತೋ ಮುಖರ್ಜಿ ಪಶ್ಚಿಮಬಂಗಾಳ ರಾಜ್ಯ ಕಾಂಗ್ರೆ ಉಪಾಧ್ಯಕ್ಷರೂ, ಕಾಂಗ್ರೆ ಎಂ.ಎಲ್.ಎ. ಕೂಡಾ ಆಗಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬೇಕು.

ಬಟ್ಟೆ ಉದ್ದಿಮೆಯಲ್ಲಿನ ಬಿಕ್ಕಟ್ಟು ಕಾರ್ಮಿಕವರ್ಗವನ್ನು ತಟ್ಟಿದೆ ಎಂದ ಸಿಐಟಿಯು ಪ. ಬಂಗಾಳ ರಾಜ್ಯ ಅಧ್ಯಕ್ಷ ನಿರೇನ್ ಘೋಷ್ ಕೇಂದ್ರ ಸರ್ಕಾರದ ನೀತಿಗಳಿಂದ ಪಶ್ಚಿಮ ಬಂಗಾಳಕ್ಕೆ ಹೊಸ ಕೈಗಾರಿಕೆ ಸಿಗದಂತಾಗಿದೆ ಎಂದರು. ಭಾರತದ ಮಾರುಕಟ್ಟೆಯನ್ನು ಸಾಮ್ರಾಜ್ಯಶಾಹಿಗಳಿಗೆ ತೆರೆಯುವ ಈಗಿನ ಕೇಂದ್ರ ಸರ್ಕಾರದ ನೀತಿಯಿಂದಾಗಿ ಕೈಗಾರಿಕಾ ಬಿಕ್ಕಟ್ಟು ಇನ್ನಷ್ಟು ಹೆಚ್ಚುತ್ತಿದೆ ಎಂದ ಅವರು ಈಗಿನ ಕೆಟ್ಟ ಪರಿಸ್ಥಿತಿಯಲ್ಲಿ ಕಾರ್ಮಿಕ ಆಂದೋಲನಗಳು ಇನ್ನು ಹೆಚ್ಚು ಜವಾಬ್ದಾರಿಯಿಂದ ತಮ್ಮ ಕರ್ತವ್ಯ ನೆರವೇರಿಸಬೇಕು ಎಂದರು.

ಪಶ್ಚಿಮ ಬಂಗಾಳ ಕಾರ್ಮಿಕ ಮಂತ್ರಿ ಶಾಂತಿ ಘಟಕ್, ಯು.ಟಿ.ಯು.ಸಿ.ಯ ಸುನಿಲ್ ಸೆನ್ ಗುಪ್ತಾ, ಯು.ಟಿ.ಯು.ಸಿ (ಲೆನಿನ್ ಸರಣಿ) ಯ ಪಥಿಕ್ ಘೋಷ್, ಬಿ.ಎಂ.ಎಸ್.ನ ವೈದ್ಯನಾಥ್ ರಾಯ್ ಹಾಗೂ ಇಂಟಕ್‌ನ ಲಾಲ್ ಬಹಾದ್ದೂರ್ ಸಿಂಗ್ ಕೂಡಾ ಸಮಾವೇಶದಲ್ಲಿ ಭಾಗವಹಿಸಿದ್ದರು. ●

ಚೀಣಾಕ್ಕೆ 2000 ಒಲಿಂಪಿಕ್ ನಡೆಸುವ ಅವಕಾಶ ಐವರು ಎಂ.ಪಿ.ಗಳ ಹೇಳಿಕೆ ಅತ್ಯಂತ ಖೇದಕರ

ಪೊಲಿಟ್‌ಬ್ಯೂರೋ

ಚೀಣಾ 2000 ಇಸ್ವಿಯಲ್ಲಿ ಒಲಿಂಪಿಕ್ ಪಂದ್ಯಗಳನ್ನು ನಡೆಸಲು ಅವಕಾಶ ಕೊಡಬಾರದೆಂಬ ಶ್ರೀಯುತ ಜಾರ್ಜ್ ಫರ್ನಾಂಡೀಸ್ ಹಾಗೂ ಇತರ ನಾಲ್ಕು ಎಂ. ಪಿ.ಗಳ ನಿಲುವು ಅತ್ಯಂತ ವ್ಯಥೆಯುಂಟುಮಾಡುವ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಅವರು ಇದಕ್ಕೆ ಕೊಟ್ಟಿರುವ ಕಾರಣ "ಮಾನವ ಹಕ್ಕುಗಳನ್ನು ಕುರಿತಂತೆ ಚೀಣಾದ ವರ್ತನೆ" ಅಮೇರಿಕಾ ಕೂಡಾ ಇದೇ ಕಾರಣ ಕೊಟ್ಟು ಒಲಂಪಿಕ್ ಆಂದೋಲನದ ಸದಸ್ಯ ದೇಶಗಳು ಚೀಣಾದ ತನಗೆ ಈ ಒಲಿಂಪಿಕ್ ನಡೆಸಲು ಅವಕಾಶ ಕೊಡದೇಕೆಂಬ ಹೇಳಿಕೆಯನ್ನು ತಿರಸ್ಕರಿಸುವಂತೆ ಯಾವ ನಾಚಿಕೆಯೂ ಇಲ್ಲದೆ ಬಹಿರಂಗವಾಗಿಯೇ ಆ ದೇಶಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದೆ ಎಂಬುದರತ್ತ ಪೊಲಿಟ್‌ಬ್ಯೂರೋ ಹೇಳಿಕೆ ಗಮನ ಸೆಳೆದಿದೆ.

ಈ ರೀತಿ ಅಮೇರಿಕಾ ನಿಲುವನ್ನು ಪ್ರತಿಧ್ವನಿಸುವುದು ಭಾರತದ ಹಿತಾಸಕ್ತಿಗಾಗಲೀ, ಭಾರತದ ಸೌರ್ವಭೌಮತ್ವವನ್ನು ರಕ್ಷಿಸುವ ಹೋರಾಟಕ್ಕಾಗಲೀ ಹೊಂದುವ ನಿಲುವಲ್ಲ. ಅಮೇರಿಕಾ ಇದೇ "ಮಾನವ ಹಕ್ಕುಗಳ" ಅಸ್ತ್ರವನ್ನು ಭಾರತದ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸಲು ಬಳಸುತ್ತಿದೆ. ಅಮೇರಿಕಾದ ನಿಲುವನ್ನು ಬೆಂಬಲಿಸುವವರು ಅದೇ ಅಮೇರಿಕಾ ಭಾರತದ "ಮಾನವ ಹಕ್ಕುಗಳ ಕುರಿತಾದ ವರ್ತನೆಗಳನ್ನು" ಖಂಡಿಸುತ್ತಿದೆಯಾದ್ದರಿಂದ ಭಾರತ ಯಾವುದೇ ಅಂತರ್ರಾಷ್ಟ್ರೀಯ ಪಂದ್ಯಾಟಗಳನ್ನು ನಡೆಸಬಾರದು ಎಂಬ ನಿಲುವು ತಳೆಯುತ್ತಾರೆಯೇ ಎಂದು ಪಿ.ಬಿ. ಹೇಳಿಕೆ ಪ್ರಶ್ನಿಸಿದೆ.

ಭಾರತ ಚೀಣಾಗಳ ನಡುವೆ ನಿಕಟ ಸಂಪರ್ಕ ಇರಬೇಕು ಎಂಬ ಭಾವನೆ ಭಾರತೀಯ ಜನತೆಯ ನಡುವೆ ವ್ಯಾಪಕವಾಗಿದೆ. ಅಮೇರಿಕಾ ಎಲ್ಲಾ ದೇಶಗಳಿಗೆ ಯಜಮಾನನಂತೆ ಆಜ್ಞೆ ನೀಡುತ್ತಿರುವ ಈಗಿನ ಅಂತರ್ರಾಷ್ಟ್ರೀಯ ಹಿನ್ನೆಲೆಯಲ್ಲಿ ಇದು ಇನ್ನೂ ವ್ಯಾಪಕವಾಗಿದೆ. ಈ ಐದು ಎಂ.ಪಿ.ಗಳ ಹೇಳಿಕೆ ಭಾರತೀಯರ ಭಾವನೆಗಳಿಗೆ ವ್ಯತಿರಿಕ್ತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಚುನಾವಣಾ ನಿಧಿಗೆ ಪಿ.ಬಿ. ಮನವಿ

ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ್, ಹಿಮಾಚಲಪ್ರದೇಶ ಹಾಗೂ ದಿಲ್ಲಿ ಕೇಂದ್ರಾಡಳಿತ ಪ್ರದೇಶದಲ್ಲಿ ಚುನಾವಣೆಗಳನ್ನು ಘೋಷಿಸಲಾಗಿದೆ. ದೇಶದ ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ರಾಜಕೀಯದ ದೃಷ್ಟಿಯಿಂದ ಇವು ಬಹಳ ಮಹತ್ವದ ಚುನಾವಣೆಗಳು. ಉತ್ತರ ಪ್ರದೇಶ ಸರಕಾರವನ್ನು ನಡೆಸುತ್ತಿದ್ದ ಡಿಸೆಂಬರ್ 6, 1992 ರ ನಾಚಿಕೆಗೇಡಿನ ಅಯೋಧ್ಯಾ ಘಟನೆಗಳಿಗೆ ಹಾಗೂ ನಂತರ ಭಯಾನಕ ರಕ್ತಪಾತಕ್ಕೆ ಕಾರಣವಾದ ಬಿಜೆಪಿ ಈ ಎಲ್ಲಾ ಕಡೆ ಮತ್ತೆ ಅಧಿಕಾರಕ್ಕೆ ಬರಲು ಸರ್ವಪ್ರಯತ್ನ ನಡೆಸುತ್ತಿದೆ.

ಈ ಕೋಮುವಾದೀ ಪಿಡುಗನ್ನು ಎದುರಿಸಲು, ಬಿಜೆಪಿಯನ್ನು ಮುಂಬರುವ ಚುನಾವಣೆಗಳಲ್ಲಿ ಸೋಲಿಸಲು ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆ ಬೆಸೆಯಬೇಕೆಂದು ಸಿಪಿಐ(ಎಂ) ಹಾಗೂ ಎಡಪಕ್ಷಗಳು ಕರೆ ನೀಡಿವೆ. ಕೋಮುವಾದದ ಅಪಾಯಗಳ ವಿರುದ್ಧ ಹಾಗೂ ಕಾಂಗ್ರೆಸ್‌ನ ಜನ-ವಿರೋಧಿ ನೀತಿಗಳ ವಿರುದ್ಧ ಜನಗಳನ್ನು ಪರಿಣಾಮಕಾರಿಯಾಗಿ ಅಣಿನೆರೆಸುವಲ್ಲಿ ಸಾಧ್ಯವಿದ್ದಲ್ಲಿ ಮಾತ್ರ ಎಡಪಕ್ಷಗಳ ಸಹಕಾರದೊಂದಿಗೆ ಸ್ಪರ್ಧಿಸಲು ಸಿಪಿಐ(ಎಂ) ನಿರ್ಧರಿಸಿದೆ. ಎಡಪಕ್ಷಗಳು ಈ ಚುನಾವಣೆಗಳು ನಡೆಯಲಿರುವ ಪ್ರದೇಶಗಳಲ್ಲಿ ದುರ್ಬಲವಾಗಿವೆ. ಆದರೆ ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಎದುರಿಸುವಲ್ಲಿ, ಸೋಲಿಸುವಲ್ಲಿ ಎಡಪಕ್ಷಗಳ ಮಧ್ಯಪ್ರವೇಶ ಮಹತ್ವಪೂರ್ಣವಾದದ್ದು. ಎಲ್ಲಾ ಜಾತ್ಯಾತೀತ ಶಕ್ತಿಗಳನ್ನು ಈ ದಿಕ್ಕಿನಲ್ಲಿ ಒಗ್ಗೂಡಿಸಲು ಸಿಪಿಐ(ಎಂ) ಪ್ರಯತ್ನಿಸುತ್ತಿದೆ.

ಆದ್ದರಿಂದ ಒಂದು ಪರಿಣಾಮಕಾರಿ ಚುನಾವಣಾ ಪ್ರಚಾರ ನಡೆಸಲು ನೆರವಾಗಿ, ಸಿಪಿಐ(ಎಂ)ನ ಚುನಾವಣಾ ನಿಧಿಗೆ ಉದಾರ ಕೊಡುಗೆ ನೀಡಿ ಎಂದು ಜಾತ್ಯಾತೀತ ಹಾಗೂ ಪ್ರಗತಿಪರ ಒಲವಿನ ಜನಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿನಂತಿಸಿಕೊಂಡಿದೆ. ಪಕ್ಷದ ಎಲ್ಲಾ ಘಟಕಗಳಿಗೂ ಕರೆ ನೀಡಿದೆ. ಈ ರೀತಿ ಸಂಗ್ರಹಿಸಿದ ಹಣವನ್ನು ಜಾತ್ಯಾತೀತತೆಯ ಹಾಗೂ ಜನಗಳ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳ ರಕ್ಷಣೆ ಕುರಿತಂತೆ ಪಕ್ಷದ ಮತ್ತು ಎಡಪಂಥೀಯರ ನಿಲುವನ್ನು ದೇಶದ ಮುಂದಿಡಲು, ಬಳಸಲಾಗುವುದು ಎಂದು ಪೊಲಿಟ್‌ಬ್ಯೂರೋ ಹೇಳಿದೆ. ●

ಇ.ಎಂ.ಎಸ್. ಲೇಖನಮಾಲೆ

ಪುಟ 2ರಿಂದ

ನೀತಿಯನ್ನು ಭಾರತದ ಪಕ್ಷದ ಕೇಂದ್ರ ಸಮಿತಿಯು ವಿರೋಧಿಸಿದೆ.

ಆದರೆ ನೆಹರೂ ಸರ್ಕಾರದ ಜೊತೆ ಭಾರತದ ಪಕ್ಷ ಅನುಸರಿಸು ಧೋರಣೆ ಬಗ್ಗೆ ವಿರೋಧವಿದ್ದಂತ ಒಂದು ವಿಭಾಗ ಅಧಿವೇಶನದ ಪ್ರತಿನಿಧಿಗಳಲ್ಲಿತ್ತು. ಹ್ಯಾರಿ ಪೊಲಿಟ್‌ರವರ ಭಾಷಣದ ತಿರುಳನ್ನು ಕಮ್ಯುನಿಸ್ಟ್ ಅಂತರರಾಷ್ಟ್ರೀಯ ನಾಯಕತ್ವದ ಒಂದು ನಿರ್ದೇಶನವನ್ನಾಗಿ ಅಂಗೀಕರಿಸಬೇಕೆಂದು ಅವರು ವಾದಿಸಿದರು. ಆದರೆ ಇದು ಸಾಧ್ಯವಿಲ್ಲವೆಂದು ಪ್ರತಿನಿಧಿಗಳ ಬಹುಮತ ವ್ಯಕ್ತಗೊಂಡಿತು. ಬಹುಮತದ ಧ್ವನಿಯಾಗಿ ಅಜಯ್‌ಘೋಷ್ ಮುಂಚೂಣಿಯಲ್ಲಿದ್ದರು.

ಈ ರೀತಿಯಾಗಿ ಭಾರತದ ಪಕ್ಷದ ಆಂತರಿಕ ಧೋರಣೆಯಲ್ಲಿ ಬದಲಾವಣೆ ತರಬೇಕೆಂದು ಹ್ಯಾರಿ ಪೊಲಿಟ್ ನಡೆಸಿದ ಪ್ರಯತ್ನ ವಿಫಲಗೊಂಡಿತು. ಆದರೆ ಮಧುರೈ ಅಧಿವೇಶನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳೆಲ್ಲರಿಗೂ ಹ್ಯಾರಿ ಪೊಲಿಟ್‌ರವರ ಭಾಗವಹಿಸುವಿಕೆ ತೃಪ್ತಿಕರವಾಗಿ ಕಂಡಿತು. ವಿಮಾನದಲ್ಲಿ ಮದ್ರಾಸ್‌ಗೆ ಬಂದು ಅಲ್ಲಿಂದ ರೈಲಿನಲ್ಲಿ ಮಧುರೈಗೆ ಬಂದು ಏಳು ದಿನಗಳ ಕಾಲ ಅಲ್ಲಿ ತಂಗಿದ್ದು ನಂತರ ವಾಪಸ್ಸು ಹೋದ ಹ್ಯಾರಿ ಪೊಲಿಟ್‌ರವರು ಮಧುರೈ ಅಧಿವೇಶನದ ಪ್ರತಿನಿಧಿಗಳ ಹೃದಯದಲ್ಲಿ ಒಂದು ಸ್ಥಾನವನ್ನು ಪಡೆದಿದ್ದಾರೆ. ಸಂಗಾತಿಗಳ ಮಧ್ಯದಲ್ಲಿ ಸಹಕರಿಸಿಕೊಂಡು ಹೋಗುವ ಅವರ ಜಾಣ್ಮೆ ಅಪಾರವಾದುದು. ತಮ್ಮ ಮಾತುಗಳಲ್ಲಿದ್ದ ಸರಸ ಶೈಲಿ, ಮತ್ತೊಬ್ಬರ ಹೃದಯವನ್ನು ಹೊಕ್ಕುವ ಚಾತುರ್ಯ ಮೆಚ್ಚುವಂತದು. ಉದಾಹರಣೆಗೆ ಕೆಳಗಿನ ಘಟನೆಯೊಂದನ್ನೂ ಈಗಲೂ ನೆನಪಿಸಿಕೊಳ್ಳುತ್ತೇನೆ.

ಭಾರತದ ಹಳೆಯ ಸಾಲಿನ ಕಮ್ಯುನಿಸ್ಟರಲ್ಲೊಬ್ಬರಾದ ಘಾಟೆಯವರ ಜೊತೆ ಹ್ಯಾರಿ ಪೊಲಿಟ್ ಮಾತನಾಡುತ್ತಾ, ಘಾಟೆಯವರು ಬೀಡಿ, ಸಿಗರೇಟು ಸೇದುವುದಿಲ್ಲ, ಮಾಂಸಾಹಾರ ತಿನ್ನುವುದಿಲ್ಲ, ಬ್ರಹ್ಮಚಾರಿ ಎನ್ನುವುದನ್ನು ತೀಕ್ಷ್ಣವಾಗಿ ಗ್ರಹಿಸಿದ ನಂತರ ಹೇಳಿದ್ದು "ಘಾಟೆ, ನೀನೇಕೆ ಬದುಕಬೇಕು?"

ಸಂಗಾತಿಗಳ ಜೊತೆ ನಕ್ಕು ನಲಿಯುತ್ತ ಅವರ ಜೊತೆ ಆತ್ಮೀಯವಾಗಿರುತ್ತಿದ್ದ ಹ್ಯಾರಿ ಪೊಲಿಟ್ ಆಂತರಿಕ ಸ್ಥಿತಿಗತಿಗಳನ್ನು ಅಭ್ಯಸಿಸಿ ಧೋರಣೆಗಳನ್ನು ರೂಪಿಸುತ್ತಿದ್ದ ಭಾರತದ ಪಕ್ಷದ ನಾಯಕರಾಗಿದ್ದ ಅಜಯ್ ಘೋಷ್ ಜೊತೆ ಸೈದ್ಧಾಂತಿಕ ಹೋರಾಟ ನಡೆಸಬೇಕಾಯ್ತು.

ಸಂಗ್ರಹ-ಭಾಷಾನುವಾದ
ಇ.ಕೆ.ಎನ್. ರಾಜನ್
ಪ್ರಕಾಶ್ ಕೆ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ.: 236462. ಸಂಪಾದಕರು : ಪಿ.ರಾಮಚಂದ್ರರಾವ್